madness may be there so long there is a desire in one to come into Legislature. I do not talk of the organisation and the system. What I am anxious about is this: let us forget party and class considerations and remember only one basic fact, namely, how best to secure a proper representation in councils which reflect the views of the voter of a constituency. The best method appears to be the single-member constituency.

Sri K. PUTTASWAMY.—Where do you put the Depressed Classes?

Janab MOHAMED HANEEF.—I will come to that. How are we going to provide for the Depressed Class? Not by making every Depressed Class man living in the North Pole and South Pole to go to the centre of the earth to exercise his vote. A Depressed Class seat in the Legislature has to be provided for in the 80 divisions into which the country would be divided. In the 80 divisions, 19 seats will be provided for. In addition a Depressed Class man is also given the chance to stand as a candidate in the general constituency. In the rest of the constituencies a Depressed Class member will have the right to stand as a candidate but not as a Depressed Class member. In those constituencies a Depressed Class man will exercise his vote and elect a candidate other than Depressed Class. So a Depressed Class man will have 80 chances in addition to 19. Even in those constituencies where he will not have the plural member representation, he will have the right to put up a candidate of his class as a general candidate so that the Depressed Class man will have all the opportunity of exercising his right as well as putting up a candidate in the general constituency. If he is content to have only representation in 19 constituencies, those depressed class people who are residents of the 19 constituencies, in which arrangement is made for the election of a depressed candidate alone, will have the chance to return a depressed class candidate and the rest of them will not have such a chance. Hon'ble Member Janab Imam said "is it just, is it right for depressed class people living in other constituencies to be deprived of the right to exercise vote in favour of a person of their own caste in other Constituencies?" Well, that question does not arise. That cannot be taken into consideration, for the Constitution has not made any provision for giving representation to depressed class in each and every constituency. It has only given reservation. Then it may be a separate electorate in some form. The merits and demerits of that question I am not here to go into. I have always said that there can be no compromise between general electorate and separate electorate. I as a Muslim have always felt that unless I have a separate electorate I will not be in a position to return a candidate in whom I have confidence and one who will reflect my views. Now the Constitution has taken away that right of separate electorate from me. I do not therefore wish to talk about separate electorate. By all means have joint electorate, but not reservation in any form. I do not want plural constituency. Let us forget that we belong to this or that community or we represent this or that interest. Let us all feel that we are Indians who are in duty bound to safeguard the interests of the country and eliminate all those forces that go against unity and if you are not able to safeguard the interests of the country, you will have to thank yourself for letting loose disruptive forces which will prove disastrous to the country. If I am a Muslim Leaguer I will come forward and say 'I am a Muslim Leaguer and have come forward to fight the election as such. If I have the guts I will do it. I am bound to do it. I will probably be forced to do it in the long run'. That is a different matter. Let us not have plural-member constituency. Let us have single member constituency (A Voice: for what benefit?) for the benefit of the country, for the benefit of all concerned, for the elimination of those differences that had hitherto divided us, for the dangers that surround us are very many to which I am not at present going to draw your attention. It may lead to one party remaining in power for all time; it may be the

members of the party in power are influenced by sectarian views. A section of the community might take advantage of the situation and try to perpetuate itself. I shall face that danger when it comes in the manner in which I should.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಶ್ರೀ ಜಿ. ವೀರಪ್ಪನವರು ಮುಂಡಿಸಿರತಕ್ಕ ತಿದ್ದುಪಡಿ ಸೂಚನೆಯನ್ನು ಸಮರ್ಥಿಸುತ್ತಾ, ಮತ್ತು ಜನಾಬ್ ಜೆ. ಮಹಮ್ಮದ್ ಇಮಾಂ ರವರು ಮತ್ತು ಜನಾಬ್ ನ್ಯಯದ್ ಅಬ್ದುರ್ ರಹಮಾನ್‌ರವರು ಮುಂಡಿಸಿರತಕ್ಕ ತಿದ್ದುಪಡಿ ಸೂಚನೆಗಳನ್ನು ವಿರೋಧಿಸುತ್ತಾ, ನಾನು ನಾಲ್ಕು ಮಾತುಗಳನ್ನಾಡಬೇಕಾಗಿದೆ. ಈಗ ನಾವೆಲ್ಲರೂ ಒಂದು ಮಹತ್ಕಾರ್ಯವನ್ನು ಮಾಡಲು ತೊಡಗಿದ್ದೇವೆ. ಈ ದಿವಸ ಇಂಡಿಯಾದೇಶದಲ್ಲಿ ಅಂದರೆ ಇಡೀ ಭರತಖಂಡದಲ್ಲಿ ರಾಜಕೀಯ ಬೆಳವಣಿಗೆಯು ಯಾವ ಯಾವ ರೀತಿ ಮುಂದುವರಿದುಕೊಂಡು ಹೋಗುತ್ತಿದೆಯೋ ಅದಕ್ಕನುಗುಣವಾಗಿ ನಾವೂ ಕೂಡ ಹೊಂದಿಕೊಂಡು ಮುಂದುವರಿಯಬೇಕೆಂಬ ಮನೋಭಾವವನ್ನು ಅವಲಂಬಿಸಿ ನಾವೆಲ್ಲರೂ ಈ ಮಹತ್ಕಾರ್ಯದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಅದೇ ರೀತಿ ನಾವೆಲ್ಲರೂ ಮನಸ್ಸುಮಾಡಬೇಕಾಗಿದೆ. ಹೀಗೆ ನಾವೆಲ್ಲರೂ ಒಂದು ತೀರ್ಮಾನಕ್ಕೆ ಬಂದು, ಆ ನಮ್ಮ ತೀರ್ಮಾನವನ್ನು ಕೇಂದ್ರ ಪಾರ್ಲಿಮೆಂಟಿಗೆ ಒಪ್ಪಿಸಿದನಂತರ ಅವರು ಅಖೈರಾಗಿ ಇದರ ತೀರ್ಮಾನವನ್ನು ಮಾಡಬೇಕೆಂಬುದಾಗಿ ಈಗ ಎಲ್ಲರಿಗೂ ಗೊತ್ತಾಗಿದೆ. ಆದಕಾರಣ ನಾವೀಗ ಏನೊಂದು ತೀರ್ಮಾನವನ್ನು ಅವರಿಗೆ ಕಳುಹಿಸಿಕೊಡುತ್ತೇವೆಯೋ ಅದು ಬಹಳ ಬೆಲೆಯುಳ್ಳದ್ದಾಗಿರುತ್ತದೆ. ಇಡೀ ಭರತಖಂಡದಲ್ಲೇ ಹಿಂದಿನಿಂದಲೂ ಶಾಸನ ಸಭೆಗಳಿಗೆ ಸದಸ್ಯರನ್ನು ಯಾವ ಮೂಲಾಧಾರಗಳ ಮೇಲೆ ಚುನಾವಣೆ ಮಾಡಿ ಕಳುಹಿಸಿ ಕೊಡುತ್ತಿದ್ದರೋ ಆ ಪದ್ಧತಿಯು ಇನ್ನು ಮುಂದಕ್ಕೆ ಇರುವುದಿಲ್ಲ. ಅದು ತಪ್ಪಿಹೋಗಿ ಒಂದು ನೂತನ ವ್ಯವಸ್ಥೆಯು ಈಗ ಏರ್ಪಡಬೇಕೆಂದು ಪ್ರಯತ್ನಗಳು ನಡೆದಿವೆ. ಆ ನೂತನ ವ್ಯವಸ್ಥೆಯಲ್ಲಿ ಈ ಸದಸ್ಯರುಗಳ ಚುನಾವಣೆ ಯಾವ ರೀತಿಯಲ್ಲಿ ನಡೆಯಬೇಕು, ಚುನಾವಣೆ ಕ್ಷೇತ್ರಗಳನ್ನು ಹೇಗೆ ನಿರ್ಧರಿಸಬೇಕು, ಇತ್ಯಾದಿ ವಿಚಾರಗಳನ್ನೆಲ್ಲಾ ವಿಮರ್ಶೆಮಾಡಿ ಈ ಬಗ್ಗೆ ಯಾರು ಯಾರಿಗೆ ಎಷ್ಟೆಷ್ಟು ಈ ನಂಬಂಧವಾಗಿ ರಕ್ಷಣೆಗಳನ್ನು ಕೊಡಬೇಕು ಎಂಬಿತ್ಯಾದಿ ವಿಷಯಗಳನ್ನು ಈಗ ಚರ್ಚೆಮಾಡಬೇಕಾದ್ದು ಅತ್ಯಾವಶ್ಯಕವಾಗಿದೆ. ಇದರಲ್ಲಿ ಒಂದು ಮುಖ್ಯವಾದ ಅಂಶವೇನೆಂದರೆ, ಹಿಂದೆ ಜನರಿದ್ದ ಪರಿಸ್ಥಿತಿ, ಈಗಿರತಕ್ಕದ್ದು ಇವೇ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಜೆಗಳ ಸ್ಥಿತಿಗತಿಗಳು ಉತ್ತಮಗೊಳ್ಳುವಂತೆ ಮುಂದಿನ ಬದಲಾವಣೆಮಾಡತಕ್ಕದ್ದೂ ಒಂದು. ಆದರೆ ಹೀಗೆ ಚುನಾವಣೆ ಕ್ಷೇತ್ರಗಳನ್ನೇ ವಿಭಜನೆಮಾಡುವಾಗ ಅಥವಾ ಅವುಗಳನ್ನು ನಿರ್ಧರಿಸುವಾಗ ನಾವೆಲ್ಲರೂ ಏನೊಂದು ಅಂಶವನ್ನು ನಮ್ಮ ದೃಷ್ಟಿಕೋಣದಲ್ಲಿಟ್ಟುಕೊಳ್ಳಬೇಕಾಗಿದೆಯೆಂದರೆ—"ಹೀಗೆ ಬದಲಾಯಿಸಿದರೆ, ನಾನು ಮುಂದಿನ ಚುನಾವಣೆಗಳಲ್ಲಿ ಬರಲು ಸಾಧ್ಯವೇ, ಅಥವಾ ನಮ್ಮವರು ಬರುವುದಕ್ಕೆ ಏನಾದರೂ ಅಡಚಣೆಗಳಾಗಬಹುದೇ, ಅಥವಾ ಹೀಗೆಮಾಡುವುದರಿಂದ ನಮ್ಮ ಪಾರ್ಟಿಗೆ ಏನಾದರೂ ತೊಂದರೆ ಆದೀತೇ" ಎಂಬ ಇತ್ಯಾದಿ ಸ್ವಾರ್ಥಮನೋಭಾವನೆಗಳಿಂದ ಕೂಡಿರಬಾರದು. ಇದಕ್ಕೆ ಪ್ರತಿಯಾಗಿ ದೇಶದ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮನ್ನು ಆರಿಸಿ ಕಳುಹಿಸಿಕೊಡತಕ್ಕ ಕ್ಷೇತ್ರದ ಪ್ರಜೆಗಳೆಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸಿ, ಅವರಿಗೇನು ಅನುಕೂಲತೆಗಳು ಆಗಬೇಕೆಂದು ಅವರು ನಮ್ಮಲ್ಲಿ ಯಾವ ಒಂದು ನಂಬಿಕೆ ವಿಶ್ವಾಸನಗಳನ್ನಿಟ್ಟು ಚುನಾಯಿಸಿ ಕಳುಹಿಸಿಕೊಡುತ್ತಾರೋ, ಅಂಥವರ ಅಶೋತ್ತರಗಳನ್ನು ಈಡೇರಿಸಿ ಎಲ್ಲರ ಅನುಕೂಲತೆಗೂ, ಹಿತಕ್ಕೂ ಸಾಧಕವಾಗುವಂತೆ ನಾವು ವರ್ತಿಸಬೇಕಾದ್ದೇ ಬಹಳ ಗಮನಾರ್ಹವಾದ ಅಂಶ. ಇದನ್ನು ನಾವೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಇನ್ನು ಚುನಾವಣೆ ವಿಧಾನಗಳ ವಿಚಾರದಲ್ಲಿ ಈಗ ಹಾಲಿ ನಡೆಯುತ್ತಿರುವ ಚುನಾವಣೆ ವಿಧಾನಗಳ ಪ್ರಕಾರ ಆನೆ, ಒಂಟೆ, ಕುದುರೆ, ಇತ್ಯಾದಿ ಗುರುತುಗಳ ಮೇರೆ ಅನೇಕ ಊಹಾಪೋಹಗಳನ್ನು ಕಟ್ಟಿ ಜನರ ಮನಸ್ಸನ್ನು ಭ್ರಾಂತಿ ಹಿಡಿಸಿ, ಅವರನ್ನು ಬೂತಿನ ಹತ್ತಿರಕ್ಕೆ ಎಳೆದುಕೊಂಡು ಬಂದು ಓಟನ್ನು ಪಡೆಯುತ್ತಿದ್ದಾರೆ. ಆದರೆ ಹಾಗೆ ತಮ್ಮ ಓಟನ್ನು ಚಲಾಯಿಸತಕ್ಕ ಸದಸ್ಯರಿಗೆ ಪಾತ್ರವಾಗಿಯೂ ಚುನಾಯಿಸಲ್ಪಡತಕ್ಕ ಸದಸ್ಯನ ಕುಲಗೋತ್ರಗಳ ವಿಷಯಗಳೊಂದೂ ಗೊತ್ತಿರುವುದಿಲ್ಲ, ಹೀಗೆ ಮತದಾರರು ಬಂದು ತಮ್ಮ ನಿರಾಳವಾದ ಮನಸ್ಸಿನಿಂದ ತಮ್ಮ ಮತದಾನ ಮಾಡತಕ್ಕಂಥ ಪರಿಸ್ಥಿತಿ ಈಗಿಲ್ಲ. ಇದರ ಜೊತೆಗೆ ಜನರು ಇನ್ನೂ ಅಷ್ಟು ವಿದ್ಯಾವಂತರಾಗಿಲ್ಲ. ಇವೇ ಮೊದಲಾದ ಅನೇಕ ದೋಷದೋಷಗಳಿರುವುದರಿಂದ ಇನ್ನು ಮುಂದಕ್ಕೆ ಮಾಡತಕ್ಕ ವಿಧಾನದಲ್ಲಿ ಚುನಾವಣಾ ಕ್ರಮವು ಅದಷ್ಟು ಸುಲಭವಾಗಿರಬೇಕೆಂಬುದು ನಿರ್ವಿವಾದವಾದ ವಿಷಯ. ಸಾಧ್ಯವಾದ ಮಟ್ಟಿಗೂ ಕೇವಲ ಅಕ್ಷರಸ್ಥನಲ್ಲದವನಿಗೂ ಕೂಡ ತನ್ನ ಮತದಾನವನ್ನು ತಾನು ಇತರರ ಸಹಾಯವಿಲ್ಲದೆ ತನ್ನ ಸ್ವಂತ ಬುದ್ಧಿಯ ಮೇರೆ ತಾನು ಚಲಾಯಿಸುವಷ್ಟು ಮಟ್ಟಿಗೆ ಇದನ್ನು ಸುಲಭರೀತಿಗೆ ತರಬೇಕಾಗಿದೆ. ಇನ್ನು ಮುಂದಕ್ಕಾದರೂ ಒಬ್ಬರ ಹೇಳಿಕೆಯ ಮೇರೆ ತಾನು ನಡೆಯದೆ ತನ್ನ ಸ್ವಂತ ಬುದ್ಧಿಯಿಂದ ವರ್ತಿಸುವಂತಿರಬೇಕು. ಆತನಿಗೆ, ತಾನು ಯಾರಿಗೆ ಮತದಾನ ಮಾಡಿದರೆ ಅವರು ಆತನ ಕಷ್ಟಗಳನ್ನು ನಿವಾರಣೆ ಮಾಡುತ್ತಾರೆಂದು ನಂಬಿಕೆ ಇರುತ್ತದೆಯೋ, ಮತ್ತು ಅಂಥಾ ಭರವಸೆಯಿರುತ್ತದೆಯೋ ಅವರಿಗೇ ಆತನು ಓಟುಮಾಡುವ ಹಾಗಿರಬೇಕು. ಅಂಥಾ ಪರಿಶ್ರಮ ಉಳ್ಳವನಿಗೇ ಆತನು ಓಟುಮಾಡುವುದಕ್ಕೆ ಅವಕಾಶ ವಿರಬೇಕು. ಇಂಥಾ ವಿಚಾರಗಳನ್ನೆಲ್ಲಾ ನಾವು ನಮ್ಮ ದೃಷ್ಟಿಯಲ್ಲಿಟ್ಟುಕೊಂಡು, ದೇಶಕ್ಕೆ ಹಿತವಾಗುವ ರೀತಿಯಲ್ಲಿ ನಾವೀಗ ಕ್ಷೇತ್ರ ವಿಭಜನೆಗಳನ್ನು ಮಾಡಬೇಕಾಗಿದೆ. ಈ ವಿಭಜನೆಯ ಬಗ್ಗೆ ಕೇಂದ್ರ ಸರ್ಕಾರದವರು ನಮಗೆ ಎರಡು ನಲಹೆಗಳನ್ನು ಮಾಡಿದ್ದಾರೆ. ಒಂದು ಬಹು ಸದಸ್ಯ ಕ್ಷೇತ್ರಗಳು ಮತ್ತೊಂದು ಏಕ ಸದಸ್ಯ ಕ್ಷೇತ್ರಗಳು ಎಂದು.

ಬಹು ಸದಸ್ಯ ಕ್ಷೇತ್ರಗಳೆಂದರೆ, ಒಂದೇ ಚುನಾವಣೆ ಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಾಗಿ, 2-4-8, ಹೀಗೆ ಓಟು 80-89-90 ಜನ ಸದಸ್ಯರನ್ನೂ ಒಂದೇ ಒಂದು ಕ್ಷೇತ್ರದಿಂದ ಚುನಾಯಿಸುವಂತೆ ಮಾಡತಕ್ಕದ್ದು. ಹೀಗೆ ಎಷ್ಟು ಜನ ಬೇಕಾದರೂ ಒಂದೇ ಕ್ಷೇತ್ರದಿಂದ ಚುನಾಯಿತರಾಗಿ ಬರಬಹುದು. ನಮ್ಮ ಮೈಸೂರು ಸಂಸ್ಥಾನವನ್ನು ಒಂದೇ ಚುನಾವಣೆ ಕ್ಷೇತ್ರವನ್ನಾಗಿ ಮಾಡಿ 99 ಜನ ಸದಸ್ಯರನ್ನು ಓಟ್ಸಾಗಿ ಚುನಾಯಿಸು

ವಂತೆ ಬೇಕಾದರೂ ಈ ವಿಧಾನದ ಪ್ರಕಾರ ಮಾಡ ಬಹುದು. ಅಥವಾ ಸಂಸ್ಥಾನವನ್ನು ಹತ್ತು ವಿಭಾಗ ವಾಗಿ ವಿಂಗಡಿಸಿ ಒಂದೊಂದು ವಿಭಾಗದಿಂದಲೂ ಹತ್ತು ಜನ ಸದಸ್ಯರು ಚುನಾಯಿತರಾಗಿ ಬರುವಂತೆ ಬೇಕಾದರೂ ಮಾಡಬಹುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಹತ್ತು ಭಾಗಗಳನ್ನು ಮತ್ತೆ ಎರಡೆರಡು ಸಬ್‌ಡಿವಿಜ್ಞಗಳಾಗಿ ಬೇಕಾದರೂ ವಿಭಾಗ ಮಾಡಬಹುದು. ಆಗ ಪ್ರತಿಯೊಂದು ಸಬ್ ಡಿವಿಜನ್ನಿನಿಂದಲೂ ಐದು ಜನ ಸದಸ್ಯರು ಚುನಾಯಿತರಾಗಿ ಬರುವಂತೆ ಬೇಕಾದರೂ ಮಾಡಬಹುದು.

ಇದರ ಸಾಧಕ ಬಾಧಕಗಳೇನಿವೆಯೆಂಬುದನ್ನು ನಾವು ಬಹಳ ನಿರ್ದಾಕ್ಷಿಣ್ಯ ಮನೋಭಾವದಿಂದ ನೋಡ ಬೇಕು. ಯಾವ ರೀತಿ ಇದನ್ನು ಸಾಧಿಸಬೇಕೆಂಬು ದನ್ನು ಚೆನ್ನಾಗಿ ಯೋಚನೆಮಾಡಬೇಕು. ಜನಾಬ್ ಸ್ಯೆಯದ್ ಅಬ್ದುರ್ ರಹಮಾನ್‌ರವರು ಪೊಲಿಟಿಕಲ್ ಮೈನಾರಿಟಿಯವರ ಹಿತವನ್ನು ಸಾಧಿಸಬೇಕೆಂದು ಹೇಳಿ ದರು. ಆದರೆ ದೇಶದಲ್ಲಿ ಬೆಂಬಲವಿಲ್ಲದವರಿಗೆ ಬೆಂಬಲ ಕೊಡುವುದರಿಂದ ಏನು ಪುರುಷಾರ್ಥ ಸಾಧಿಸಿದ ಹಾಗಾ ಯಿತು! ಜಾತಿ, ಮತದ ವಿಷಯವೇ ಬೇರೆ. ಇಷ್ಟು ಅವರಿಗೆ ಉತ್ತರ.

ಈಗ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಕೆಲವು ಕಡೆ ಇದೆ. ಅದರ ಅನುಭವ ನನಗಿದೆ. ಇನ್ನು ಕೆಲವು ಕಡೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇದೆ. ಅದರ ಅನುಭವವೂ ನನಗೆ ಗೊತ್ತು. ಆ ಎರಡುರೀತಿಯ ಕಾನ್ಸ್ಟಿಟ್ಯೂಯೆನ್ಸಿಗಳಲ್ಲೂ ಅನೇಕ ಕಡೆ ನಾನು ಚುನಾಯಿತನಾಗಿ ಬಂದಿದ್ದೇನೆ. ಆ ಅನುಭವದ ಮೇರೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಿಂದ ಪ್ರಯೋಜನವೇ ನೆಂದರೆ ಯಾವ ಮನುಷ್ಯನು ಯಾವ ಕ್ಷೇತ್ರದಿಂದ ಬರು ತ್ತಾನೋ ಅವನಿಗೆ ಆ ಕ್ಷೇತ್ರದ ಸಂಪೂರ್ಣ ಅರಿವು ಇರು ತ್ತದೆ ಮತ್ತು ಆ ಜನರ ವ್ಯಕ್ತಿ ಸಂಬಂಧವೂ ಇರುತ್ತದೆ. ಮತ್ತು ಯಾವ ಕ್ಷೇತ್ರದಿಂದ ಚುನಾಯಿತನಾಗಿ ಬರು ತ್ತಾನೆಯೋ ಅಲ್ಲಿಯ ಜನರ ಕಷ್ಟಸುಖಗಳನ್ನು ಯಾವ ತ್ತೂ ಅವನು ಮನಸ್ಸಿನಲ್ಲಿಟ್ಟು ಪ್ರತಿನಿಧಿಯಾಗಿ ಬಂದರೆ ಆ ಕ್ಷೇತ್ರ ಗೌರವವನ್ನು ಕಾಪಾಡಲು ಸಭೆಯ ಮುಂದೆ ಬೇಕಾದ್ದನ್ನು ಸಾಧಿಸಲು ಅವಕಾಶವಿರುತ್ತದೆ. ಇದಕ್ಕೆ ಕಾರಣ ಆ ಪ್ರದೇಶದ ಸಂಪೂರ್ಣ ಅರಿವು ಅವನಿಗಿರು ತ್ತದೆ. ಅದಕ್ಕೆ ಬದಲಾಗಿ ಎಂಟು ಹತ್ತು ಜನ ಸೇರಿ ಒಂದು ದೊಡ್ಡ ಕ್ಷೇತ್ರದಲ್ಲಿ ಚುನಾವಣೆಯಾದರೆ ಪಕ್ಷಗಳ ಪ್ರಕಾರ ಆಯಾ ಪಕ್ಷದವರು ತಮ್ಮವರಿಗೆ ಓಟುಕೊಡು ತ್ತಾರೆ. ಆಗ್ಗೆ ಒಬ್ಬೊಂಟಿಗರಿಗೆ ಕಷ್ಟ. ಅವರು ಪ್ರತಿ ಸ್ಪರ್ಧೆ ಮಾಡುವುದೂ ಕಷ್ಟ. ಅದು ಅನುಭವಿಸಿದವರಿಗೆ ಗೊತ್ತೇ ಹೊರತು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಆ ಮೇಲೆ ಉಮೇದುವಾರರಿಗೆ ಆ ಕ್ಷೇತ್ರದ ಪರಿಚಯ ಹೇಗಿರುತ್ತದೆಂಬ ವಿಷಯವನ್ನೂ ತಿಳಿಸಬೇಕಾಗಿದೆ. ಮೈಸೂರು ಜಿಲ್ಲೆಯು ಒಂದು ದೊಡ್ಡ ಕ್ಷೇತ್ರ. ಅದ ರಿಂದ ಚುನಾಯಿತನಾಗಿ ನಾನು ಬಂದಿದ್ದೇನೆ. ಆದರೆ ಏಳೆಂಟು ವರ್ಷಗಳಿಂದ ಆ ಪ್ರದೇಶದ ಅನೇಕ ಮೂರೆ ಗಳಿಗೆ ಏಳೆಂಟು ಹೋಗಿದ್ದರೂ ಇನ್ನೂ ಬಹಳ ಹಳ್ಳಿಗಳನ್ನು ನಾನು ನೋಡುವುದಕ್ಕೆ ಸಾಧ್ಯವಾಗಿಲ್ಲ. ನನಗೆ ಎಲ್ಲಾ ಅವಕಾಶವಿದ್ದರೂ ನಹ ಎಲ್ಲ ಕಡೆಗೂ ಹೋಗಿ ಬರಲು ಅನುಕೂಲವಾಗಲಿಲ್ಲ. ನಾನಾ ಕಾರಣಗಳ ದೆಸೆಯಿಂದ ಮೂರೆ ಮೂರೆಯ ಹಳ್ಳಿಗಳ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಹಾಗಿರುವಾಗ ಬಾಕಿಯವರ ಗತಿ ಯೇನು? ಪ್ರತ್ಯಕ್ಷವಾಗಿ ಜನರ ಸಂಪೂರ್ಣ ಪರಿಚಯ ಚುನಾವಣೆಗೆ ನಿಂತುಕೊಳ್ಳುವವರಿಗಿಲ್ಲದಿದ್ದರೆ ಪೂರ್ತಿ ಯಾಗಿ ಅವರು ತಮ್ಮ ಕ್ಷೇತ್ರಕ್ಕೆ ಸರಿಯಾದ ಸೇವೆಸಲ್ಲ ಸುವುದಕ್ಕೆ ಅವಕಾಶವಾಗುವುದಿಲ್ಲ ಮತ್ತು ಅವರಿಗೆ ಆ ಶಕ್ತಿ ಲಭಿಸುವುದಿಲ್ಲ. ಅದರಿಂದ ಸೇವೆಗೆ ಬದಲಾಗಿ ತೊಂದರೆಯಾಗುತ್ತದೆ. ಆದ್ದರಿಂದ ಮುಖ್ಯವಾದ ಅಂಶ ವನ್ನು ಗಮನಿಸಿ ಚುನಾವಣೆಗಳಿಗೆ ನಿಲ್ಲುವ ಕ್ಷೇತ್ರಗಳು ಚಿಕ್ಕದಾಗಿರುವಂತೆ ಮಾಡಬೇಕು. ಚುನಾಯಿತನಾಗು ವವನು ಒಬ್ಬನೇ ಆಗಿದ್ದರೆ ಆಗ ಆತನು ತನ್ನ ಕಡೆಯ ವರಿಗೆ ಸಂಪೂರ್ಣ ಜವಾಬ್ದಾರನಾಗಿರುತ್ತಾನೆ. ಅದಕ್ಕೆ ಪ್ರತಿಯಾಗಿ ಹತ್ತು ಜನರಿದ್ದರೆ ಆಗ ಜನರು ಯಾರನ್ನು ಕೇಳಬೇಕು? ನನ್ನನ್ನು ಕೇಳಿದರೆ ನನಗೆ ಸಂಬಂಧವಿಲ್ಲ ಎಂದು ನಾನು ಹೇಳಬಹುದು. ಇನ್ನೊ ಬ್ಬರೂ ಅದೇ ರೀತಿ ಹೇಳಬಹುದು. ಆದ್ದರಿಂದ ಇದನ್ನು ನಿವಾರಿಸಲು ಜವಾಬ್ದಾರಿಯು ನಿರ್ದಿಷ್ಟವಾಗಿರಬೇಕು. ಇಲ್ಲದೇ ಹೋದರೆ ಸದವಕಾಶವು ಸರಿಯಾಗಿ ದೊರೆಯು ವುದಿಲ್ಲ ಎಂದು ಹೇಳುತ್ತೇನೆ.

ಪ್ಲೂರರ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಿರುವುದ ರಿಂದ ತೊಂದರೆ ಹೆಚ್ಚು. ಜನರು ಹೋಗಿ ಪ್ರಚಾರ ಮಾಡಿ ಅನಕ್ಷರಸ್ಥರಾದವರನ್ನು ಮರುಳುಗೊಳಿಸಿ ತಮ್ಮ ಪಕ್ಷದವರಿಗೆ ಓಟು ಕೊಡುವಂತೆ ಮಾಡಲು ಭಯಪಡಿಸಬ ಹುದು. ಜನರ ಪರಿಚಯವೇ ಕೆಲವರಿಗಿರುವುದಿಲ್ಲ. ಅಂಥವರು ಸೇವಾ ಧುರೀಣರೆಂದು ಹೇಳಿಕೊಂಡು ತಮ್ಮದೇ ವೇದವಾಕ್ಯವಾಗಿ ಮಾಡಿಕೊಳ್ಳುತ್ತಾರೆ. ಅವರು ಜನರಲ್ಲಿ ಮಿಳಿತವಾಗಿಲ್ಲದಿದ್ದರೂ ದಾಕ್ಷಿಣ್ಯಕ್ಕಾಗಿ ಓಟು ಬರಬಹುದು. ಆದ್ದರಿಂದ ಪೂರ್ತಿಯಾಗಿ ವಿವೇಚ ನಾಶಕ್ತಿಯನ್ನು ಉಪಯೋಗಿಸಿ ಯಾರು ಚೆನ್ನಾಗಿ ಸೇವೆ ಮಾಡಬಲ್ಲರೋ ಮತ್ತು ಕ್ಷೇತ್ರವನ್ನು ಯಾರು ಚೆನ್ನಾಗಿ ನೋಡಿಕೊಳ್ಳಬಲ್ಲರೋ ಅದನ್ನು ಪರಿಶೀಲಿಸಿ ಸ್ವಬುದ್ಧಿ ಯಿಂದ ತಮ್ಮ ಮತವನ್ನು ಕೊಡಲು ಪ್ಲೂರಲ್‌ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಅವಕಾಶವಿರುವುದಿಲ್ಲ. ಅಲ್ಲದೆ ಜನರಿಗೆ ಯಾರಿಗೆ ಓಟುಕೊಡಬೇಕು, ಯಾರಿಗೆ ಕೊಡಬಾ ರದು ಎಂದು ಅನುಮಾನ ಪಡಲು ಅವಕಾಶವಾಗುತ್ತದೆ. ಇದು ಸರಿಯಲ್ಲ. ಪ್ರತಿಯೊಬ್ಬನೂ ಅವನವನ ಮನಸ್ಸಿನ ಪ್ರೇರಣೆಗನುಗುಣವಾಗಿ ಕೆಲಸಮಾಡಲು ಅವಕಾಶವಿರ ಬೇಕು. ಇದು ಪ್ಲೂರರ್ ಮೆಂಬರ್ ಕಾನ್ಸ್ಟಿಟ್ಯೂಯೆ ನ್ಸಿಯಿಂದ ಸಾಧ್ಯವಿಲ್ಲ.

ಆ ಮೇಲೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಯಾದರೆ ಅಲ್ಪ ಸಂಖ್ಯಾತ ಪಂಗಡದವರಿಗೆ ಅವಕಾಶ ಸಿಕ್ಕುತ್ತದೆ, ಅವರವರ ಜಾತಿ ಮತಗಳವರಿಗೆ ಅವರವರು ಓಟುಮಾಡುತ್ತಾರೆ ಎಂಬ ಭಯ ಕೆಲವರಲ್ಲಿದೆ. ಆದರೆ ಅದು ಹಾಗಲ್ಲ. ಆ ಭಯ ಎಲ್ಲದರಲ್ಲೂ ಇದೆ. ಇದ ರಲ್ಲಿದೆ, ಇನ್ನೊಂದರಲ್ಲಿಲ್ಲ ಎಂದು ಹೇಳುವುದಕ್ಕಾಗು ವುದಿಲ್ಲ. ಯಾವ ಮನುಷ್ಯ ನಮ್ಮಲ್ಲಿ ನಿರ್ದಿಷ್ಟವಾಗಿ ಜನ ಸೇವೆ ಮಾಡುತ್ತಾನೆ, ವಾಸ್ತವವಾಗಿ ಯಾರಿಗೆ ಪ್ರಜಾ ಬೆಂಬಲವಿದೆ ಎಂಬುದಕ್ಕೆ ನೂರಾರು ನಿದರ್ಶನ ಗಳನ್ನು ಕೊಡಬಲ್ಲೆ. ಎಷ್ಟೋ ಜನರು ಜನರ ಪರಿಚ ಯವಿಲ್ಲದೆ ಹತ್ತಾರು ವರ್ಷ ಚುನಾಯಿತರಾಗಿ ಬಂದಿ ದ್ದಾರೆ. ಈ ಸಭೆಯಲ್ಲೂ ಅಂಥ ಮಾನ್ಯ ಸದಸ್ಯರಿರಬ ಹುದು, ಆದರೆ ಅವರ ಹೆಸರನ್ನು ಹೇಳುವುದು ಈಗ ಅನಾ ವಶ್ಯಕ. ಅವರಲ್ಲಿ ಕೇವಲ ಅಲ್ಪ ಸಂಖ್ಯಾತರಿದ್ದಾರೆ. ಅವರಿಗೆ ಓಟಿನ ಅವಕಾಶವಿರುವುದಿಲ್ಲ. ಅವರ ಸೇವಾ ಮನೋಭಾವ, ನಿಸ್ವಾರ್ಥತೆ ಮುಂತಾದ್ದನ್ನು ಗಮನಿಸದೆ ಓಟುಕೊಟ್ಟಿರುವ ಅನೇಕ ನಿದರ್ಶನಗಳಿವೆ. ಆಂದ ಮೇಲೆ ಕೇವಲ ಜಾತಿಮತಗಳನ್ನೇ ಗಮನಿಸಿ ಕೆಲಸಮಾ ಡುತ್ತೇವೆಂದು ಹೇಳುವುದು ಸರಿಯಲ್ಲ. ಮುಖ್ಯವಾಗಿ ಸೇವಾತತ್ಪರತೆಯನ್ನು ಗಮನಿಸಬೇಕು. ಆದ್ದರಿಂದ ಯಾವ ಮನುಷ್ಯನು ಯಾವ ಕ್ಷೇತ್ರದಿಂದ ಚುನಾಯಿತ

ನಾಗಬೇಕೆಂದು ಹೇಳುತ್ತಾನೋ ಅವನು ಆ ಕ್ಷೇತ್ರಕ್ಕೆ ಸಂಪೂರ್ಣ ಸೇವೆ ಸಲ್ಲಿಸಿದರೆ ನಿಜವಾಗಿಯೂ ಅವನು ಯಾವ ಜಾತಿಯಾದರೂ ಚುನಾಯಿತರಾಗಿ ಬರುವುದರಲ್ಲಿ ಸಂದೇಹವಿಲ್ಲ. ಅಂಥವನು ನಮ್ಮನ್ನೆ ಏನೋ ಒಂದು ಸಾರಿ ಚುನಾಯಿತನಾಗಿ ಬಂದೆನೆಂದು ಹೇಳುವುದಕ್ಕೆ ಬದಲಾಗಿ ಸೇವಾ ವೃತ್ತಿಯನ್ನು ಮಾಡಿ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿ ಚುನಾಯಿತರಾಗಿ ಬರುವುದರಿಂದ ಅವರ ಚುನಾವಣೆಯಲ್ಲಿ ಘನತೆ ಗಾಂಭೀರ್ಯ ಗಳಿರುವುದಕ್ಕೆ ಅವಕಾಶವಾಗುತ್ತದೆ; ಇಲ್ಲದಿದ್ದರೆ ಇಲ್ಲ. ಆ ದೃಷ್ಟಿಯಿಂದ ಯಾರೂ ಭಯಪಡಬೇಕಾಗಿಲ್ಲ. ಯಾರೂ ಭಯಪಡದೆ ಚೆನ್ನಾಗಿ ಸೇವೆ ಮಾಡಬೇಕು. ಹಳ್ಳಿಗಳಿಗೆ ಹೋಗಿ ಸೇವೆಮಾಡಿದರೆ ನಾನೇ ಬಂದು ಅವರಿಗೆ ಓಟು ಕೊಡುತ್ತೇನೆ.

'ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಮಾತ್ರ ತಕ್ಕಷ್ಟು ಅವಕಾಶವಿರುತ್ತದೆ, ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಅಷ್ಟಿಲ್ಲ.' ಎಂದು ಹೇಳುವುದಕ್ಕೆ ಆಧಾರವೇನಿದೆ? ಅದನ್ನು ಮಾನ್ಯಮಿತ್ರರು ಹೇಳಿಲ್ಲ; ಅದಕ್ಕೆ ಅಂಕ ಅಂಶ ಕೊಟ್ಟಿಲ್ಲ.

ಸಿಂಗಲ್ ಟ್ರಾನ್ಸ್‌ಫರಬಲ್ ಓಟಿಂಗ್ ಪ್ರಾರಿಗೆ ತರಬೇಕೆಂದು ಬೇರೆ ಹೇಳಿದ್ದಾರೆ. As a political minority one has no right for protection here. That person must seek for protection from his electorates. Hence this is a most impracticable suggestion. ಇಂಥ ಸಲಹೆಮಾಡುವಾಗ ಮಾನ್ಯ ಸದಸ್ಯರು ವಾಸ್ತವವಾಗಿ ಅದರಿಂದ ಪ್ರಯೋಜನವಿದೆಯೇ ಎಂದು ಯೋಚನೆಮಾಡಿ ಹೇಳಬೇಕಾಗಿತ್ತು. ಅವರಲ್ಲಿ ಅನೇಕ ತಪ್ಪುಗಳಾಗುತ್ತವೆ. ಬಡ ಬೋರೇಗೌಡನು ಆ ಕ್ರಮ ಅನುಸರಿಸಲು ಸಾಧ್ಯವೇ? ಅದನ್ನು ತಿಳಿದೂ ಅವರು ಹಾಗೆ ಹೇಳಬಹುದೇ?

Janab SYED ABDUL RAHMAN.—Sir, perhaps my friend Sri Channabasappa has not followed the speech of the Honorable Law Minister. That principle has been accepted at least in election to the Legislative Council.

Sri K. T. BHASHYAM.—I also added that the system of single tarnsferable vote is so complicated that we cannot think of introducing it for election under adult franchise.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ಸಭೆಗೆ ಚುನಾಯಿತರಾಗಿ ಬರುವವರಿಗೆ ಓಟು ಮಾಡುವವರಲ್ಲಿ ಸಾವಿರಾರು ಜನರು ಅ, ಆ, ಇ, ಈ ಅಕ್ಷರಗಳು ಕೂಡ ಬಾರದೇ ಇರುವ ಹಳ್ಳಿಗಾತಿನವರಿದ್ದಾರೆಂಬುದು ಅವರಿಗೆ ಮನವರಿಕೆಯಾಗಿಲ್ಲವೆಂದು ಕಾಣುತ್ತದೆ.

ಚುನಾವಣೆ ವಿಧಾನವು ಈಗಿರತಕ್ಕ ಪರಿಸ್ಥಿತಿಗೆ ಹೊಂದಿಕೊಂಡಿರಬೇಕು. ಈಗ ನಮ್ಮ ಸಂಸ್ಥಾನವಲ್ಲಿರತಕ್ಕ 82 ತಾಲ್ಲೂಕುಗಳಿಗೆ ಅದಷ್ಟು ಅನುಗುಣವಾಗಿರಬೇಕು. ಹಾಗಿಲ್ಲದೆ ಈಗ ಏಕ್‌ದಮ್ ತೀರಾ ಬದಲಾವಣೆಮಾಡಿದರೆ ಮುಂದಿನ ಚುನಾವಣೆಯನ್ನು ತಳಿದುಕೊಳ್ಳಲು ಕಷ್ಟವಾಗುತ್ತದೆ. ಅನೇಕ ವರ್ಷಗಳಿಂದಲೂ ಹಿಂದಿನ ಪರಿಸ್ಥಿತಿಯನ್ನೇ ಅನುಸರಿಸಿಕೊಂಡು ಬಂದಿರುವುದರಿಂದ ಅದನ್ನು ತೀವ್ರವಾಗಿ ಬದಲಾವಣೆಮಾಡುವುದರಿಂದ ಓಟು ಮಾಡುವವರ ಮನಸ್ಸಿಗೆ ಸಮಸ್ಯೆಯುಂಟಾಗಿ ಅದರಿಂದ ಚುನಾವಣೆಯಲ್ಲಿ ತೊಂದರೆಯಾಗುತ್ತದೆ. ಆದುದರಿಂದ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಇರುವುದು ಎಲ್ಲ ದೃಷ್ಟಿಯಿಂದಲೂ ಉತ್ತಮವೆಂದು ಹೇಳಿರುವ ಅಭಿಪ್ರಾಯವನ್ನು ನಾನು ಪುಷ್ಟೀಕರಿಸುತ್ತೇನೆ.

ಇನ್ನು ಚುನಾವಣೆ ವಿಧಾನದ ವಿಷಯದಲ್ಲಿ ಹೇಳುವುದಾದರೆ, ಚುನಾವಣೆಗೆ ನಿಂತಿರುವವರಿಗೆ ಆನೆ, ಕುದುರೆ, ಒಂಟೆ ಮುಂತಾದ ಗುರುತುಗಳನ್ನು ಕೊಡುವುದಕ್ಕೆ ಬದಲು ಬೇರೆ ಬೇರೆ ಬಣ್ಣದ ಪೆಟ್ಟಿಗೆಗಳ ಪದ್ಧತಿಯನ್ನು ಅನುಸರಿಸಿದರೆ ಇದುವರೆಗಾಗುತ್ತಿರುವ ಅನ್ಯಾಯವನ್ನು ತಡೆಗಟ್ಟಬಹುದೆಂದು ನನ್ನ ಸಲಹೆ.

ಚುನಾವಣೆ ಖರ್ಚು ವೆಚ್ಚಗಳ ದೃಷ್ಟಿಯಿಂದಲೂ ಕೂಡ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಉತ್ತಮ. ಕಡಿಮೆ ಖರ್ಚಿನಲ್ಲಿ ಚುನಾವಣೆಯಾಗಲು ಅನುಕೂಲವಾಗುತ್ತದೆ. ಲಂಚ ಕ್ಕೋರತನ ಹೆಚ್ಚುತ್ತದೆಂದು ಕೆಲವರು ಹೇಳಿದರು. ಅದಕ್ಕೆ ನಾನು ಹೇಳುವುದಿಷ್ಟೆ: ಇದು ಜನತೆಯ ಮನೋಧರ್ಮದ ಮೇಲೆ ಹೋಗುತ್ತದೆ. ಜನತೆಯ ಮನೋಧರ್ಮ ಬದಲಾಣೆಯಾದ ಹೊರತು ಇದು ನಿವಾರಣೆಯಾಗಲಾರದು. ಒಟ್ಟಿನಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಮತ್ತು ಬಣ್ಣದ ಪೆಟ್ಟಿಗೆ ಪದ್ಧತಿ ಎರಡೂ ಪ್ರಾರಿಗೆ ಬರಬೇಕೆಂದು ನನ್ನ ಅಭಿಪ್ರಾಯ.

ಕೊನೆಯದಾಗಿ ಒಂದೇ ವಿಷಯ. ಈಗ ಸಮಿತಿಗೆ 12ಜನ ರನ್ನು ಸದಸ್ಯರಾಗಿ ಸೂಚಿಸಿದ್ದಾರೆ. ಅವರಷ್ಟೇ ಅಲ್ಲದೆ ಇತರ ಅನೇಕರು ಈ ವಿಚಾರದಲ್ಲಿ ಅನುಭವವುಳ್ಳವರು ಸಲಹೆ ಕೊಡುವವರಿದ್ದಾರೆ. ಅವರ ಸಲಹೆಗಳನ್ನು ಪಡೆಯುವುದರಿಂದ ತೊಂದರೆ ಏನೂ ಇಲ್ಲ. ಆದುದರಿಂದ ಶ್ರೀ ಜಿ. ವೀರಪ್ಪನವರು ಒಪ್ಪುವುದಾದರೆ, ಈ ಸಮಿತಿಯವರು ಇನ್ನೂ ಕೆಲವು ಸದಸ್ಯರನ್ನು ಕೋ ಆಪ್ಟ್ ಮಾಡಿಕೊಳ್ಳಬಹುದೆಂದು ಈ ಸಮಿತಿಗೆ ಅಧಿಕಾರ ಕೊಟ್ಟರೆ ಒಳ್ಳೆಯದೆಂದು ನನಗೆ ತೋರುತ್ತದೆ.

ಅಧ್ಯಕ್ಷರು.—ಸಭೆಯು ಪುನಃ 4-5 ಘಂಟೆಗೆ ಸೇರುತ್ತದೆ.

The House adjourned for Lunch at Thirty Five Minutes past Three of the Clock and re-assembled at Five Minutes past Four of the Clock Mr. Speaker (Sri V. Venkatappa) in the Chair.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಸ್ವಾಮಿ, ಈ ಶಾಸನ ಸಭೆಗೆ ಮುಂದೆ ನಡೆಯುವ ಚುನಾವಣೆಯ ವಿಚಾರದಲ್ಲಿ ಕ್ಷೇತ್ರ ವಿಭಜನೆ ಮತ್ತು ಓಟು ವಿಧಾನ ಮತ್ತು ಆಯಾ ಕ್ಷೇತ್ರಗಳಿಗೆ ಎಷ್ಟು ಜನ ಸದಸ್ಯರಿರಬೇಕೆಂಬ ವಿಚಾರದಲ್ಲಿ ಪರ್ಯಾಲೋಚನೆ ಮಾಡಲು ತಂದಿರುವ ಠರಾವು ಸಭೆಯ ಮುಂದಿದೆ. ಈ ವಿಚಾರವಾಗಿ ಹಲವು ಮಾನ್ಯ ಸದಸ್ಯರು ಹಲವು ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ತಿದ್ದುಪಡಿಗಳನ್ನೂ ಕೊಟ್ಟಿದ್ದಾರೆ. ಇದುವರೆಗೆ ನಡೆದಿರುವ ಚರ್ಚೆಯಿಂದ ಒಂದು ಅಂಶ ಸ್ಪಷ್ಟವಾಗಿ ಕಾಣುತ್ತದೆ. ಕ್ಷೇತ್ರ ವಿಭಜನೆ ಮಾಡುವ ಸಂಬಂಧವಾಗಿಯೂ, ಓಟು ಯಾವ ರೀತಿ ನಡೆಯಬೇಕೆಂಬ ವಿಚಾರದಲ್ಲಿಯೂ ಕೆಲವು ಸೂಕ್ಷ್ಮ ವಿಚಾರಗಳನ್ನು ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿರುವುದರಿಂದ ಇಷ್ಟು ದೊಡ್ಡ ಸಭೆ ಅದನ್ನೆಲ್ಲಾ ಪರಿಶೀಲಿಸಿ ತೀರ್ಮಾನಕ್ಕೆ ಬರುವುದು ಸುಲಭ ಸಾಧ್ಯವಲ್ಲವಾದುದರಿಂದ ಒಂದು ಸಣ್ಣ ಸಮಿ

ತಿಯು ಅದನ್ನು ಪರಿಶೀಲನೆಮಾಡಿ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದೆಂಬ ಅಭಿಪ್ರಾಯ ವ್ಯಕ್ತವಾಗಿದೆ.

Mushir-ul-mulk Janab J. MAHOMED IMAM (Chitaldrug and Tumkur Muslim).—Sir, I rise to a point of order. Whether the House can go on without even a single representative of Government being present on the floor is a point to be decided upon. In the other State Legislatures and in the Central Parliament, it is a convention that the concerned Minister at least should be present when a subject is debated. When the concerned Minister is not present here, then, I feel, that it is not only discourteous to the House but also it looks as if that the Government do not care to know what the members say.

Mr. SPEAKER.—On that account we cannot adjourn the House.

Janab MAHOMED IMAM.—Sir, we seek the protection of the Chair which upholds the dignity and privileges of the House. It is our privilege and right to seek for adequate response from the Government to what we the representatives of the people say. The Chair can give an effective direction that the Government members should be present here.

Sri M. MADIAH (Mysore District—Depressed Class).—Sir, there is no point of order.

(Just then the Hon'ble Minister for Finance was seen entering the floor of the House.)

ಕೆ. ಸಂಪಂಗಿರಾಮಯ್ಯನವರು.—ಈ ಸೂಕ್ಷ್ಮ ವಿಚಾರಗಳನ್ನೆಲ್ಲಾ ಪರಿಶೀಲಿಸಿ ಸಲಹೆ ಮಾಡಲು ಒಂದು ಸಮಿತಿ ಇರಬೇಕೆಂಬ ಅಭಿಪ್ರಾಯ ವ್ಯಕ್ತಪಟ್ಟಿದೆ. ಇದೇನೋ ಸರಿ. ಆದರೆ ಆ ಸಮಿತಿಯಲ್ಲಿ ಯಾರು ಯಾರಿರಬೇಕೆಂಬ ಬಗ್ಗೆ ಎರಡು ಸಲಹೆಗಳು ಬಂದಿವೆ. ಜನಾಬ್ ಇಮಾಂರವರೂ ಮತ್ತು ಶ್ರೀ ವೀರಪ್ಪನವರೂ ಬೇರೆ ಬೇರೆ ಸಲಹೆ ಕೊಟ್ಟಿದ್ದಾರೆ. ಈ ಎರಡರಲ್ಲಿ ಯಾವುದು ಸೂಕ್ತ ಎಂದು ನೋಡಬೇಕು. ಜನಾಬ್ ಇಮಾಂರವರ ಸಲಹೆಯನ್ನನುಸರಿಸುವುದಾದರೆ ಅದು ಒಂದು ರೀತಿಯ ಕಷ್ಟ ಪರಿಸ್ಥಿತಿಯನ್ನುಂಟುಮಾಡುತ್ತದೆ. ಅಲ್ಲದೆ ಅದರಲ್ಲಿ ಅನಿರ್ದಿಷ್ಟವಾದ ಅಂಶಗಳಿವೆ. 'Representatives of various interests in the State' ಎಂದು ಸೂಚಿಸಿದ್ದಾರೆ. ಹಾಗೆಂದರೇನು? ನಾನಾ ತರಹ interests ಇವೆ, ನಾನಾ ಪಂಗಡಗಳಿವೆ, ಕೋಮುವಾರು ಮತ್ತು ರಾಜಕೀಯ ಪಂಗಡಗಳೂ, ಹಿತಗಳೂ ಇವೆ. ನಾನಾ ವೃತ್ತಿ ಸಂಬಂಧವಾದ interests ಇವೆ. ಇವು ಯಾವುವು ಎಂಬುದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ.

ಈ ರೀತಿಯಾಗಿರುವುದರಿಂದ ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ. ಒಬ್ಬ ಹೈಕೋರ್ಟ್ ಜಡ್ಜನ್ನು ನೇಮಕಮಾಡಬೇಕೆಂದು ಹೇಳಿದ್ದಾರೆ. ವಿವಾದಾಸ್ಪದವಾದ ವಿಷಯಗಳು ಬಂದರೆ ಆಗ ಹೈಕೋರ್ಟ್ ಜಡ್ಜರು ನ್ಯಾಯ ಯಾವುದು, ಅನ್ಯಾಯ ಯಾವುದು ಎಂಬುದನ್ನು ವಿಮರ್ಶೆಮಾಡುವುದು ಸ್ವಾಭಾವಿಕ. Quasi judicial functions ಏನಾದರೂ ಇದ್ದರೆ ಅಂಥ ಹೈಕೋರ್ಟ್ ಜಡ್ಜರವರು ಬೇಕು; ಇಲ್ಲಿ quasi judicial functions ಏನೂ ಇರುವುದಿಲ್ಲ. ರಾಜಕೀಯ ದೃಷ್ಟಿಯಿಂದ ಜನಗಳ ಅಭಿಮತವನ್ನು ಪ್ರತಿಬಿಂಬಿಸುವುದಕ್ಕೆ ಯಾವ ರೀತಿಯ ಪದ್ಧತಿ ಒಳ್ಳೆಯದು ಎಂಬುದನ್ನು ಈ ಸಭೆಯವರು ತಿಳಿದುಕೊಳ್ಳುವುದಕ್ಕೋಸ್ಕರ ಆ ಕೆಲಸವನ್ನು ಹೈಕೋರ್ಟ್ ಜಡ್ಜಿಯವರಿಗೆ ವಹಿಸಿದರೆ ಅದರಿಂದ ಸಾಧ್ಯವಾಗುವುದಿಲ್ಲವೆಂದು ನನಗೆ ತೋರುತ್ತದೆ. ಏಕೆಂದರೆ ರಾಜಕೀಯದಲ್ಲಿ ಹೈಕೋರ್ಟ್ ಜಡ್ಜಿಗಳು ದೂರವಾಗಿರುತ್ತಾರೆ. ಅವರು ಪ್ರಜೆಗಳೊಂದಿಗೆ ಮಿಳಿತವಾಗಿರುವುದಿಲ್ಲ. ಅಂಥವರು ಜೊನಾವಣಾ ಕ್ಷೇತ್ರಗಳಲ್ಲಿ ಜನಗಳ ಅಭಿಪ್ರಾಯ ತಿಳಿದುಕೊಳ್ಳತಕ್ಕ ಬಗೆ ಹೇಗೆ? ಅವರು ನ್ಯಾಯ ಶಾಸ್ತ್ರದಲ್ಲಿ ಪಾರಂಗತರಾಗಿರುತ್ತಾರೆ. ಯಾವುದೋ ಒಂದು ಉತ್ತಮವಾದ ರೀತಿಯಲ್ಲಿ ಅವರು ಅಂಕಿ ಅಂಶಗಳನ್ನು ವಿಮರ್ಶೆಮಾಡಿ ತೀರ್ಮಾನ ಕೊಡತಕ್ಕದ್ದು ಸರಿಯಾಗಿರುತ್ತದೆ. ಅಷ್ಟೇ ಹೊರತು ದೇಶದಲ್ಲಿ ಎಂಥೆಂಥ ಜನಗಳು ಇದ್ದಾರೆ, ಅವರ ಮನೋಭಿಪ್ರಾಯವೇನಾಗಿದೆ ಎಂಬುದನ್ನು ಅರಿತು, ಅವರ ಮನೋಭಿಪ್ರಾಯಗಳೆಲ್ಲಾ ಪರಿಣಾಮಕರವಾದ ರೀತಿಯಲ್ಲಿ ಪ್ರತಿಬಿಂಬಿಸುವಂತೆ ಮಾಡಲು ಏನು ಉಪಾಯ ಎಂಬುದನ್ನು ಹೇಳಲು ಅವರಿಂದ ಸಾಧ್ಯವಿಲ್ಲ. ಅವರು ಆ ವಿಚಾರದಲ್ಲಿ ಹೆಚ್ಚು ಪರಿಶ್ರಮವುಳ್ಳವರಾಗಿರುವುದಿಲ್ಲ. ಈಗ ಇದನ್ನು ಕೇವಲ ಹಗುರವಾಗಿ ತೀರ್ಮಾನ ಮಾಡತಕ್ಕ ಪರಿಸ್ಥಿತಿ ಇಲ್ಲ. ಇದು ರಾಜಕೀಯ ಅನುಭವದಿಂದ, ಜನಗಳ ಸಂಪರ್ಕದಿಂದುಂಟಾಗಿರತಕ್ಕ ದಕ್ಷತೆಯಿಂದ ಕೈಗೊಳ್ಳತಕ್ಕ ಕೆಲಸವೇ ಹೊರತು ಕೇವಲ ಒಂದು ಸ್ವಾತ್ವಿಕ ದೃಷ್ಟಿಯಿಂದ ಮಾಡತಕ್ಕ ಕೆಲಸವಲ್ಲ. ಆದ ಕಾರಣ ಹೈಕೋರ್ಟ್ ಜಡ್ಜಿಯವರಿಗೆ ಇದನ್ನು ಒಪ್ಪಿಸುವುದರಿಂದ ಒಳ್ಳೆಯದಾಗುವುದಿಲ್ಲವೆಂದು ಹೇಳುತ್ತೇನೆ. ಮೊದಲೇ ಹೇಳಿದಹಾಗೆ "several interests" ಎಂದು ಹೇಳಿದರೆ ಅದು ಅನಿರ್ದಿಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ಜನಾಬ್ ಮಹಮ್ಮದ್ ಇಮಾಂರವರು ಸಮಿತಿ ರಚನೆ ಆಗಬೇಕೆಂಬುದಾಗಿ ಸೂಚಿಸಿರತಕ್ಕ ಸಲಹೆಯಿಂದ ಅಷ್ಟು ಸುಲಭವಾಗಿ ಕಾರ್ಯಕ್ರಮವಾಗುವುದಿಲ್ಲ. ಶ್ರೀ ವೀರಪ್ಪನವರು ಹೇಳಿರತಕ್ಕದ್ದು ನಿರ್ದಿಷ್ಟವಾದ ಸಲಹೆಯಾಗಿದೆ. ಇಂತಿಂಥವರೇ ಸದಸ್ಯರಾಗಿರಬೇಕೆಂದು ಹೇಳಿದ್ದಾರೆ. ಮತ್ತು ಇನ್ನೊಂದು ವಿಚಾರವೇನೆಂದರೆ ಆ ಸಮಿತಿಯವರು ಮಾಡತಕ್ಕ ಶಿಫಾರಸ್ಸನ್ನು ಈ ಸಭೆಯವರು ಒಪ್ಪಬೇಕು; ಇಲ್ಲದೇ ಇದ್ದರೆ ತಿರಸ್ಕಾರ ಮಾಡಬೇಕು. ಇದು ಸರಿಯಾಗಿದೆ.

ಅದಕ್ಕೆ ಬದಲಾಗಿ ಹೈಕೋರ್ಟ್ ಜಡ್ಜಿಯವರನ್ನು ನೇಮಕಮಾಡಿ ಅವರು ಮಾಡತಕ್ಕ ಶಿಫಾರಸ್ಸಿನ ಮೇಲೆ ಟೀಕೆ ಮಾಡುವುದು ಸಾಧುವಲ್ಲ. ಆದ್ದರಿಂದ ಈ ಸಭೆಗೆ ಸಂಬಂಧಪಟ್ಟ ಸದಸ್ಯರನ್ನು ಚುನಾಯಿಸಿದರೆ ಆ ಸದಸ್ಯರು ಈ ಸಭೆಯಲ್ಲಿ ಚರ್ಚೆಯಾಗತಕ್ಕ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಅವಶ್ಯಕವಿದ್ದರೆ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ, ಅವರ ಅನುಭವಗಳನ್ನೆಲ್ಲಾ ಕ್ರೋಢೀಕರಿಸಿ ನಿರ್ದಿಷ್ಟವಾದ ಸಲಹೆ

ಕೊಡುವುದಕ್ಕೆ ಅವಕಾಶವಾಗುತ್ತದೆ. ಈ ಸಭೆಯಲ್ಲಿ ಯಾವ ಮೂಲ ತತ್ವಗಳ ಆಧಾರದಮೇಲೆ ನಲಹೆ ಕೊಡ ಬೇಕೆಂಬುದೂ ಸಹ ಚರ್ಚೆಯಾಗಿರುತ್ತದೆ. ಆದ್ದರಿಂದ ಶ್ರೀ ವೀರಪ್ಪನವರು ಮಾಡಿರತಕ್ಕ ನಲಹೆ ಅತ್ಯುತ್ತಮವಾಗಿದೆ. ನನ್ನೆ ಮಾನ್ಯ ಸಚಿವರು ಹೇಳಿದ ಪ್ರಕಾರ ಆ ನಲಹೆಗಳನ್ನು ಕೊಡತಕ್ಕ ವಿಚಾರದಲ್ಲಿ ಮೂರು ಮೂಲಭೂತವಾದ ತತ್ವಗಳಿವೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ, ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮತ್ತು ಕಲರ್ ಬಾಕ್ಸ್ ಸಿಸ್ಟಂ ಹಿಂದೆ ಇದ್ದಂತೆ ಕ್ಯಾಸ್ಮಾರ್ಕ್ ಹಾಕುವುದು—ಈ ವಿಷಯಗಳಲ್ಲಿ ಯಾವ ರೀತಿ ಇರಬೇಕೆಂಬುದನ್ನು ನಿರ್ದಿಷ್ಟವಾಗಿ ನಲಹೆ ಕೊಡಬಹುದಾಗಿದೆ. ಇದನ್ನೆಲ್ಲಾ ಪರಿಗಣಿಸಿ ಆ ಸಮಿತಿಯವರು ಅವರ ವರದಿಯನ್ನು ಈ ಸಭೆಗೆ ಕೊಡುತ್ತಾರೆ. ಅದರಮೇಲೆ ಚರ್ಚೆಮಾಡಿ ಯಾವುದು ಸಾಧ್ಯ ಯಾವುದು ಸಾಧ್ಯವಿಲ್ಲ ಎಂಬುದನ್ನು ತೀರ್ಮಾನ ಮಾಡುವುದಕ್ಕೆ ಅವಕಾಶವಿದೆ. ಈಗ ಈ ಮೂರು ವಿಚಾರಗಳಲ್ಲಿ ಈ ಸಭೆಯ ಅಭಿಪ್ರಾಯವನ್ನು ನಾವು ಹೇಳಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇರಬೇಕೇ, ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇರಬೇಕೇ ಎಂಬ ಬಗ್ಗೆ ವಾದ ವಿವಾದಗಳಾಗಿವೆ. ಮಾನ್ಯ ಸಚಿವರು ಹೇಳಿರುವಹಾಗೆ ಕೆಲವು ಕ್ಷೇತ್ರಗಳಲ್ಲಿ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಕಡ್ಡಾಯವಾಗಿ ಆಗಲೇ ಬೇಕಾಗಿದೆ. ಏಕೆಂದರೆ ರಿಸರ್ವೇಷನ್ ಇದ್ದಾಗ ಅದು ಇರಲೇ ಬೇಕು. ಆದ್ದರಿಂದ ಪ್ಲೂರಲ್ ಮೆಂಬರ್, ಸಿಂಗಲ್ ಮೆಂಬರ್ ಎಂಬುದಾಗಿ ತತ್ವ ದೃಷ್ಟಿಯಲ್ಲಿ ಹೋಗಬೇಕಾದ ಅವಶ್ಯಕತೆ ಇಲ್ಲ. ಎರಡಕ್ಕಿಂತ ಹೆಚ್ಚಾಗಿ ಯಾವ ಕಾನ್ಸ್ಟಿಟ್ಯೂಯೆನ್ಸಿಯಲ್ಲಿಟ್ಟರೂ ಅಪಾಯಕರವೆಂದು ನನಗೆ ಭಾನವಾಗುತ್ತದೆ. ಎರಡಕ್ಕೆ ಮೀರದಂತೆ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇರುವ ಪಕ್ಷಕ್ಕೆ ಅಡ್ಡಿ ಇಲ್ಲ. ಅದೂ ಸಹ ಕಾನ್ಸ್ಟಿಟ್ಯೂಯೆನ್ಸಿ ವಿಭಜನೆ ಮಾಡುವ ಕಾಲದಲ್ಲಿ ಈಗಿರತಕ್ಕ ರೆವೆನ್ಯೂ ವಿಭಾಗಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ನಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆದ್ದರಿಂದ ಯಾವುದೋ ಒಂದು ಸಾತ್ವಿಕ ದೃಷ್ಟಿಗೆ ಒಳಪಟ್ಟು ಸಿಂಗರ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಲೀ, ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಲೀ ಇರಬೇಕೆಂದು ಆ ಸಮಿತಿಯವರು ನಲಹೆ ಕೊಡಬೇಕಾಗಿಲ್ಲ. ಎಲ್ಲೆಲ್ಲ ಸಾಧ್ಯವೋ ಅಲ್ಲೆಲ್ಲಾ ಮೂಲಭೂತವಾದ ಅಂಶಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಸಾಧ್ಯವಾದಷ್ಟೂ ಈಗಿರತಕ್ಕ ರೆವೆನ್ಯೂ ವಿಭಾಗಗಳನ್ನು ಹಾಗೆಯೇ ಉಳಿಸಿಕೊಳ್ಳುವುದು ಅವಶ್ಯಕ. ಒಂದೆರಡು ತಾಲ್ಲೂಕುಗಳನ್ನು ಒಟ್ಟಿಗೆ ಸೇರಿಸಿಕೊಂಡು ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡಿಕೊಳ್ಳುವುದಕ್ಕೆ ಅನುಕೂಲವಿರಬೇಕು. ಎರಡಕ್ಕಿಂತ ಹೆಚ್ಚು ಕಾನ್ಸ್ಟಿಟ್ಯೂಯೆನ್ಸಿ ಮಾಡುವುದು ಅಸಾಧ್ಯ ತೊಂದರೆಯಾಗುತ್ತದೆ. ಈಗ ವಯಸ್ಕರ ಮತದಾನ ಪದ್ಧತಿ ಇದೆ. ಒಂದೊಂದು ಚುನಾವಣಾ ಕ್ಷೇತ್ರದಲ್ಲಿ ಓಟರುಗಳ ಸಂಖ್ಯೆ 35 ಸಾವಿರದಿಂದ 75-80 ಸಾವಿರದವರೆಗೂ ಏರುತ್ತದೆ. ಇಡೀ ಸಂಸ್ಥಾನವನ್ನು 19 ಭಾಗಗಳಾಗಿ ವಿಭಾಗ ಮಾಡುವುದಾಗಲೀ 5 ಭಾಗಗಳಾಗಿ ವಿಭಾಗ ಮಾಡುವುದಾಗಲೀ ಸಾಧ್ಯವಿಲ್ಲ. ಒಂದೊಂದು ತಾಲ್ಲೂಕಿನಲ್ಲಿ 1 ಲಕ್ಷದ 25 ಸಾವಿರ, 1 ಲಕ್ಷದ 30 ಸಾವಿರ ಜನಸಂಖ್ಯೆ ಇದೆ. ಅಂಥ ತಾಲ್ಲೂಕುಗಳನ್ನು ಒಡಿಯದೆ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ತಾಲ್ಲೂಕುಗಳಲ್ಲಿ ಸಾವಿರದಿಂದ 85 ಸಾವಿರದವರೆಗೂ ಜನಸಂಖ್ಯೆ ಇರುತ್ತದೆ. ಅಂಥ ತಾಲ್ಲೂಕುಗಳನ್ನು ಪ್ರತ್ಯೇಕ ಮಾಡದೇ ಮೊದಲನಿಂದಲೂ ಇರುವುದನ್ನೇ ಸಿಂಗರ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಾಗಿ ಉಳಿಸಿಕೊಂಡು ಬರಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಹಿಂದೆ ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳಿಗೆ ಚುನಾವಣೆಯಾಗತಕ್ಕ ಕಾಲದಲ್ಲಿ ಏನಾಗುತ್ತಾ ಇತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಪಟ್ಟಣಗಳಲ್ಲಿ ಸಿಂಗಲ್ ಮೆಂಬರ್, ಗ್ರಾಮಾಂತರಗಳಲ್ಲಿ ಪ್ಲೂರಲ್ ಮೆಂಬರ್ ಕ್ಷೇತ್ರಗಳಿದ್ದುವು. ಪ್ಲೂರಲ್ ಮೆಂಬರ್ ಮತ್ತು ಸಿಂಗಲ್ ಮೆಂಬರ್ ಎರಡೂ ನಮ್ಮ ದೇಶಕ್ಕೆ ಸರಿಹೋಗುತ್ತದೆ. ಎರಡಕ್ಕಿಂತ ಹೆಚ್ಚು ಮೆಂಬರುಗಳು ಇರುವ ಪಕ್ಷಕ್ಕೆ ಬ್ಯಾಲೆಟ್ ಬಾಕ್ಸ್ಗಳನ್ನು ಏರ್ಪಡಿಸಿ ಸರಿಯಾಗಿ ಓಟುಗಳನ್ನು ಹಾಕಿಸುವುದಕ್ಕೆ ತೊಂದರೆಯಾಗುತ್ತದೆ. ಓಟು ಮಾಡುವವರಿಗೆ ಮೂರು ಕಾರ್ಡುಗಳನ್ನು ಕೊಟ್ಟರೆ ಮೂರು ಪೆಟ್ಟಿಗೆಗಳಲ್ಲಿ ಹಾಕಬೇಕಾಗುತ್ತದೆ. ಈಗಿನ ನಾಗರಿಕ ಪರಿಸ್ಥಿತಿಯಲ್ಲಿ ಆ ಮೂರನ್ನೂ ತೆಗೆದುಕೊಂಡು ಹೋಗಿ ಒಂದೇ ಪೆಟ್ಟಿಗೆಗೆ ಹಾಕಿ ಹೋಗುವ ಪ್ರಸಂಗ ಬರುತ್ತದೆ. ಬಣ್ಣದ ಪೆಟ್ಟಿಗೆಗಳನ್ನಿಡುವ ವಿಧಾನ ವಾಗಲೀ ಅಥವಾ ಬೇರೆ ಯಾವ ವಿಧಾನವೇ ಆಗಲೀ ಸರಿ ಹೋಗುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಅನೇಕ ಜನ ಓಟರುಗಳಿರುವಾಗ ಇರುವ 5 ಅಥವಾ 6 ಪೆಂಟೆಗಳೊಳಗೆ ಹಾಕತಕ್ಕ ಗುರುತನ್ನು ತಪ್ಪಾಗಿ ಹಾಕಿಯೋ ಅಥವಾ ಇಂಥಬಣ್ಣದ ಪೆಟ್ಟಿಗೆಗೆ ಹಾಕಬೇಕೆಂದಿರುವುದನ್ನು ಬೇರೆ ಪೆಟ್ಟಿಗೆಗೆ ಹಾಕುವುದನ್ನೂ ತಪ್ಪಿಸುವುದ ಕ್ಕಾಗುವುದಿಲ್ಲ. ಕೇವಲ ರುಜುಮಾಡಿ ಬ್ಯಾಲೆಟ್ ಪೇಪರನ್ನು ತೆಗೆದುಕೊಂಡು ಗುರ್ತುಮಾಡಿ ಒಂದು ಪೆಟ್ಟಿಗೆಯೊಳಗೆ ಹಾಕುವುದು ಅಭ್ಯಾಸವಾಗಿ ಹೋಗಿದೆ. ಕಾಲಕ್ರಮದಲ್ಲಿ ದೇಶದ ಜನಗಳ ತಿಳಿವಳಿಕೆಯ ಮಟ್ಟ ಹೆಚ್ಚಿ, ಅವರು ಸರಿಯಾದ ಕ್ರಮದಲ್ಲಿ ಓಟು ಮಾಡುವುದನ್ನು ತಿಳಿದುಕೊಳ್ಳುವವರೆಗೂ ಕಲರ್ ಬಾಕ್ಸ್ ಸಿಸ್ಟಂ ಬಹಳ ಉತ್ತಮವಾದದ್ದೆಂದು ಕಾಣುತ್ತದೆ.

ಇನ್ನೊಂದು ವಿಚಾರವೇನೆಂದರೆ ಪ್ರಪೋರ್ಷನಲ್ ರೆಪ್ರಸೆಂಟೇಷನ್ ಪ್ರಕಾರ ಓಟಿಗೆ ಹಾಕುವ ಪಕ್ಷದಲ್ಲಿ ಈಗಲೇ ಹೇಳುತ್ತೇನೆ, ನೀರು ಇಳಿಯದ ಗಂಟಲಲ್ಲಿ ಕಡುಬು ಹಾಕಿದ ಹಾಗಾಗುತ್ತದೆ. ಈಗ ವಯಸ್ಕರ ಮತದಾನ ಪದ್ಧತಿ ಬಂದಿದೆ. ಅನೇಕ ಜನ ಅವಿದ್ಯಾವಂತರು ಓಟುಮಾಡುವುದಕ್ಕೆ ಬರುತ್ತಾರೆ. ಅಂಥವರಿಗೆ ಓಟು ಹೇಗೆ ಮಾಡಬೇಕೆಂದು ತಿಳಿಸುವುದು ಕಷ್ಟವಾಗುತ್ತದೆ. ಪ್ರಪೋರ್ಷನಲ್ ರೆಪ್ರಸೆಂಟೇಷನ್ ಪ್ರಕಾರ 1-2-3 ಪ್ರಿಫರೆನ್ಸ್ ಗುರುತುಮಾಡಿ ಎಂದು ಅವರಿಗೆ ಹೇಳಿದರೆ ಅವರು ತಿಳಿದುಕೊಳ್ಳುವುದು ಅಸಾಧ್ಯವಾದ ಮಾತು. ಆ ರೀತಿ ಓಟುಮಾಡುವುದಕ್ಕೆ ತರಬೇತು ಮಾಡಬೇಕೆಂದರೆ ಅದಕ್ಕೆ ಎರಡು ಮೂರು ವರ್ಷ ಬೇಕಾಗುತ್ತದೆ. ಆದರೂ ಎಲ್ಲಾ ಜನಗಳನ್ನೂ ತರಬೇತು ಮಾಡಲು ಸಾಧ್ಯವಾಗುತ್ತದೆಂಬ ಭರವಸೆ ಇಲ್ಲ.

ಆದ್ದರಿಂದ ಪ್ರಪೋರ್ಷನಲ್ ರೆಪ್ರಸೆಂಟೇಷನ್ ಪದ್ಧತಿಯಿರಬೇಕೆಂದು ಹೇಳಿದರೆ, ಈಗತಾನೆ ಹೊಸ ರಾಜ್ಯಾಂಗ ನಮ್ಮ ದೇಶದಲ್ಲಿ ಬಂದು ವಯಸ್ಕರ ಮತದಾನ ಪದ್ಧತಿಯನ್ನನುಸರಿಸಬೇಕೆಂದಿರುವಾಗ ಎಲ್ಲರಿಗೂ ತಿಳಿವಳಿಕೆ ಕೊಟ್ಟು ಚುನಾವಣೆ ನಡೆಸಬೇಕೆಂದರೆ ಸಾಧ್ಯವಾಗದ ಮಾತು. ಆದ್ದರಿಂದ ಈ ಸಭೆಯವರು ಮುಂದೆ ರಚಿಸುವ ಸಮಿತಿಯವರಿಗೆ ಮುಖ್ಯವಾಗಿ ಈ ಮೂರು ವಿಷಯಗಳನ್ನು ತಿಳಿಸಬೇಕು. ಬಣ್ಣದ ಪೆಟ್ಟಿಗೆ ಪದ್ಧತಿಯನ್ನಿಟ್ಟುಕೊಂಡು ಸಿಂಗರ್ ಮೆಂಬರ್ ಚುನಾವಣಾ ಕ್ಷೇತ್ರಗಳು ಮತ್ತು ಇಬ್ಬರು ಸದಸ್ಯರಿರುವ ಪ್ಲೂರಲ್

ಮೆಂಬರ್ ಜುನಾವಣಾ ಕ್ಷೇತ್ರಗಳು—ಇಂಥವುಗಳನ್ನೇ ಹೆಚ್ಚಿಗೆ ಮಾಡಿ ಹಾಲಿ ಇರುವ ರೆವೆನ್ಯೂ ಡಿವಿಜ಼ನ್‌ಗಳನ್ನೇ ಸಾಧ್ಯವಾದ ಮಟ್ಟಿಗೂ ಉಳಿಸಿಕೊಂಡು ಬಂದು ಏರ್ಪಾಡು ಮಾಡಬೇಕು. ಕ್ಯು ಮ್ಯು ರೇ ಟಿ ವ್ ವೋಟಿಂಗ್‌ಗೆ ಅವಕಾಶವಿರಬಾರದು. ಏಕೆಂದರೆ ಇದು ಬಹಳ ತೊಂದರೆ ಕೊಡುತ್ತದೆಂದು ಎಲ್ಲರ ಅನುಭವಕ್ಕೂ ಬಂದಿದೆ. ಯಾರು ಜನಾನುರಾಗಿಗಳಲ್ಲವೋ ಅವರೇ ಜುನಾವಣೆಯಾಗಿ ಬಂದುಬಿಡಬಹುದು. ಹಾಗೆ ಪ್ರಜಾನುರಾಗಿಗಳಲ್ಲದವರಿಗೂ ಜುನಾವಣೆಯಾಗಿ ಬರಲು ಅವಕಾಶವಿರಲೆಂದು ಹೇಳಿದರೆ, ಇಂಥಾದ್ದನ್ನು ಮಾಡಿಕೊಳ್ಳಬಹುದೇ ವಿನಾ ಬೇರೆ ಕಡೆ ಆಗುವುದಿಲ್ಲ. ಹಿಂದೆ ಇದೇ ಕ್ಯುಮ್ಯುಲೇಟಿವ್ ಪದ್ಧತಿ ಜಾರಿಯಲ್ಲಿ ಬಂದು ಅನೇಕ ಜನರು ಅದನ್ನು ಪ್ರತಿಭಟನೆಮಾಡಿರುವುದು ತಮಗೆಲ್ಲಾ ತಿಳಿದೇ ಇರಬಹುದು. ಅದು ನಿಜವಾಗಿಯೂ ಅನರ್ಥಕಾರಕವಾದುದು. ಅದರಲ್ಲೂ ಮುಂದೆ ನರ್ಕಾರ ಪಾರ್ಟಿ ಸಿನ್ಸಂ ಮೇಲೆ ನಡೆಯಬೇಕಾಗುತ್ತದೆ. ಇಂಥಾ ವೋಟಿಂಗ್ ಪದ್ಧತಿಯಿಂದ ಯಾವುದೋ ಬಲವಿಲ್ಲದ ಪಾರ್ಟಿಗೆ ಅನಿರೀಕ್ಷಿತವಾಗಿ ಹೆಚ್ಚಿಗೆ ಓಟು ಬರುವ ಅವಕಾಶವಾಗಿ ಬಲಯುತವಾದ ನರ್ಕಾರಕ್ಕೆ ಅವಕಾಶವಿಲ್ಲದ ಪರಿಸ್ಥಿತಿಯುಂಟಾಗಬಹುದು.

ಈ ಎಲ್ಲಾ ಅಂಶಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ದೇಶದಲ್ಲಿ ಜುನಾವಣಾ ಕ್ಷೇತ್ರ ವಿಭಜನೆಮಾಡಿ ಸ್ಪಷ್ಟ ನಿರ್ದೇಶ ಮಾಡಬೇಕೆಂದು ಹೇಳಿ ನಾನು ಶ್ರೀ ವೀರಪ್ಪನವರು ಹೇಳಿದಂತೆ ಒಂದು ಸಮಿತಿಯನ್ನು ರಚಿಸಬೇಕೆಂದು ಹೇಳುತ್ತೇನೆ.

Janab J. MAHOMED IMAM.—I have a suggestion to make. So far as this House is concerned; there is no difference of opinion regarding the constitution of a Committee. But I would like to add a few more names, I would like to suggest this.

I move an amendment:

"That Sri H. B. Gundappa Gowda and Sri L. Siddappa may be added to the list suggested by Sri G. Veerappa if it is aggreeable to all."

Sri K. CHENGALARAYA REDDY (Leader of the House).—No objection.

Sri K. T. BHASHYAM.—"With powers of co-opt" ಎಂದು ಸೇರಿಸಿಕೊಳ್ಳುವುದಾದರೆ ಒಪ್ಪಿಕೊಳ್ಳುತ್ತೇವೆ

Janab J. MAHOMED IMAM.—ಆಗಬಹುದು.

Mr. SPEAKER.—They have no objection to add those names.

Sri M. V. KRISHNAPPA.—I would like to move:

"That Sri H. Siddaveerappa may also be added."

Sri K. T. BHASHYAM.—These three names can be added.

*ಶ್ರೀ ಎಂ. ಮಾದಯ್ಯನವರು (ಮೈಸೂರು—ನಿಮ್ನ ವರ್ಗ).—ಮಾನ್ಯ ಅಧ್ಯಕ್ಷರೇ, ಜುನಾವಣಾ ಕ್ಷೇತ್ರಗಳನ್ನು ಗೊತ್ತುಮಾಡುವ ವಿಚಾರವು ಬಹಳ ಪ್ರಾಮುಖ್ಯವಾದುದು. ಮೊದಮೊದಲು ನಾನು ಈ ವಿಚಾರದಲ್ಲಿ ಭಾಷಣ ಮಾಡಬೇಕೆಂದು ಇಚ್ಛೆಯಿಂದಿರಲಿಲ್ಲ. ಆದರೆ ಈ ನಂಬಂಧದಲ್ಲಿ ಎರಡು ಮೂರು ತರಹ ಕ್ಷೇತ್ರಗಳಿರುತ್ತವೆಂದು ಗೊತ್ತಾದ ಮೇಲೆ—ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನೂ ಸೂಚಿಸಿ, ಅವುಗಳ ಮೇಲೆ ಮಾನ್ಯ ಸದಸ್ಯರು ಯಾವಯಾವ ರೀತಿ ಅಭಿಪ್ರಾಯ ಬೀರುತ್ತಾರೆಂಬುದನ್ನು ತಿಳಿಯಬೇಕೆಂದು ನಿಂತಿದ್ದೇನೆ. ಮಾನ್ಯ ಸದಸ್ಯರು ಪ್ರತಿಯೊಂದು ವಿಚಾರದಲ್ಲೂ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾನು ತಿಳಿದುಕೊಂಡಿರುವ ಮಟ್ಟಿಗೆ ಈಗ ಮೂರು ತರಹ ಜುನಾವಣಾ ಕ್ಷೇತ್ರಗಳನ್ನು ಏರ್ಪಡಿಸಬಹುದಾಗಿದೆ. ಒಂದನೆಯದು, ನಮ್ಮ ಸಂಸ್ಥಾನವನ್ನು 99 ಕ್ಷೇತ್ರಗಳಾಗಿ ವಿಂಗಡಿಸಿ ಬರೀ ಸಿಂಗಲ್ ಮೆಂಬರ್ ಜುನಾವಣಾ ಕ್ಷೇತ್ರಗಳಾಗಿ ಮಾಡುವುದು. ಎರಡನೆಯದು, ಕೆಲವು ಪ್ರದೇಶಗಳನ್ನು ಮಲ್ಟಿಮೆಂಬರ್ ಕ್ಷೇತ್ರಗಳಾಗಿಯೂ, ಇನ್ನು ಪಿಕ್ಕವನ್ನು ಸಿಂಗಲ್ ಮೆಂಬರ್ ಕ್ಷೇತ್ರಗಳಾಗಿಯೂ ಮಾಡುವುದು. ಬರೀ ಮಲ್ಟಿ ಮೆಂಬರ್ ಕ್ಷೇತ್ರಗಳನ್ನಾಗಿಯೇ ವಿಂಗಡಿಸುವುದು ಮೂರನೆಯದು. ಮೊದಲನೆಯದರ ನಂಬಂಧವಾಗಿ ಹೇಳುತ್ತಾ, 99 ಕ್ಷೇತ್ರಗಳೆಂದು ಮಾಡಿ, ರಾಜ್ಯಾಂಗದ 172ನೆಯ ವಿಧಿಗೆ ವಿರೋಧವಾಗದಂತೆ 75,000 ಪ್ರಜಾನಂಖ್ಯೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕ್ಷೇತ್ರಗಳನ್ನು ವಿಂಗಡಿಸಿ ಆಪ್ಪಿಕೆ 19 ಸ್ಥಾನಗಳನ್ನು ನಿಮ್ನ ತರಗತಿಯವರಿಗೆ ಮೀಸಲಾಗಿಡತಕ್ಕದು. ಉಳಿದ 80 ಕ್ಷೇತ್ರಗಳನ್ನು ಸಾಮಾನ್ಯ ಜುನಾವಣಾ ಕ್ಷೇತ್ರಗಳಾಗಿ ಮಾಡುವುದು ಎಂದು ಹೇಳಿದಿರಿ. ಆಮೇಲೆ ಎರಡನೆಯದನ್ನು ತೆಗೆದುಕೊಂಡರೆ ಒಟ್ಟು 80 ಕ್ಷೇತ್ರಗಳೆಂಟ್ಟುಕೊಂಡು 61 ಕ್ಷೇತ್ರಗಳನ್ನು ಸಿಂಗಲ್ ಮೆಂಬರ್ ಕ್ಷೇತ್ರಗಳಾಗಿಯೂ, ಉಳಿದ 19ನ್ನು ಪ್ಲೂರಲ್‌ಮೆಂಬರ್ ಕ್ಷೇತ್ರಗಳಾಗಿಯೂ ಮಾಡಬೇಕಾಗುತ್ತದೆ ಎಂದರು. ಇನ್ನು ಮೂರನೆಯದು ಪೂರಾ ಮಲ್ಟಿಮೆಂಬರ್ ಕ್ಷೇತ್ರಗಳಿರುವುದು ಎಂದು ಹೇಳಿದ್ದಾರೆ. ಈಗ ನಾನು ಇವುಗಳಲ್ಲಿ ಪ್ರತಿಯೊಂದರ ಸಾಧಕ ಬಾಧಕಗಳನ್ನು ಯೋಚನೆ ಮಾಡುವುದಕ್ಕೆ ಸಹಾಯವಾಗುವಂತೆ ಈ ಬಗ್ಗೆ ತಮ್ಮ ಗಳ ನಲಹೆಗಳೇನೆಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ. ತಾವೇನೂ ಶಾಸನಸಭೆಗಳಲ್ಲಿ ನಿಮ್ನ ತರಗತಿಯವರನ್ನು ಪ್ರತಿನಿಧಿಸುವುದಕ್ಕೆಂದು 19 ಸ್ಥಾನಗಳನ್ನು ಕೊಟ್ಟಿಲ್ಲವೆಂಬುದು ನಿರ್ವಿವಾದ ವಿಚಾರವೆಂದು ಕಾಣುತ್ತದೆ. ಜನರಲ್ ಕಾನ್ಸ್ಟಿಟ್ಯುಯೆನ್ಸಿಯಲ್ಲಿರುವ ಜನರಲ್ ಸ್ಥಾನಗಳಿಗೆ ನಿಮ್ನ ತರಗತಿಗಳವರು ಬಾರದೆ ಇದ್ದಪಾತ್ರಕ್ಕೆ ಆ ಜುನಾಯಿತ ಸದಸ್ಯನು ಕೇವಲ ನಿಮ್ನ ವರ್ಗದವರಲ್ಲದವರನ್ನೇ ಪ್ರತಿನಿಧಿನುತ್ತಾನೆಂದೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಮಾಡುವ ವಿಧಾನ ಈರೀತಿ ಇರುವುದಾದರೆ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ. A citizen of India born among the Depressed Class will be elected and he has to be taken as the representative of the entire Constituency which will be called single-member constituency. Similarly, in the non-Depressed Class constituency, the citizens who will be elected, who may also belong as in the case of Depressed Class to any one of the other communities will also represent in entirety that constituency. If that is agreed, I hope

there is no difference of opinion, what prevents us from forming 99 single-member constituencies and 19 seats reserved for the members of the Scheduled Castes? That is my opinion.

Some are afraid and I do not want to repeat the argument said in favour of.....

ಅಧ್ಯಕ್ಷರು.—ಒಂದುವೇಳೆ ಹಾಗೆ ಮಾಡಿದಾಗ್ಯೂ ಕೂಡ ಆ 19 ಸ್ಥಾನಗಳಿಗೂ ಇಂಥಾ ಷೆಡ್ಯೂರ್ಡ್ ಕ್ಯಾಸ್ಟಿನ ವರೇ ಬರುತ್ತಾರೆಂದು ಹೇಗೆ ಹೇಳುತ್ತೀರಿ?

ಶ್ರೀ ಎಂ. ಮಾದಯ್ಯನವರು.—ಈಗ ತಮ್ಮ ಅಭಿಪ್ರಾಯದ ಪ್ರಕಾರ ಹೇಳುವುದಾದರೆ 99 ಜನರಲ್ ಕಾನ್ಸ್ಟಿಟ್ಯುಯನ್ಸಿಗಳ ಪೈಕಿ 19 ಸ್ಥಾನಗಳು ಈ ಡಿಪ್ರೆಸ್ಡ್ ಕ್ಲಾಸಿನಲ್ಲಿ ಹುಟ್ಟಿದವರಿಗೆ ತಾನೆ ಆಗಬೇಕು?

Sri K. T. BHASHYAM.—It will be reservation not of seat but of constituency which is against the Constitution.

ಅಧ್ಯಕ್ಷರು.—ಆಗ ಆ ಕ್ಷೇತ್ರಗಳಲ್ಲಿ ಜುನಾವಣೆಗಳೇ ಇದ್ದಂತಾಗಲಿಲ್ಲವಲ್ಲಾ? ಆರೀತಿ ಮಾಡುವುದಕ್ಕೆ ಆಗುವುದಿಲ್ಲ.

Sri M. MADIAH.—Suppose in a depressed class constituency there are a number of depressed class members standing for election from that constituency.

Mr. SPEAKER.—Reservation of depressed classes.....

Sri M. MADIAH.—No, sir.

Sri K. T. BHASHYAM.—I hope Sri Madiah understands me. It will not be a reservation of seat, but it will be a reservation of constituency for the scheduled castes, which will be opposed to the Constitution. That is why we have ruled it out;

Sri H. K. VEERANNA GOWDA.—That is a territorial reservation.

Sri M. MADIAH.—There will be 19 constituencies for the members of the scheduled castes.....

Mr. SPEAKER.—That cannot be done.

Sri M. MADIAH.—.....wherein the members of the depressed classes alone can stand as candidates.

Mr. SPEAKER.—Those constituencies will then become reserved for the depressed classes.

Sri M. MADIAH.—Will it be against the provisions of the Constitution?

Sri K. T. BHASHYAM.—That is what I have said. It will be a reservation of a constituency and not a reservation of a seat.

Sri M. MADIAH.—ಆದರೆ ಆರ್ಟಿಕರ್‌ನಲ್ಲಿ ಹೀಗೆ ಹೇಳಿದೆಯಲ್ಲ:—

Clause (2) of Article 170 says:

"The representation of each territorial constituency in the Legislative Assembly of a State shall be on the basis of population of that constituency as ascertained at the last preceding census of which the relevant figures have been published and shall, save in the case of the autonomous districts of Assam and the constituency comprising the cantonment and municipality of Shillong, be on a scale of not more than one member for every seventy-five thousand of the population:"

Sri K. T. BHASHYAM.—Quite so. That is a general seat. Out of the general seats, 19 are reserved for scheduled castes.

Sri M. MADIAH.—I do not differ from you.

Sri M. GOVINDA REDDY.—The Hon'ble Member forgets that it is provided in the Constitution that there must be one electoral roll for every constituency. There cannot be two electoral rolls for one constituency.

Mr. SPEAKER.—There will be no two electoral rolls.

Sri M. GOVINDA REDDY.—What he wants to say is that there should be a separate constituency for depressed classes.

(Voices: No, no.)

Sri M. MADIAH.—I will never say that and it is not possible for me to say.

ಆದುದರಿಂದ 99 ಕ್ಷೇತ್ರಗಳ ಪೈಕಿ 19 ಕ್ಷೇತ್ರಗಳನ್ನು ನಿಮ್ಮ ತರಗತಿಯಲ್ಲಿ ಹುಟ್ಟಿದವರಿಗೇ ಮೀಸಲಾಗಿಟ್ಟು, ಆಬಗ್ಗೆ ಆ ಜುನಾವಣೆಯ ಕ್ಷೇತ್ರಗಳಲ್ಲಿರತಕ್ಕ ಮತದಾರರೆಲ್ಲರೂ ಮತದಾನ ಮಾಡುವಂತೆ ಮಾಡತಕ್ಕದ್ದು ಒಂದು ವಿಧಾನ.....

ಅಧ್ಯಕ್ಷರು.—ಆರೀತಿ ಮಾಡುವುದಕ್ಕಾಗುವುದಿಲ್ಲ ವೆಂದು ಹೇಳಿದ್ದಾರೆ.

ಶ್ರೀ ಎಂ. ಮಾದಯ್ಯನವರು.—ಅದರಲ್ಲಿರತಕ್ಕ ತೊಂದರೆಯಾದರೂ ಏನು?

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಶ್ರೀ ಮಾದಯ್ಯನವರ ಅಭಿಪ್ರಾಯವಿರುವುದನ್ನು ನೋಡಿದರೆ ಆ 19 ಸ್ಥಾನಗಳ ಜುನಾವಣೆಗೆ ನಿಮ್ಮ ತರಗತಿಯವರು ಏನಾ ಮತೆ, ಯಾರೂ ನಿಲ್ಲಕೂಡದೆಂಬುದು ಅವರ ಅಭಿಪ್ರಾಯವೋ?

ಶ್ರೀ ಎಂ. ಮಾದಯ್ಯನವರು.—ನಿಲ್ಲಲೇಬೇಕೆಂದು ಎಲ್ಲಿ ಹೇಳಿದೆ?

Sri K. T. BHASHYAM.—ಹಾಗೆ ನಿರ್ಬಂಧ ಮಾಡುವುದು ಕಾನ್ಸ್ಟಿಟ್ಯುಯೆನ್ಸಿ ನಿಯಮಾವಳಿಗೆ ವಿರೋಧವಾಗುತ್ತದೆ. Because every constituency must have the power to represent the general constituency seats and out of those seats you may reserve 19. Therefore, the most that you can do is to create one schedule caste seat in a constituency of two seats.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಶ್ರೀ ಮಾದಯ್ಯನವರಿಗೆ ಇರುವ ತೊಂದರೆಯೇ ನೆಂಬುದನ್ನು ಊಹೆ ಮಾಡಿದ್ದರಲ್ಲಿ ಮತ್ತು ನಾನು ಕೂಡ ಆಲೋಚನೆ ಮಾಡಿರುವುದರಲ್ಲಿ ನಿಮ್ಮ ಪಂಗಡಗಳವರು ಉಳಿದೆಲ್ಲ ಜನಾಂಗಗಳಿಗಿಂತಲೂ ಬಹಳ ಹಿಂದುಳಿದಿದ್ದಾರೆಂಬುದು ವ್ಯಕ್ತವಾಗುತ್ತದೆ. ಆದುದರಿಂದಲೇ ಈಗಿರತಕ್ಕ ಸ್ಪೇಟ್ ಲೆಜಿಸ್ಲೇಚರುಗಳಲ್ಲಿ ಅವರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಏರ್ಪಾಡು ಮಾಡಲಾಯಿತು. ಈಗ ನಾವು ಆಲೋಚನೆ ಮಾಡುತ್ತಿರುವ ರೀತಿಯಲ್ಲಿ ಮತ್ತು ಈಗಾಗಲೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ರೀತಿಯಲ್ಲಿ ಯಾವ ಯಾವ ಜುನಾವಣೆ ಕ್ಷೇತ್ರಗಳಲ್ಲಿ ಒಬ್ಬರಿಗಿಂತ ಹೆಚ್ಚುಮಂದಿ ಸದಸ್ಯರು ಜುನಾಯಿತರಾಗಿ ಬರಲು ಅವಕಾಶವಿರುತ್ತದೆಯೋ ಅಂಥಾ ಜುನಾವಣೆ ಕ್ಷೇತ್ರಗಳಲ್ಲಿ ಒಂದನ್ನು ಸಾರ್ವತ್ರಿಕ ಜುನಾವಣೆಯ ಸ್ಥಾನವನ್ನಾಗಿಯೂ, ಮತ್ತೊಂದನ್ನು ಒಬ್ಬ ನಿಮ್ಮ ಪಂಗಡದವರಿಗೆಂದು ನಿಗದಿ ಮಾಡುವುದಾದರೆ, ಆಗ ಆ ವಿಧಾನದಿಂದ ಏನಾಗುತ್ತದೆಂದರೆ ಸಾರ್ವತ್ರಿಕ ಜುನಾವಣೆ ಕ್ಷೇತ್ರಕ್ಕಿಂತ, ಹಿಂದುಳಿದ ಪಂಗಡದವರಿಗೆ ಜುನಾಯಿಸುವ ಕ್ಷೇತ್ರಗಳ ವಿಸ್ತೀರ್ಣವು ದೊಡ್ಡದಾಗಿದ್ದು ಹಿಂದುಳಿದ ಪಂಗಡದ ಉಮೇದುವಾರರು ಸಂಚರಿಸುವ ಪ್ರದೇಶವು ಹೆಚ್ಚಾಗುವುದಲ್ಲದೆ ಖರ್ಚು ಸಹ ಹೆಚ್ಚಾಗುತ್ತದೆ. ಇಷ್ಟುತೊಂದರೆ ಮತ್ತು ಖರ್ಚನ್ನು ನಿರ್ವಹಿಸಲು ಅವರಿಗೆ ಸಾಧ್ಯವೇ ?

Sri K. PUTTASWAMY.—It would be better if the House converts itself into a committee and discussions are carried on.

Sri L. SIDDAPPA.—I am raising this point so that Honourable Members may think over the matter and if possible, find out a solution.

ಮು ತ್ತೊ ಂದು ತೊಂದರೆಯೇನೆಂದರೆ—ಸಿಂಗಲ್ ಮೆಂಬರ್ ಕಾರ್ಸ್ಟಿಟ್ಯೂಯನ್ಸಿ ಇರುವಕಡೆ 75 ಸಾವಿರ ಪ್ರಜೆಗಳಿರತಕ್ಕ ಪ್ರದೇಶಕ್ಕೆ ಒಬ್ಬ ಸದಸ್ಯರಿರಬೇಕೆಂದು ವಿಧಾಯಕವಿರುವಾಗ, ಹಿಂದುಳಿದ ಪಂಗಡದವರ ಕ್ಷೇತ್ರದ ಅರ್ಧದಷ್ಟು ವಿಸ್ತೀರ್ಣದಲ್ಲಿ ಇತರರ ಕಾರ್ಯಾಚರಣೆಯಿದ್ದರೆ ಈ ಹಿಂದುಳಿದವರ ಸಂಚರಣೆ ಹೆಚ್ಚಾಗುತ್ತದೆ. ಇದನ್ನು ತಪ್ಪಿಸುವುದಕ್ಕೇನು ಮಾಡಬೇಕು ?

Sri K. CHENGALARAYA REDDY (Chief Minister).—How to get over it ?

ಶ್ರೀ ಎಲ್. ಸಿದ್ದಪ್ಪನವರು.—ಅದಕ್ಕಾಗಿಯೇ ನಾನು ಈ ಪ್ರಸ್ತಾಪವೆತ್ತಿದ್ದು.

ಶ್ರೀ ಎಂ. ಮಾದಯ್ಯನವರು.—ಪ್ರತಿಯೊಂದು ಸ್ಪೇಟಿನಲ್ಲಿಯೂ ನಿಮ್ಮ ಪಂಗಡದವರಿಗೆ ಕೆಲವು ಕ್ಷೇತ್ರಗಳನ್ನು ಮೀಸಲಾಗಿಡಬೇಕೆಂದು ಕಾನೂನಿನಲ್ಲೇ ಹೇಳಿದೆ. ಆದರೆ ನಿಮ್ಮ ಪಂಗಡದವರಿಗೆ ಹಾಗೆ ಮೀಸಲಾಗಿಡುವ ಸ್ಥಾನಗಳಿಗೆ ಇತರರು ನಿಲ್ಲಲು ಅವಕಾಶ ವಿರಲೇಬೇಕೆಂದು ಎಲ್ಲೂ ಹೇಳಿಲ್ಲ. ಹಾಗಿದ್ದರೆ ಅದನ್ನಾದರೂ ತಿಳಿಸಿ. I am anxious to know the Provisions. ಕೆಲವು ಮಾನ್ಯ ಸದಸ್ಯರು ಈಗಾಗಲೆ ಸಿಂಗಲ್ ಮೆಂಬರ್ ಕಾರ್ಸ್ಟಿಟ್ಯೂಯನ್ಸಿ ಇರುವುದೇ ಬಹಳ ಉತ್ತಮವಾದುದೆಂದು ಹೇಳಿದ್ದಾರೆ. ಹರಿಜನರಿಗೇ ಆಗಲೀ ಅಥವಾ ಇತರರಿಗೇ ಆಗಲೀ ಒಂದು ಜುನಾವಣೆ ಕ್ಷೇತ್ರವನ್ನು ಹೆಚ್ಚಾಗಿಯೂ ಮತ್ತೊಬ್ಬರಿಗೆ ಕಡಿಮೆಯಾಗಿಯೂ ಮಾಡತಕ್ಕಂಥಾದ್ದು ಈಗಿನ ಪರಿಸ್ಥಿತಿಯಲ್ಲಿ ಅಷ್ಟು ಉತ್ತಮವಾದುದೇ ಎಂಬ ಬಗ್ಗೆ ಎಲ್ಲರ ಅಭಿಪ್ರಾಯವನ್ನೂ ನಾವೀಗ ಇನ್ನೂ ಪಡೆಯಬೇಕಾಗಿದೆ. ಕೆಲವು ಸದಸ್ಯರು ಸಿಂಗಲ್ ಮೆಂಬರ್ ಕಾರ್ಸ್ಟಿಟ್ಯೂಯನ್ಸಿ ಇರಬೇಕೆಂದೂ ಮತ್ತೆ ಕೆಲವರು ಪ್ಲೂರಲ್ ಮೆಂಬರ್ ಕಾರ್ಸ್ಟಿಟ್ಯೂಯೆನ್ಸಿ ಇರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ಮಧ್ಯೆ ನಿಮ್ಮ ತರಗತಿಗಳವರ ಪರವಾಗಿ 19 ಜುನಾವಣೆ ಕ್ಷೇತ್ರಗಳನ್ನು ಬೇರೆ ವಿಂಗಡಿಸಬೇಕಾಗಿದೆ. 80 ಜುನಾವಣಾ ಕ್ಷೇತ್ರಗಳಲ್ಲಿ ಬೇರೆ ಕೆಲವು ನಣ್ಣನಣ್ಣದಾದ ಅಂದರೆ 4-5 ಕ್ಷೇತ್ರಗಳನ್ನು ಕ್ರೋಢೀಕರಿಸಿ 75 ಸಹಸ್ರ ಪ್ರಜೆಗಳ ರೆಖ್ಖ ಬರುವಂತೆ ನೋಡಿಕೊಂಡು ಮಾಡುವುದರಲ್ಲೂ ಈ ಮೀಸಲಾಗಿಡಬೇಕಾಗಿರುವವರ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿ ಬರುತ್ತದೆ.

In the general constituencies where there are no depressed class seats reserved, will you not prevent the members of the scheduled castes from exercising their votes in favour of reserved seats.

ಈಗ ಪ್ರಾಯಶಃ ನಿಮ್ಮ ವರ್ಗದವರ ಆರ್ಥಿಕ ಸ್ಥಿತಿಯನ್ನೂ, ಮತ್ತು ಇತರ ಹಿಂದುಳಿದ ಪಂಗಡದವರ ಹೀನ ಸ್ಥಿತಿಯನ್ನೂ ಗಣನೆಗೆ ತಗೆದುಕೊಂಡರೆ ಅವರಿಗೆ ತುಂಬಾ ಅನಾನುಕೂಲವಾಗುತ್ತದೆಂಬುದು ನಿರ್ವಿವಾದವಾದ ವಿಷಯ. ಇನ್ನೊಂದು ಸಂದರ್ಭ ಇದೆ.

There are no depressed class seats reserved in the general constituencies. Do not prevent schedule castes from exercising their votes in favour of reserved seats.

ಇದು ಯತ್ನವಿಲ್ಲ. ಇದನ್ನು ಹೋಲಿಸಿ ನೋಡಿದರೆ ಕ್ಷೇತ್ರವು ವಿಶಾಲವಾದಂತೆರ್ಕಾ ಅನುಕೂಲತೆಗಳೂ ಕಡಮೆಯಾಗುತ್ತವೆ. ಆದ್ದರಿಂದ ಮಲ್ಟಿಮೆಂಬರ್ ಕಾರ್ಸ್ಟಿಟ್ಯುಯೆನ್ಸಿಗಿಂತ ಸಿಂಗಲ್ ಮೆಂಬರ್ ಕಾರ್ಸ್ಟಿಟ್ಯೂಯೆನ್ಸಿಯು ನಿಮ್ಮ ವರ್ಗದವರ ಹಿತದೃಷ್ಟಿಯಿಂದ ಬಹಳ ಸಾಧುವಾಗಿದೆ ಮತ್ತು ಇತರರಿಗೂ ಕೂಡ ಈಗಿನ ಪರಿಸ್ಥಿತಿಯಲ್ಲಿ ಅನುಕೂಲವಾಗಿದೆ. ಈ ವಿಚಾರವಾಗಿ ಜನಾಬ್ ಇಮಾಂರವರು ಮತ್ತು ಜನಾಬ್ ಹನೀಫ್‌ರವರು ಮುಂತಾದ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಚೆನ್ನಾಗಿ ಕಿವಿಗೊಟ್ಟು ಕೇಳಿದೆ. ಅದರಲ್ಲೂ ಜನಾಬ್ ಹನೀಫ್‌ರವರು ಸೂಚಿಸಿದುದು ನನಗೆ ಬಹಳ ಮೆಚ್ಚಿಗೆಯಾಗಿದೆ. ಏಕೆಂದರೆ, ನನಗೆ ಬಹು ದಿವಸದಿಂದಲೂ ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ಹೇಳುವ ಮಾತಿನಲ್ಲಿ ಬಹು ಆದರವಿದೆ. ಆದರೆ ಇತ್ತೀಚಿನ ದೇಶದ ಹಿತದೃಷ್ಟಿಯಿಂದ ನೋಡಿದರೆ ಪ್ರಾಯಶಃ ಅದು ಸರಿಹೋಗಲಾರದೆಂದು ಹೇಳಬೇಕಾಗಿದೆ. ಕ್ಷೇತ್ರವನ್ನು ದೊಡ್ಡದು ಮಾಡಿದರೆ ಒಂದು ತಾಲ್ಲೂಕೂ ಆಗಬಹುದು. ಆದ್ದರಿಂದ ಸಿಂಗಲ್ ಮೆಂಬರ್ ಕಾರ್ಸ್ಟಿಟ್ಯೂಯೆನ್ಸಿಯು ಎಲ್ಲಾ ದೃಷ್ಟಿಯಿಂದಲೂ ಉತ್ತಮವಾಗಿದೆ. ಆದರೆ ಕಾರ್ಸ್ಟಿಟ್ಯೂಯೆನ್ಸಿಗಳನ್ನು ಯಾವರೀತಿ ಮಾಡಬೇಕೆಂಬ ಮುಂದಿನ ಪ್ರಶ್ನೆಯೊಂದಿದೆ. ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿರುವ ಹಾಗೆ ಸಾಧ್ಯವಾದಷ್ಟು ಹಿಂದಿನ ಪದ್ಧತಿಯನ್ನೇ ಅನುಸರಿಸುವುದಾದರೆ ಅನೇಕವಾದ ಅನುಕೂಲತೆಗಳಿವೆ. ಹೆಚ್ಚಿನ ವಿಭಾಗಮಾಡಿ ತೊಂದರೆಯಾಗದ ಹಾಗೆ ಮಾಡುವುದೇ ಉತ್ತಮವಾಗಿದೆ. ಅದರ

ಪ್ರಕಾರ ಪ್ರಜಾಸಂಖ್ಯೆಯನ್ನೂ ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ 19 ಕ್ಷೇತ್ರಗಳನ್ನು ಗೊತ್ತುಮಾಡುವಾಗ ನಿಮ್ಮ ಪಂಗಡದ ಜನಸಂಖ್ಯೆ ಎಲ್ಲೆಲ್ಲಿ ಜಾಸ್ತಿಯಾಗಿದೆಯೋ ಅದನ್ನು ಗಣನೆಗೆ ತೆಗೆದುಕೊಳ್ಳುವುದು ಕ್ಷೇಮ ಎಂಬುದು ನನ್ನ ಅಭಿಪ್ರಾಯ. ಹೆಚ್ಚು ಪ್ರದೇಶಗಳನ್ನು ಮಾಡಿದರೆ ಅಡಳಿತಕ್ಕೆ ಸಂಬಂಧಪಟ್ಟ ತೊಂದರೆಗಳೂ ಹೆಚ್ಚುತ್ತವೆ. ಓಟರುಗಳಿಗೂ ದೂರ ಹೋಗಿಬರುವುದು ವಗೈರೆ ಅನಾನುಕೂಲಗಳಾಗುತ್ತವೆ. ಆದ್ದರಿಂದ ಎಲ್ಲಿ ಹೆಚ್ಚು ಜನಸಂಖ್ಯೆಯಿದೆಯೋ ಅದನ್ನು ಗಣನೆಗೆ ತೆಗೆದುಕೊಂಡರೆ ಚುನಾವಣಾ ನಂಬಂಧದ ಖರ್ಚೂ ಕಡಮೆ ಬೀಳುತ್ತದೆ. ಜನಸಂಖ್ಯೆ ಕಡಮೆಯಿದ್ದರೆ ಖರ್ಚು ಹೆಚ್ಚುತ್ತದೆ. ಆದರೆ 19 ಕ್ಷೇತ್ರಗಳಲ್ಲಿ ನಿಮ್ಮ ವರ್ಗದ ವರಿಗೂ ಮತ್ತು ಬೇರೆಯವರಿಗೂ ಒಟ್ಟಾಗಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡಿದರೆ ಹೆಚ್ಚಾಗುತ್ತದೆ.

Sri H. B. GUNDAPPA GOWDA.— That is only for 19.

Sri M. MADIAH.— Yes, it is only for 19. But we cannot avoid it.

ಅದಕ್ಕಿಂತ ಉತ್ತಮವಾದದ್ದಿಲ್ಲ. ಎಲ್ಲಾ ದೃಷ್ಟಿಯಿಂದಲೂ ಸಹ ಪ್ರಾಯಶಃ 61 ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಾಗಿಯೂ 19 ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಾಗಿಯೂ ಪರಿಗಣಿಸಿ ಆ ರೀತಿ ಮಾಡತಕ್ಕದ್ದು ಸೂಕ್ತವೆಂದು ಕಾನ್ಸ್ಟಿಟ್ಯೂಯೆನ್ಸಿ ಹಿತದೃಷ್ಟಿಯಿಂದ ಹೇಳುತ್ತೇನೆ. ಬಾಕಿ ವಿಚಾರಗಳನ್ನು ಮಾನ್ಯ ಮಿತ್ರರು ಅನೇಕವಾಗಿ ಹೇಳಿದ್ದಾರೆ. ಈಗಿನ ಪದ್ಧತಿ ಪ್ರಕಾರ ಡಿಸ್ಟ್ರಿಬ್ಯೂಟಿವ್ ವೋಟಿಂಗ್ ಆಗುವುದಿಲ್ಲ, ಅದು ಸರಿಯಲ್ಲ ಎಂದು ಹೇಳಿದ್ದಾರೆ. ಕಲರ್ ಬಾಕ್ಸ್ ವಿಚಾರ ವಗೈರೆ ಹೇಳಿದ್ದಾರೆ. ನ್ಯಾಯಾಂಗ ಸಚಿವರೂ ಸಹ ಕೆಲವು ಅನುಕೂಲವಾದ ಸೂಚನೆಗಳನ್ನು ಮಾಡಿದ್ದಾರೆ. ಗುಟ್ಟಾಗಿ ನಡೆಯಬೇಕಾದ್ದಕ್ಕೆ ಅವಕಾಶ ತಪ್ಪುತ್ತದೆಂದೂ ಹೇಳಿದರು. ಅವರು ಹೇಳಿದ ಅಂಶಗಳನ್ನೆಲ್ಲಾ ಯೋಚನೆ ಮಾಡಿದರೆ ಕಲರ್ ಬಾಕ್ಸ್ ಸಿಸ್ಟಂಗೆ ಹೋಗುವುದು ಸೂಕ್ತವೆಂದು ಕಾಣುತ್ತಿದೆ. ಅನುಭವದಿಂದ ನೋಡಿದರೆ ಅನಕ್ಷರಸ್ಥರಿಗೂ, ಹೆಂಗಸರು ಮಕ್ಕಳಿಗೂ ತೊಂದರೆ ಬಹಳವಾಗಿದೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಉಮೇದುವಾರರು ಕಡಿಮೆ. ಮಲ್ಟಿ ಮೆಂಬರು ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಜಾಸ್ತಿ; ಆದ್ದರಿಂದ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯೇ ಸೂಕ್ತವೆಂದು ಕಾಣುತ್ತದೆ. ನಿಮ್ಮ ವರ್ಗದವರ ಹಿತ ದೃಷ್ಟಿಯಿಂದ ನನ್ನ ಅಭಿಪ್ರಾಯವನ್ನು ಸೂಚಿಸಿದ್ದೇನೆ. ಇತರರಿಗೆ ಯಾವುದು ಸೂಕ್ತವೆಂಬುದನ್ನು ಮಾನ್ಯ ಮಿತ್ರರು ಸೂಚಿಸಬೇಕು ಎಂದು ಅರಿಕೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).— ನಮ್ಮ ಸರ್ಕಾರದವರು ಚುನಾವಣಾಕ್ಷೇತ್ರದ ವಿಭಜನೆಯ ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ಸರ್ಕಾರದವರು ಈಚೆಗೆ ನಂಸ್ಥಾನದ ಆಡಳಿತ ವಿಚಾರಗಳನ್ನು ಸಾಧಾರಣವಾಗಿ ಕೇಂದ್ರಕ್ಕೆ ವಹಿಸುವಾಗ ಈ ರೀತಿ ನಮ್ಮ ಮುಂದಿಡದಿದ್ದರೂ ಕೂಡ ಇಂಥ ಮುಖ್ಯ ವಿಷಯಗಳನ್ನು, ಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಸಭೆಯ ಮುಂದೆ ಮುಂಡಿಸಿರುವುದಕ್ಕೆ ನ್ಯಾಯಾಂಗ ಮಂತ್ರಿಗಳಿಗೆ ವಂದಿಸಬೇಕಾಗಿದೆ. ಮತ್ತೊಂದು ನಂದರ್ಭದಲ್ಲಿ ಕರ್ತವ್ಯ ಲೋಪವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಕೇಂದ್ರ ಸರ್ಕಾರದಿಂದ ಬಂದ ಕಾಗದವನ್ನು ಬಂದ ಹಾಗೆ ಸಭೆಯ ಮುಂದಿಡದೆ ಒಂದು ಸಮಿತಿ ಮಾಡಿ ವರದಿ ತರಿಸಿ ನಿರ್ದಿಷ್ಟವಾದ ನಿರ್ಣಯವನ್ನು ಸಭೆಯ ಮುಂದಿಟ್ಟು ಅನುಮೋದನೆ ಪಡೆದಿದ್ದರೆ ಚೆನ್ನಾಗಿತ್ತು. ಇಷ್ಟು ಮಹತ್ತರವಾದ ವಿಷಯವನ್ನು ಹೇಗೆ ಬಂತೋ ಹಾಗೆ ನಮ್ಮ ಮುಂದೆ ಅರ್ಥವಾಗದಿರುವ ರೀತಿಯಲ್ಲಿ ಇಟ್ಟಿರುವುದೂ ಒಂದು ಕರ್ತವ್ಯ ಲೋಪವೆಂದು ಹೇಳಿದರೆ ತಪ್ಪಾಗಲಾರದು.

ಈಗ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇರಬೇಕೆ, ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇರಬೇಕೆ ಎಂಬುದು ಒಂದು ಸಮಸ್ಯೆಯಾಗಿದೆ. ಕೆಲವರು ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಿರುವುದೇ ಸರಿ ಎಂದು ಹೇಳುತ್ತಿದ್ದಾರೆ. ಮತ್ತೆ ಕೆಲವರು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಸರಿಯೆಂದು ಸೂಚಿಸಿ ಅದರ ಸಾಧಕ ಬಾಧಕಗಳನ್ನು ಹೇಳುತ್ತಿದ್ದಾರೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಂತೆ 75 ಸಾವಿರ ಜನರಂತೆ ಲೆಕ್ಕಾಚಾರ ಒಂದು ರೀತಿ ಮಾಡಬೇಕೆಂದಿದ್ದಾರೆ. ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಅನೇಕ ತಾಲ್ಲೂಕುಗಳಿವೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈಚೆಗೆ ಜನಸಂಖ್ಯೆ ಹೆಚ್ಚಿದೆ, ಅಲ್ಲದೆ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಬರಬೇಕಾಗುತ್ತದೆ. ಆಗ ಅದು ಕಷ್ಟ, ಈಗ ಸಬ್‌ಡಿವಿಜ಼ನ್ ಇದ್ದೇ ಇದೆ, ಆದ್ದರಿಂದ ಎರಡು ತಾಲ್ಲೂಕಿಗೆ ಮೂರುಸ್ಥಾನ, ಮೂರು ತಾಲ್ಲೂಕಿಗೆ ಐದುಸ್ಥಾನ—ಈ ರೀತಿಯಾಗಿ ಜನಸಂಖ್ಯೆಯ ಆಧಾರದ ಮೇರೆ ನಿರ್ಧರಿಸಬಹುದು, ಅದನ್ನು ಬಿಟ್ಟು ಏಕೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಬೇಕು, 75 ಸಾವಿರಕ್ಕೆ ಒಬ್ಬ ಸದಸ್ಯರು ಇರಬೇಕು ಎಂದು ಹೇಳಿದರೋ ಅರ್ಥವಾಗುವುದಿಲ್ಲ.

ಅಧ್ಯಕ್ಷರು.— ಸಬ್ ಡಿವಿಜ಼ನ್ ಎರಡು ಮೂರಿದ್ದು ಜನಸಂಖ್ಯೆ ಹೆಚ್ಚಾಗಿದ್ದರೆ ಆಗ ಏನು ಮಾಡುತ್ತೀರಿ ?

ಶ್ರೀ ಬಿ. ಚನ್ನಬೈರೇಗೌಡರು.— ಆಷ್ಟುಸ್ಥಾನ ಕೊಡಬೇಕು.

ಅದಕ್ಕನುಸಾರವಾಗಿ ಅಲ್ಲಿಗೆ ಆಷ್ಟುಸ್ಥಾನಗಳನ್ನು ಕೊಡಬೇಕು. ಕೆಲವು ಕಡೆ ಮೂರು ತಾಲ್ಲೂಕುಗಳಿಗೆ ಐದು ಸ್ಥಾನಗಳು ಬರಬಹುದು ಮತ್ತೆ ಕೆಲವು ಕಡೆ ಎರಡು ತಾಲ್ಲೂಕುಗಳಿಗೆ ಮೂರು ಸ್ಥಾನಗಳು ಬರಬಹುದು, ಪ್ರಜಾ ಸಂಖ್ಯೆಯ ಪ್ರಕಾರ 75,000 ಕನಿಷ್ಟ ಪರಿಮಿತಿ, 89 ಸಾವಿರ ಪರಮಾವಧಿ ಪರಿಮಿತಿ ಇದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.— ಒಂದು ಸಬ್ ಡಿವಿಜ಼ನಲ್ಲಿ ಎರಡೇ ತಾಲ್ಲೂಕುಗಳಿದ್ದರೆ ಹೇಗೆ ಮಾಡುವುದು ?

ಶ್ರೀ ಬಿ. ಚೆನ್ನಬೈರೇಗೌಡರು.— ಇಂಗ್ಲೆಂಡ್ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿರುವ ಪರಿಸ್ಥಿತಿ ನಮ್ಮ ದೇಶದಲ್ಲಿಲ್ಲ. ನಮ್ಮ ದೇಶದಲ್ಲಿ ನಾನಾ ಕೋಮುಗಳಿವೆ, ಅವುಗಳಲ್ಲಿ ಅಲ್ಪ ಸಂಖ್ಯಾತರ ಹಿತರಕ್ಷಣೆಯ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಈಗ ಸೂಚಿಸಿರುವ ರೀತಿಯಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇದ್ದರೆ ಬಹುಸಂಖ್ಯಾತ ಕೋಮುಗಳವರು ಮಾತ್ರ ನಿಂತು ಚುನಾವಣೆಗಳಲ್ಲಿ ಗೆಲ್ಲಬಹುದೇ ಹೊರತು ಬೇರೆಯವರಿಗೆ ಸಾಧ್ಯವೇ ಇಲ್ಲ. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇದ್ದರೆ ಚುನಾವಣೆಯಲ್ಲಿ ಗೆಲ್ಲಲು ಮೈನರ್ ಕೋಮುಗಳವರಿಗೂ ಅವಕಾಶ ಸಿಕ್ಕುತ್ತದೆ. ಈಗ 19 ಸ್ಥಾನಗಳನ್ನು ಷೆಡ್ಯೂಲ್ಡ್ ಕೋಮುಗಳಿಗೆ ಮೀಸಲಾಗಿಡಬೇಕೆಂದಿದೆ. ಈ ಷೆಡ್ಯೂಲ್ಡ್ ಕೋಮಿನಲ್ಲಿ ಏಳೆಂಟು ಕೋಮುಗಳು ಸೇರಿವೆ. ಇವುಗಳಲ್ಲಿ ಒಂದೆ

ರಡು ಬಹುಸಣ್ಣ ಕೋಮುಗಳವರು ಚುನಾಯಿತರಾಗಿ ಬರಲು ಅವಕಾಶವೇ ಇರುವುದಿಲ್ಲ, ಆದಕಾರಣ ಪ್ಲೂರರ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರಬೇಕು. ಸಬ್ ಡಿವಿಜನ್ ಅಥವಾ ತಾಲ್ಲೂಕುಗಳ ಆಧಾರದ ಮೇಲೆ ಎರಡು ಮೂರು ಚುನಾವಣಾಸ್ಥಾನಗಳಿದ್ದರೆ ಎಲ್ಲ ಕೋಮುಗಳಿಗೂ ಚುನಾಯಿತರಾಗಿ ಬರಲು ಸರಿಯಾದ ಅವಕಾಶ ಸಿಕ್ಕುತ್ತದೆಂದು ನನ್ನ ಅಭಿಪ್ರಾಯ. ಈಗಾಗಲೇ ಕಾಂಗ್ರೆಸ್ ಪಕ್ಷದ ಸದಸ್ಯರು ಸಿಂಗರ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರಬೇಕೆಂದು ನಿರ್ಧಾರ ಮಾಡಿಕೊಂಡು ಬಂದಿರುವಂತೆ ಕಾಣುತ್ತದೆ. ಅದೇ ರೀತಿ ಮಾಡಿದರೆ ಪಾರ್ಟಿ ಸರ್ಕಾರವಿರುವಾಗ ಎದುರು ಪಕ್ಷದವರ ಮೇಲೆ ಸೇಡು ತೀರಿಸಿ ಕೊಳ್ಳಬೇಕಾದರೆ ಸುಲಭ. ಒಬ್ಬನಿಗೆ ಎರಡು ಮೂರು ಹೋಬಳಿಗಳಲ್ಲಿ ಬೆಂಬಲವಿದ್ದರೆ ಅವುಗಳನ್ನು ಹರಿದು ಹಂಚಿಬಿಟ್ಟರೆ ಅವನು ಗೆಲ್ಲಲು ಸಾಧ್ಯವೇ ಇಲ್ಲ. ಆದಕಾರಣ ಪ್ಲೂರರ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರಬೇಕು.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ನೆನ್ನೆಯ ದಿನ ಈ ವಿಚಾರವಾಗಿ ಲಾ ಸಚಿವರು ಬಹಳ ಕೂಲಂಕಷವಾಗಿ ಎಲ್ಲ ಅಂಶಗಳನ್ನೂ ತಿಳಿಸಿದ್ದಾರೆ. ಈಗ ಮುಖ್ಯವಾಗಿ ನಾವು ಆಲೋಚನೆ ಮಾಡಬೇಕಾದದ್ದು ಮೂರು ನಾಲ್ಕು ವಿಚಾರಗಳಿವೆ, ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ:

"It may perhaps be wise, though not very easy, to limit this disturbance of the existing order to the minimum extent possible."

ಎಂದು ಹೇಳಿದ್ದಾರೆ. ಇದು ಸರ್ಕಾರದ ಅಭಿಪ್ರಾಯವೆಂದೇ ಹೇಳಬಹುದು. ಒಟ್ಟಿನಲ್ಲಿ ಹೇಳುವುದಾದರೆ, ಚುನಾವಣೆ ನಡೆಯುವ ಸಂದರ್ಭದಲ್ಲಿ ಅನೇಕರು ಅನೇಕ ದೃಷ್ಟಿಗಳಿಂದ ನೋಡುವುದು ಸ್ವಾಭಾನಿಕವಾಗಿದೆ. ಚುನಾವಣೆಗೆ ನಿಲ್ಲಬೇಕೆಂದಿರುವವರಿಗೆ ಮುಂದಿನ ಚುನಾವಣೆಯಲ್ಲಿ ತಮ್ಮ ಸ್ಥಾನ ಏನಾಗುತ್ತದೆ ಎಂಬ ವಿಚಾರ ಮನಸ್ಸಿಗೆ ಬರುತ್ತದೆ. ಇದು ಮನುಷ್ಯನ ಸ್ವಭಾವ. ಇದನ್ನು ಕೆಲವರು ಹೊರಗೆ ಒಪ್ಪಿಕೊಳ್ಳದೇ ಯಿರಬಹುದು, ನಿಜವಾಗಿ ಒಪ್ಪಿಕೊಳ್ಳದೆ ಇರುವವರೂ ಇದ್ದಾರೆ, ಎಲ್ಲ ಚುನಾವಣೆಗೆ ನಿಂತರೂ ಜಯಶಾಲಿಯಾಗುತ್ತೇನೆಂದು ಹೇಳುವವರೂ ಇದ್ದಾರೆ. ನಮ್ಮ ಭಾರತ ರಾಜ್ಯಾಂಗದಲ್ಲಿ ನಮ್ಮ ರಾಜ್ಯಾಂಗ ಜಾತ್ಯಾತೀತವಾದುದು, casteless, classless ಎಂದು ಹೇಳಿದೆ. ಈ ದೃಷ್ಟಿಯಿಂದ ನಾವು ಪ್ರಸಕ್ತ ವಿಚಾರವನ್ನು ನೋಡಬೇಕಾಗಿದೆ. ಮೆಜಾರಿಟಿ, ಮೈನಾರಿಟಿ ಪಂಗಡಗಳು ಎಂಬುದನ್ನು ನಾವೀಗ ಮರೆಯಬೇಕಾಗಿದೆ. ಬೇರೆ ಸಂದರ್ಭಗಳಲ್ಲಿ ಈ ವ್ಯತ್ಯಾಸಗಳು ಬರುತ್ತವೆ; ಆಗ ಯೋಚನೆ ಮಾಡೋಣ. ಆದರೆ ಚುನಾವಣೆಗಳ ವಿಚಾರದಲ್ಲಿ ಇದನ್ನು ತರಲು ಸಾಧ್ಯವಿಲ್ಲ. ನಾನು ನೆನ್ನೆ ಒಂದೆರಡು ಪ್ರಶ್ನೆಗಳನ್ನು ಕೇಳಿದೆ. ಇಂಡಿಯಾ ದೇಶಕ್ಕೆಲ್ಲಾ ಒಂದೇ ರೀತಿಯ ವ್ಯವಸ್ಥೆ ಲಗತ್ತಾಗುತ್ತದೆಯೋ ಅಥವಾ ಬೇರೆ ಬೇರೆ ಪ್ರಾಂತಗಳಿಗೆ ಬೇರೆ ಬೇರೆ ಪದ್ಧತಿಯನ್ನು ಅನುಸರಿಸಲು ಅವಕಾಶ ಕೊಡುತ್ತಾರೆಯೇ ಎಂದು ಕೇಳಿದೆ. ನಾವು ಸೂಕ್ಷ್ಮವಾಗಿ ನೋಡುವುದಾದರೆ ರಾಜ್ಯಾಂಗದ ಪ್ರಕಾರ ಒಟ್ಟು ಇಂಡಿಯಾ ದೇಶದಲ್ಲೆಲ್ಲಾ ಒಂದೇ ರೀತಿಯ ವ್ಯವಸ್ಥೆ ಆಗಲೇಬೇಕು. ಅಲ್ಲದೆ ಇಲ್ಲಿ ನಮ್ಮ ಅಭಿಪ್ರಾಯ ಏನೇ ಇರಲಿ ನಮ್ಮ ಮೇಲೆ ಬೇರೆ ಒಬ್ಬರು ಇದ್ದಾರೆ, ಅವರಂತೆ ನಡೆಯಬೇಕೆಂಬುದನ್ನು ಮರೆಯಬಾರದು. ನಾವು ಬುದ್ಧಿವಂತರಾದರೆ ಈಗಲೇ ಇದನ್ನು ವಿಶಾಲ ದೃಷ್ಟಿಯಿಂದ ನೋಡಬೇಕು. ಈ ದಿನ ಇಂಡಿಯಾ ದೇಶದಲ್ಲಿ ಚುನಾವಣೆ ಕ್ಷೇತ್ರ ಹೀಗಿರಬೇಕೆಂದು ತೀರ್ಮಾನ ಮಾಡಿದರೂ ಕೂಡ ಯಾವಾಗಲೂ ಹೀಗೆಯೇ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅಮೆರಿಕಾ ದೇಶದಲ್ಲಿ ನೋಡಿದರೆ, ಒಂದೊಂದು ಚುನಾವಣೆಯಲ್ಲಿಯೂ ಚುನಾವಣೆ ಕ್ಷೇತ್ರಗಳು ಬದಲಾವಣೆಯಾಗುವುದಿಲ್ಲ. ಆದರೆ ಇಂಗ್ಲೆಂಡಿನಲ್ಲಿ ಹಾಗಿಲ್ಲ. ಹೀಗೆಯೇ ವ್ಯತ್ಯಾಸವು ಎಲ್ಲ ಕಡೆಯೂ ಆಗಲೇ ಬೇಕು. ಏಕೆಂದರೆ, ನಾನಾ ಕಾರಣಗಳಿಂದ ಒಂದೊಂದು ಪ್ರದೇಶದ ಜನಸಂಖ್ಯೆಯೂ ವ್ಯತ್ಯಾಸವಾಗುತ್ತಿರುತ್ತದೆ. ಆದುದರಿಂದ ಈಗ ತಾತ್ಕಾಲಿಕವಾಗಿ ಒಂದು ಮೂಲ ತತ್ವದ ಮೇಲೆ ಹೋಗುವುದೇ ಸುರಕ್ಷಿತವಾದ ಮಾರ್ಗ. ಹಾಗಿಲ್ಲದೆ ಬೇರೆ ದಾರಿಯನ್ನು ಅನುಸರಿಸಿದರೆ ಕಷ್ಟವಾಗುತ್ತದೆಂದು ಹೇಳಬೇಕಾಗಿದೆ.

ಈಗ ಸಿಂಗಲ್‌ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರಬೇಕೆ ಅಥವಾ ಪ್ಲೂರಲ್‌ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರಬೇಕೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ಸಮಸ್ಯೆ ಸುಲಭವಾಗಿ ನಿವಾರಣೆಯಾಗತಕ್ಕದ್ದು. ನಮಗೆ ಚಿಕ್ಕ ಚುನಾವಣಾ ಕ್ಷೇತ್ರವಾದಷ್ಟೂ ಒಳ್ಳೆಯದು. 75 ಸಾವಿರ ಪ್ರಜಾಸಂಖ್ಯೆಯ ಬದಲು 50ಸಾವಿರವೆಂದು ಮಾಡಿದ್ದರೆ ನನ್ನ ಅಭಿಪ್ರಾಯದಲ್ಲಿ ಇನ್ನೂ ಚೆನ್ನಾಗಿತ್ತು. 75ಸಾವಿರ ಜನರನ್ನು approach ಮಾಡುವುದು ಎಷ್ಟು ಕಷ್ಟವೆಂಬುದು ನನಗೂ ಗೊತ್ತು, ಚುನಾವಣೆಗೆ ನಿಂತಿರುವವರಿಗೂ ಗೊತ್ತು. ಈಗ ಸೂಚಿಸಿರುವಂತೆ 75ಸಾವಿರದಿಂದ 89ಸಾವಿರದ ವರೆಗಿನ ಪ್ರಜಾಸಂಖ್ಯೆಗೆ ಒಬ್ಬರಂತೆ ಮಾಡಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡುವುದೇ ಒಳ್ಳೆಯದು. ಚುನಾವಣೆಯೂ ಸುಲಭವಾಗುತ್ತದೆ. ಅಲ್ಲದೆ proportional representation ಪದ್ಧತಿಯಲ್ಲಿ ಎಷ್ಟು ತೊಂದರೆ ಇದೆ ಎಂಬುದು ನಮಗೆ ಗೊತ್ತಿದೆ. ಗ್ರಾಮಾಂತರದವರಿಗೆ ಗೊತ್ತಾಗುವುದು ಕಷ್ಟ. ಮುಂದೆ Political Majority and Minority ಎಂದು ಆಗುತ್ತದೆ. ಆದಕಾರಣ ಪಕ್ಷಗಳನ್ನು ಕಟ್ಟಿ ಕೊಂಡೇ ಮುಂದುವರಿಯಬೇಕು.

Sri S. RANGARAMIAH.—Which kind of constituency is better for ladies?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಒಂದೊಂದು ತಾಲ್ಲೂಕಿನಲ್ಲಿ ಬರೀ ಹೆಂಗಸರೇ, ಒಂದೊಂದರಲ್ಲಿ ಬರೀ ಗಂಡಸರೇ ಇರುತ್ತಾರೆಂದು ಅವರು ಯೋಚನೆ ಮಾಡಿರುವ ಹಾಗೆ ಕಾಣುತ್ತದೆ. ಅದು ಸಾಧ್ಯವಿಲ್ಲ. ಅನುಕೂಲ ಅನಾನುಕೂಲಗಳು ಎಲ್ಲರಿಗೂ ಒಂದೇ.

ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಇರಬೇಕೆಂಬ ವಿಚಾರದಲ್ಲಿ ಯಾವ ಅನುಮಾನವೂ ಇಲ್ಲ. Territorial adjustment ವಿಚಾರದಲ್ಲಿ ತೊಂದರೆ ಬರುತ್ತದೆ. ಇದು ಅನೇಕರಿಗೆ ಗೊತ್ತಿದೆ. ಅವರವರ ಪ್ರಭಾವವಿರುವ ತಾಲ್ಲೂಕುಗಳು ಬೇರೆ ಕಡೆಗೆ ಎಲ್ಲಿ ಸೇರಿ ಹೋಗುತ್ತವೆಯೋ ಎಂಬ ಯೋಚನೆ ಬರಬಹುದು. ಈಗ ನನಗೆ ನಮ್ಮ ಹಾಸನ ತಾಲ್ಲೂಕು ಎಲ್ಲಿ ಹೋಗುತ್ತದೆಯೋ ಎಂಬ ಯೋಚನೆ ಬರಬಹುದು.

ನಮ್ಮ ಉದ್ದೇಶ ಇಷ್ಟೆ. ಎಲ್ಲರಿಗೂ ಗೌರವ ಕೊಡೋಣ. ಬೇರೆ ಇನ್ನೊಂದು ಕಡೆಗೆ ಹೋಗಿ ಎನ್ನುವುದಕ್ಕೆ ಬದಲಾಗಿ ಯಾವುದಾದರೂ ಒಂದು ರೀತಿಯಲ್ಲಿ ಅನುಕೂಲಮಾಡಿ ಕೊಡಬೇಕೆಂಬ ಪ್ರಶ್ನೆ ನಮ್ಮ ಮುಂದೆ ಇದೆ. ಅದೇ ಕಷ್ಟವಾದ ವಿಚಾರ. ನನಗೆ ಅನ್ನಿಸುತ್ತದೆ: ನಾವು ಒಂದು ಕಡೆಯಿಂದ ಜನಸಂಖ್ಯೆಯ ಆಧಾರದ ಮೇಲೆ ನಿರ್ಧರ ಮಾಡಬೇಕೆಂದರೆ ಯಾವುದೋ

ಒಂದು logical conclusionಗೆ ಬರಬಹುದು. ನಂ ಸ್ಥಾನಾ ಮಳೆ ಒಂದೊಂದು ಗ್ರಾಮ, ಹೋಬಳಿಗಳನ್ನು ಒಟ್ಟುಗೂಡಿಸಿ ಸ್ಥಾನಗಳನ್ನು ಹಂಚಿ ಎಂದು ಹೇಳಬಹುದು. ಅದಿಲ್ಲದೇ ಡಿಸ್ಟ್ರಿಕ್ಟ್‌ಗಳನ್ನೇ ಇಟ್ಟುಕೊಳ್ಳೋಣ. ಮಲೆನಾಡಿನ ಹಿತದೃಷ್ಟಿಯನ್ನಿಟ್ಟುಕೊಳ್ಳೋಣ ಎಂದರೆ ಅದಕ್ಕೂ ದಾರಿ ಇದೆ. ಜನಸಂಖ್ಯೆಯ ಆಧಾರದ ಮೇಲೆ ಮಾಡುವುದಕ್ಕೆ ದೊಡ್ಡ ತೊಡಕು ಇದೆ. ಮಲೆನಾಡಿನಲ್ಲಿ ವಿಸ್ತೀರ್ಣ ಹೆಚ್ಚು, ಜನಸಂಖ್ಯೆ ಕಡಿಮೆ. ಮೈದಾನದಲ್ಲಿ ವಿಸ್ತೀರ್ಣ ಕಡಿಮೆ, ಜನಸಂಖ್ಯೆ ಹೆಚ್ಚು. ಶ್ರೀರಂಗಪಟ್ಟಣದಲ್ಲಿ ಕೆಲವುಕಡೆ ಬಹಳ ಜನ ಬಾಹುಳ್ಯ ವಿದೆ. ನಮಗೆ ಸುಲಭವಾಗಿ ಕಾರ್ಪಸ್ಟಿಟ್ಯುಯೆನ್ಸಿ ಸಿಕ್ಕುತ್ತದೆ. ನಮ್ಮ ಡಿಸ್ಟ್ರಿಕ್ಟ್ ತೆಗೆದುಕೊಂಡರೆ ಮಂಜರಾಬಾದಿನಲ್ಲಿ ಬಹಳ ವಿಸ್ತೀರ್ಣವಿದೆ. ಅದಕ್ಕೆ ಜನಸಂಖ್ಯೆಯ ಪ್ರಕಾರ ಒಂದೇ ಕಾರ್ಪಸ್ಟಿಟ್ಯುಯೆನ್ಸಿ ಆಗದುವುದಿಲ್ಲ. ಅದಕ್ಕೆ ಇನ್ನೊಂದು ಸೇರಿಸಬೇಕಾಗುತ್ತೆ. ಆದ್ದರಿಂದ ನಮ್ಮಲ್ಲೂ ಸಹ ಕಷ್ಟವಿದೆ. ಉಮೇದುವಾರನಿಗೂ ಸಹ ಅನೇಕ ಕಷ್ಟಗಳಿವೆ. ಮಲೆನಾಡಿನಲ್ಲಿ ಬಹಳ ದೂರ ತಿರುಗಬೇಕಾಗುತ್ತದೆ. ಮೈದಾನದಲ್ಲಿ ಸ್ವಲ್ಪ ದೂರ ಓಡಾಡಿದರೆ ಸಾಕಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಮೂರು ಡಿವಿಜ್ ಇಟ್ಟುಕೊಂಡು ನಾವು ಮುಂದುವರಿಯಬಹುದೇ ಎಂಬುದನ್ನು ಯೋಚನೆ ಮಾಡಬಹುದು. ಹಿಂದೆ ನಂದೀದುರ್ಗ, ಅಷ್ಟಗ್ರಾಮ, ನಗರ ಡಿವಿಜ್ ಅಂತ ಮಾಡಿದ್ದರು. ಅದೇ ರೀತಿ ಯೋಚನೆ ಮಾಡಬಹುದು, ಇದು ಒಂದೇ ದಾರಿ ಎಂದು ಕಾಣುತ್ತದೆ.

ಇನ್ನು ನಿಮ್ಮ ಪಂಗಡದವರ ಪ್ರಶ್ನೆ ಇದೆ. ನಿಮ್ಮ ಪಂಗಡದವರು ಎಂದರೆ ಬರೀ ಆದಿಕರ್ನಾಟಕರು ಅಷ್ಟೆ ಅಲ್ಲ. ಅವರಲ್ಲೂ ಅನೇಕ ವ್ಯತ್ಯಾಸಗಳಿವೆ. ಅಲ್ಪ ಸಂಖ್ಯಾತರು ಬಹಳವಾಗಿದ್ದಾರೆ. ಅವರೆಲ್ಲರಿಗೂ ನಮಾನಾವಕಾಶ ಕಲ್ಪಿಸಿಕೊಡಬೇಕೆಂಬುದು ಈಗಿನ ರಾಜ್ಯಾಂಗದ ಉದ್ದೇಶ, ನಮಗೆ ಬಂದಿರುವ ಸೂಚನೆಯೂ ಸಹ ಅದೇ. ಅವರಿಗೆ ಸ್ಥಾನಗಳನ್ನು ಹಂಚುವಾಗ ಫ್ಲೂರರ್ ಮೆಂಬರ್ ಕಾರ್ಪಸ್ಟಿಟ್ಯುಯೆನ್ಸಿ ಮಾಡಬೇಕು. ಅಲ್ಲಿ ಸ್ವಲ್ಪ ಹುಷಾರಾಗಿ ಹಂಚಬೇಕಾಗುತ್ತದೆ. ಚಿತ್ರದುರ್ಗ ಜಿಲ್ಲೆ ತೆಗೆದುಕೊಂಡರೆ ಬಣಜಾರರು. ಒಡ್ಡರು ಇತ್ಯಾದಿಯಾಗಿ ಅನೇಕ ತರಹ ಪಂಗಡಗಳಿವೆ. ಅವರೆಲ್ಲರಿಗೂ ಸೀಟು ಕೊಡಬೇಕಾಗುತ್ತದೆ. ಕಾರ್ಪಸ್ಟಿಟ್ಯುಯೆನ್ಸಿ ಹಂಚುವಾಗ ಅಂಥಾ ಸಂಖ್ಯೆ ಜಾಸ್ತಿ ಇದ್ದರೆ ಅವರಲ್ಲೂ ಚೆನಾಯಿಸಿ ಕೊಡಬಹುದು. ಹಾಗಿನ ಜಿಲ್ಲೆಯಲ್ಲಿ ಹೆಚ್ಚು ಜನಸಂಖ್ಯೆ ಅವರದೆ ಇದ್ದರೆ ಅವರಿಗೇ ಕೊಡೋಣ. ಆ consideration ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ, ಅಷ್ಟೆ.

ಓಟು ಮಾಡುವಾಗ ಬಣ್ಣದ ಪೆಟ್ಟಿಗೆ ಪದ್ಧತಿಯಿಂದ ತೊಂದರೆಯಿದೆ ಎಂದು ನ್ಯಾಯಾಂಗ ಸಚಿವರು ಹೇಳಿದರು. ಆ ರೀತಿ ನೋಡುತ್ತಾ ಹೋದರೆ ಯಾವ ಪದ್ಧತಿಯಲ್ಲೇ ಆಗಲೀ ತೊಂದರೆ ಇಲ್ಲದೇ ಇಲ್ಲ. Human ingenuity can cope with any situation. ಏನೇ ಮಾಡಿದರೂ ನೀವು ಚಾಪೆ ಒಳಗೆ ನುಗ್ಗಿದರೆ ಅವರು ರಂಗೋಲೆ ಒಳಗೆ ನುಗ್ಗುತ್ತಾರೆ. ಓಟಿನ ಪದ್ಧತಿ ಯಾವರೀತಿ ಇರಬೇಕು, ಬಣ್ಣದ ಪೆಟ್ಟಿಗೆ ಇರಬೇಕೇ ಅಥವಾ ಚಿನ್ಹೆಗಳನ್ನಿಟ್ಟುಕೊಳ್ಳಬೇಕೇ ಎಂಬುದು ಒಂದು ಪ್ರಶ್ನೆ. ಬಣ್ಣದ ಪೆಟ್ಟಿಗೆ ಪದ್ಧತಿಯನ್ನು ಇಟ್ಟುಕೊಂಡರೆ ಓಟುಗಳನ್ನು ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಿದರು. ಅದನ್ನು ತಪ್ಪಿಸುವುದಕ್ಕೆ ತಕ್ಕ ಬಂದೋಬಸ್ತು ಮಾಡಬಹುದು. ಅದೇನೂ ದೊಡ್ಡ ತೊಂದರೆ ಅಲ್ಲ. ಎಷ್ಟೋ ಕಡೆ ಈ ಪ್ರಯೋಗವನ್ನು ಮಾಡಿದ್ದಾರೆ. ಬಣ್ಣದ ಪೆಟ್ಟಿಗೆ ಪದ್ಧತಿ ಪ್ರಕಾರ ಓಟು ತೆಗೆದುಕೊಳ್ಳುವಾಗ ಗುಪ್ತವಾಗಿ ಬ್ಯಾಲೆಟ್‌ಪೇಪರ್ ತೆಗೆದುಕೊಳ್ಳಬೇಕಾಗುತ್ತದೆಂದು ಒಬ್ಬ ಸದಸ್ಯರು ಹೇಳಿದರು. ಅದಕ್ಕೂ ತಕ್ಕ ರೀತಿಯಲ್ಲಿ ಮಾಡಬಹುದು.

ಶ್ರೀ ಕೆ. ಟಿ. ಭಾಷ್ಯಂರವರು.—ಬಣ್ಣದ ಪೆಟ್ಟಿಗೆ ಪದ್ಧತಿ ಇದ್ದರೂ ಕೂಡ ಅಷ್ಟೇನೂ ತೊಂದರೆಯಾಗುವುದಿಲ್ಲ. Even in the smallest constituency there will be 36,000 voters. So I do not put much stress on that. I agree with colour box system.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಷ್ಟು ಜನ ಓಟುದಾರರಿರುವಾಗ ಎಷ್ಟು ಸುಲಭವಾದ ರೀತಿಯಲ್ಲಿ ಓಟು ಕೊಡುವುದಕ್ಕೆ ಅನುಕೂಲ ಕಲ್ಪಿಸುತ್ತೀರೋ ಅಷ್ಟೂ ಚೆನ್ನಾಗಿ ಪ್ರಜಾಪ್ರಭುತ್ವ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇದಕ್ಕೆ ಬಣ್ಣದ ಪೆಟ್ಟಿಗೆ ಪದ್ಧತಿಯನ್ನು ಬಿಟ್ಟರೆ ಬೇರೆ ಯಾವುದೂ ನನಗೆ ಸರಿಯೆಂದು ಕಾಣುತ್ತಿಲ್ಲ.

ಇಷ್ಟು ಮುಖ್ಯವಾದ ಪ್ರಶ್ನೆಗಳನ್ನು ನಾವು ಚರ್ಚೆ ಮಾಡಿ ಎಲ್ಲರೂ ಸೇರಿ ಒಂದು ನಿರ್ಧಾರಕ್ಕೆ ಬರಬೇಕಾಗಿದೆ. ಈ ವಿಷಯದಲ್ಲಿ ಒಂದು ಸಮಿತಿ ರಚನೆ ಮಾಡಬೇಕೆಂಬ ಸೂಚನೆ ಬಂದಿದೆ. ಇವತ್ತು ಒಂದು ತೀರ್ಮಾನ ತೆಗೆದುಕೊಳ್ಳಬಹುದು. ಅದರಲ್ಲಿ ಕಷ್ಟವೇನೂ ಇಲ್ಲ. ಇವತ್ತು ಚರ್ಚೆ ಮಾಡುವಾಗ ಯಾವ ಕಷ್ಟ ಬರುತ್ತದೆಯೋ ಆಗಲೂ ಅದೇ ಕಷ್ಟ ಬರುತ್ತದೆ. ಈ ವಿಷಯದಲ್ಲಿ ಕಾಂಗ್ರೆಸ್‌ನವರಿಗೆ ಎಷ್ಟು ಕಾತುರತೆ ಇದೆಯೋ ನಮಗೂ ಅಷ್ಟೇ ಕಾತುರತೆ ಇದೆ. ಆ ಸಮಿತಿಯ ಸದಸ್ಯರುಗಳ ಹೆಸರುಕಿ ಶ್ರೀ ವೀರಪ್ಪನವರು ಸೂಚಿಸಿರುವ ತಿದ್ದುಪಡಿಗಳನ್ನು ನೋಡಿ ನನಗೆ ಸ್ವಲ್ಪ ವ್ಯಸನವಾಯಿತು. ಅದರಲ್ಲಿ ನನ್ನ ಹೆಸರು ಇರಲಿಲ್ಲ ಎಂಬುದಕ್ಕಾಗಿ ಹೇಳುತ್ತಿಲ್ಲ. ಆ ಮೇಲೆ ಜನಾಬ್ ಇಮಾಂ ರವರು ನನ್ನ ಹೆಸರನ್ನು ಸೂಚಿಸಿದರು. ಅದರಲ್ಲಿ ನಾನು ಇರಬೇಕೆಂದು ಆಶೆಯೂ ಇಲ್ಲ, ಹೊರಗೆ ಇರುವುದಕ್ಕೂ ಸಿದ್ಧವಾಗಿದ್ದೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ I do not like the way in which you approach this problem. ತಿದ್ದುಪಡಿ ಸೂಚಿಸುವಾಗ ನೀವು ಉದಾರತೆಯಿಂದ ಮಾಡುತ್ತೀರೆಂದು ತಿಳಿದುಕೊಂಡಿದ್ದೆ.

ಅಧ್ಯಕ್ಷರು.—ಅದರಲ್ಲಿ ಶ್ರೀ ಹುಚ್ಚೇಗೌಡರು ಇದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಶ್ರೀ ಬಿ. ಹುಚ್ಚೇಗೌಡರು ಇಲ್ಲ. ನೀವು ಇನ್ನು ಸ್ವಲ್ಪ ಉದಾರತೆಯಿಂದ ಇದ್ದು ನಾಲ್ಕಾರುಜನ ಬೇರೆ ಪಾರ್ಟಿಗಳವರನ್ನು ಸೇರಿಸಿಕೊಂಡಿದ್ದರೆ ಕಷ್ಟವೇನಾಗುತ್ತಿತ್ತು? ಈಗ ಅವರು ಮಾಡುವ ಸಲಹೆ ಆಕ್ಷೇಪಾರ್ಹ ಅಲ್ಲ.

Sri K. T. BHASHYAM.—Power to co-opt also was a suggestion.

Sri H. B. GUNDAPPA GOWDA.—This is not worth while because it is not a final proposal. There is another authority sitting in judgment over you. ಅಧಿಕಾರ ವಿರುವವರಿಗೆ ಉದಾರತೆ ಇರಬೇಕು. ಇಂಥಾ ವಿಷಯಗಳಲ್ಲಿ ನೀವು ಉದಾರ ಮನೋಭಾವವನ್ನು ತೋರಿಸಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ತಮ್ಮ ಕಾಲದಲ್ಲಿ ಯಾವರೀತಿ ಇತ್ತು ಎಂಬುದನ್ನು ಸ್ವಲ್ಪ ಯೋಚನೆಮಾಡಿ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆ ಕಾಲದಲ್ಲಿ ನಮ್ಮ ವಿಚಾರ ತಿಳಿದುಕೊಳ್ಳಲು ಶ್ರೀ ರಂಗರಾಮಯ್ಯನವರು ಈ ಸಭೆಯಲ್ಲಿರಲಿಲ್ಲ. ಇವತ್ತು ಕೂಡ ನಾನು ಸವಾಲು ಹಾಕುತ್ತೇನೆ. You did not co-operate with me. But I did not leave you. ಆದ್ದರಿಂದ ನಾನು ಹೇಳುವುದೇನೆಂದರೆ ಇಂಥಾ ಸಮಸ್ಯೆಗಳನ್ನು ಎದುರಿಸುವಾಗ ಬೇರೆಯವರಿಗೆ ಹೆಚ್ಚಿನ ಅವಕಾಶ ಕೊಟ್ಟಿದ್ದರೆ ನಿಮಗೇನು ತೊಂದರೆಯಾಗುತ್ತಿತ್ತು ? ಮುಂದೆಯಾದರೂ ಹೆಚ್ಚು ಅವಕಾಶ ಕೊಡಿ. ಈಗ ಸೂಚಿಸಿರುವಂತೆ ಸಮಿತಿಯನ್ನು ರಚನೆ ಮಾಡಿ, ಸಂತೋಷ. ಆದರೆ ಆ ಸಮಿತಿಯವರು ನಿಧಾನ ಮಾಡದೆ ಆದಷ್ಟು ಜಾಗ್ರತೆ ವರದಿಯನ್ನು ಕಳುಹಿಸಿಕೊಡುವಂತೆ ಹೇಳಬೇಕು. ಈಗ ಅವರು ಒಂದು ತಿಂಗಳು ಅವಧಿಯನ್ನು ಹಾಕಿಕೊಂಡಿರುವಂತೆ ಕಾಣುತ್ತದೆ. I think it ought to be still less—within a fortnight.

Sri K. T. BHASYAM.—I propose to call the meeting on Monday and finish it by Saturday.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಒಟ್ಟಿನಲ್ಲಿ ಆದಷ್ಟು ಜಾಗ್ರತೆ ಸಭೆ ಸೇರಿ ಅಮೂಲ್ಯ ಸಲಹೆಗಳನ್ನು ಮಾಡೋಣವೆಂಬುದೇ ನನ್ನ ಆಶಯ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ನಾನೂ ಕೂಡ ಸಿಂಗಲ್ ಮೆಂಬರ್ ಚುನಾವಣಾ ಕ್ಷೇತ್ರಗಳೇ ಇರಬೇಕೆಂದು ವಾದಿಸುವವನಾಗಿದ್ದೇನೆ. ಸಿಂಗಲ್ ಮೆಂಬರ್ ಚುನಾವಣಾ ಕ್ಷೇತ್ರ ಪದ್ಧತಿಯಲ್ಲಿರುವ ಪ್ರಾಮುಖ್ಯವಾದ ಒಂದು ವಿಚಾರವೆಂದರೆ, ಇದರಲ್ಲಿ ಉಮೇದುವಾರನು ಚುನಾವಣಾ ಕ್ಷೇತ್ರ ಚಿಕ್ಕದಾಗಿರುವುದರಿಂದ, ಮತ್ತು ಓಟುದಾರರಿರತಕ್ಕ ಕ್ಷೇತ್ರದಲ್ಲೇ ತಾನೂ ಇರತಕ್ಕವನಾದ್ದರಿಂದ ಆಯಾ ಸ್ಥಳದ ಅವಶ್ಯಕತೆಗಳೇನು, ತನ್ನ ಕ್ಷೇತ್ರದಲ್ಲಿ ಏನೇನು ರಚನಾತ್ಮಕ ಕೆಲಸಗಳನ್ನು ಮಾಡಬೇಕು ಎಂಬುದನ್ನು ತಿಳಿದು ಆ ಜನರ ಕಷ್ಟನಷ್ಟಗಳನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಬಹಳ ಸೌಕರ್ಯ ಪುಳವನಾಗಿರುತ್ತಾನೆ. ಇದು ಮೊದಲನೆಯ ಅನುಕೂಲ. ಎರಡನೆಯದಾಗಿ, ಸಿಂಗಲ್ ಮೆಂಬರ್ ಚುನಾವಣೆಯ ಕ್ಷೇತ್ರಗಳನ್ನಿಟ್ಟುಕೊಂಡರೆ ಉಮೇದುವಾರನಿಗೆ ಚುನಾವಣೆಯಲ್ಲಿ ಅಷ್ಟು ಹೆಚ್ಚಿನ ಖರ್ಚಿಗೆ ಕಾರಣವಿರುವುದಿಲ್ಲ. ಸಾಧಾರಣವಾಗಿ ಚುನಾವಣೆಗಳಲ್ಲಿರತಕ್ಕ ಲಂಚರುಷುವತ್ತುಗಳಿಗೆ, ಮಲ್ಟಿ ಮೆಂಬರ್ ಚುನಾವಣಾ ಕ್ಷೇತ್ರವಿದ್ದರೆ ಎಷ್ಟು ಮಟ್ಟಿನ ಅವಕಾಶ ವಿರುತ್ತದೆಯೋ ಅಷ್ಟು ಮಟ್ಟಿಗೆ ಇದರಲ್ಲಿರುವುದಿಲ್ಲ. ಸಂಪೂರ್ಣವಾಗಿ ಈ ಕಳಂಕವನ್ನು ತೊಡೆದುಹಾಕುವುದಕ್ಕಾಗದೆ ಹೋದರೂ ಬಹುಮಟ್ಟಿಗೆ ಕಡಿಮೆಯಾಗುತ್ತದೆಂದು ಹೇಳಬಹುದು. ಚುನಾವಣೆಗಳ ಪವಿತ್ರತೆಯನ್ನು ಸ್ಥಾಪನೆ ಮಾಡುವುದಕ್ಕೆ ಇದೊಂದು ಸಾಧನ.

ಮೂರನೆಯದಾಗಿ, ಈ ವಿಷಯವನ್ನು ನಾವು ಅಖಿಲ ಭಾರತ ದೃಷ್ಟಿಯಿಂದಲೂ ನೋಡಬೇಕು. ಸ್ವಾತಂತ್ರದ ಒಂದು ಹೊಸ ರಾಜ್ಯಾಂಗ ಜಾರಿಗೆ ಬಂದ ಮೇಲೆ ಇದೇ ಮೊದಲನೆಯ ಸಾರಿ ನಾವೀಗ ಓಟು ಮಾಡುತ್ತಿದ್ದೇವೆ. ಈ ಹಿಂದೆಯೇ ಓಟರುಗಳು ಅವಿದ್ಯಾವಂತರುಗಳಾಗಿರುವುದರ ದೆಸೆಯಿಂದ ಸರಿಯಾಗಿ ಓಟು ಕೊಡುವುದಕ್ಕೆ ಬಾರದೆ ಎಷ್ಟೋ ವೋಟುಗಳು invalid ಆಗಿರುವುದೂ, ಯಾರಿಗೋ ಕೊಡಬೇಕಾದ ಓಟು ಯಾರಿಗೋ ಹೋಗಿರುವುದೂ ನಮ್ಮ ಅನುಭವಕ್ಕೆ ಬಂದಿವೆ. ಅದೂ ಅಲ್ಲದೆ ಈ ಚುನಾವಣೆಯಲ್ಲಿ 21 ವರ್ಷ ವಯಸ್ಸಿನ ಎಲ್ಲಾ ಗಂಡಸರು ಮಾತ್ರವೇ ಬರುವುದಲ್ಲದೆ ಹೆಂಗಸರೂ ಭಾಗವಹಿಸುವುದರಿಂದ, ಒಟ್ಟು ಓಟರುಗಳ ಸಂಖ್ಯೆ 30-40 ಸಾವಿರದಷ್ಟು ಒಂದೊಂದು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಲ್ಲೂ ಇರುತ್ತದೆ. ಇವರಿಷ್ಟು ಮಂದಿಯೂ ಓಟು ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದೇ ಒಂದು ದೊಡ್ಡ ಸಮಸ್ಯೆ. ಅದಕ್ಕಾಗಿ ಬಿಣ್ಣದ ಪೆಟ್ಟಿಗೆಗಳನ್ನೇ ಮಾಡಲಿ. ಏನೇ ಮಾಡಿದರೂ ಅವರಿಗೆ ಸರಿಯಾಗಿ ಓಟು ಮಾಡಲಿಕ್ಕೆ ತಿಳಿಯದೆ ಯಾವ ವ್ಯಕ್ತಿಯನ್ನು ನ್ಯಾಯವಾಗಿ ತರಬೇಕೆಂದು ಆಶಿಸುತ್ತಾರೋ ಅವನಿಗೆ ಬದಲಾಗಿ ಬೇರೊಬ್ಬನನ್ನು ತಂದುಬಿಡಬಹುದು. ಹೀಗಾಗಿ ನ್ಯಾಯವಾಗಿ ಜಯಗಳಿಸಬೇಕಾದವನಿಗೆ ಧಕ್ಕೆಯುಂಟಾಗುವ ಸಂಭವಗಳೂ ಇವೆ. ಆದ್ದರಿಂದ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿಯಿದ್ದರೆ, ಇದ್ದದ್ದರಲ್ಲೇ ಓಟುದಾರರೆಲ್ಲಾ ಹೋಗಿ ಸುಲಭವಾಗಿ ಓಟುಮಾಡಬಹುದಾಗಿ ತೋರುತ್ತದೆ. ವಾಸ್ತವವಾಗಿಯೂ ಇದು ಬಹಳ ಮುಖ್ಯವಾದ ವಿಚಾರವೆಂದು ನಾನು ಒತ್ತಿ ಹೇಳುತ್ತೇನೆ. ಏಕೆಂದರೆ, ಸ್ವಾತಂತ್ರ ಬಂದು ನಮ್ಮ ದೇಶದಲ್ಲಿ ಪ್ರಜ್ಞಾಸತ್ತಾತ್ಮಕ ಸರ್ಕಾರವನ್ನು ರೂಪಿಸುವ ಈ ತರುಣದಲ್ಲಿ Healthy convention ಗಳನ್ನು ರೂಢಿಗೆ ತರುವ ಪ್ರಯತ್ನ ಮಾಡಬೇಕು. ಪ್ರಜಾನಶ್ಚೈಗೆ ಲಗತ್ತಾದ ನಡೆವಳಿಕೆಗಳನ್ನು ಆಚರಣೆಗೆ ತರಬೇಕು. ಯಾವ ಉಮೇದುವಾರನೇ ಆಗಲಿ, ತಾನು ಯಾವ ಕ್ಷೇತ್ರದಿಂದಲೇ ಚುನಾಯಿತನಾಗಿ ಬಂದಿರಲಿ, ಆತನು ಚುನಾಯಿತನಾಗಿ ಬಂದ ಮೇಲೆ ಓಟ್ದು ದೇಶದ ದೃಷ್ಟಿಯಲ್ಲಿ ಯೋಚನೆ ಮಾಡುವುದಕ್ಕೆ ಪ್ರವರ್ತಿಸುತ್ತಾನೆಂದು ತಿಳಿಯಬೇಕೇ ಹೊರತು, ತಾನು ಯಾರಿಂದ ಚುನಾಯಿತನಾಗಿದ್ದಾನೆಯೋ, ಯಾರಿಂದ ಬೆಂಬಲ ಪಡೆದಿದ್ದಾನೆಯೋ, ಆ ಚುನಾವಣಾದಾರರ ಕಷ್ಟಸುಖಗಳಲ್ಲಿ ಭಾಗಿಯಾಗಬೇಕೆಂದೆಣಿಸಕೂಡದು. ಎಲ್ಲಿಯ ತನಕ ನದಸ್ಯರಲ್ಲಿ ಅಂಥ ಭಾವನೆಗಳಿರುತ್ತವೆಯೋ ಅಲ್ಲಿಯವರೆಗೆ ದೇಶ ಉದ್ಧಾರವಾಗುವುದಿಲ್ಲ. ಮತ್ತು ಯಾವ ಪಕ್ಷವೇ ಜಯಗಳಿಸಿಬರಲಿ—ಅದು ಸೋಷಲಿಸ್ಟ್ ಆಗಿರಲಿ, ಇಲ್ಲವೇ ಕಮ್ಯೂನಿಸ್ಟ್ ಆಗಿರಲಿ—ಏಕೆಂದರೆ ಹಿಂದೆ ನಡೆದ ಚುನಾವಣೆಗಳಲ್ಲಿದ್ದಂತೆ ವ್ಯಕ್ತಿಗಳ ಅಥವ ಜಾತಿಗಳ ಪ್ರಭಾವದ ಮೇಲೆ ಇನ್ನು ಮುಂದೆ ಚುನಾವಣೆಗಳು ನಡೆಯುವುದಿಲ್ಲ ; ಎಷ್ಟೋ ಪ್ರಭಾವಶಾಲಿಗಳಾದ ವ್ಯಕ್ತಿಗಳಾಗಿರಲಿ ರಾಜಕೀಯ ದಲ್ಲಿ ಅವರ ಸ್ಥಾನ ಮುಗಿಯಿತು. ಹಾಗೆಯೇ, ರಾಜಕೀಯ ದೃಷ್ಟಿಯ ಮೇಲೆ ಪಕ್ಷಗಳನ್ನು ಕಟ್ಟಿ ಒಂದು ರೀತಿಯಲ್ಲಿ ಡಿಕ್ಟೇಟೋರಿಯಲ್ ಆಗಿ ದಬ್ಬಾಳಿಕೆಯಿಂದ ಕೂಡಿದ ಗುಂಪುಗಳನ್ನು ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಈಗಿರುವುದು ಏನಿದ್ದರೂ ಆರ್ಥಿಕ ತಳಹದಿಯ ಮೇಲೆ ಪಕ್ಷಗಳನ್ನು ಕಟ್ಟಬೇಕು ಅಷ್ಟೆ. ಓಟುದಾರರಿಗೆ ನಮ್ಮ ದೇಶ ಯಾವ ಸ್ಥಿತಿಯಲ್ಲಿದೆ, ಯಾವ ಪಕ್ಷಕ್ಕೆ ತಮ್ಮ ಓಟುಕೊಟ್ಟರೆ ಒಳ್ಳೆಯದಾಗುತ್ತದೆಂಬುದನ್ನು ತಿಳಿದುಕೊಳ್ಳುವ ಶಕ್ತಿಯಿರಬೇಕು. ಈ ಪಾರ್ಟಿ ಸರ್ಕಾರ ಬಂದು ಇಷ್ಟು ವರ್ಷವಾಯಿತು, ಇವರಿಂದ ಆರ್ಥಿಕ ಸ್ಥಿತಿ ಎಷ್ಟುಮಟ್ಟಿಗೆ ಉತ್ತಮವಾಗಿದೆಯೆಂಬುದು ಆ ವ್ಯಕ್ತಿಗೆ ಅರ್ಥವಾದರೆ, ಪ್ರತಿಯೊಬ್ಬ ವೋಟುದಾರನೂ ತನ್ನ ಚುನಾವಣಾ ಕ್ಷೇತ್ರದಲ್ಲಿ ಯಾರಿಗೆ ಓಟುಕೊಡಬೇಕೆಂಬ ತಿಳಿವಳಿಕೆ ಬರುತ್ತದೆ. ಹಾಗೆ ಪ್ರತಿಯೊಬ್ಬನಿಗೂ ತಿಳಿವಳಿಕೆಯಿದ್ದು ತಕ್ಕಷ್ಟು ಮಟ್ಟಿಗೆ ವಿದ್ಯಾವಂತನಾಗಿ ಓಟ್ದು ದೇಶದ ರಾಜಕೀಯವನ್ನು ತಿಳಿದುಕೊಂಡು ನಾವು ಕೊಡುವ ಓಟು ವ್ಯಕ್ತಿಗಾಗಿ ಅಲ್ಲ, ಸ್ವಾರ್ಥಸಾಧನೆಗಾಗಿ ಅಲ್ಲ, ಓಟ್ದು

ದೇಶದ ಹಿತಸಾಧನೆಗಾಗಿ ಎಂಬ ಅರಿವಿನಿಂದಲೂ ಪ್ರತಿಯೊಬ್ಬನೂ ಓಟು ಮಾಡುವಂತಾಗಬೇಕು. ಹಿಂದೂ ದೇಶವು ಒಂದು ದೊಡ್ಡ ಪ್ರಜಾಸಕ್ತ್ಯೆಯ ರಾಜ್ಯವಾಗಿದೆ. 15 ಕೋಟಿ ಮತದಾರರು ಓಟುದಾರರಾಗಿದ್ದಾರೆ. 9 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ನಾವು ಈ ಪ್ರಜಾನತ್ತಾತ್ಮಕ ರಾಜ್ಯಭಾರವನ್ನು ಜಾರಿಗೆ ತರುವಾಗ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿಯನ್ನು ಇಟ್ಟುಕೊಳ್ಳುವುದಕ್ಕಿಂತ ಬೇರಾವ ಉತ್ತಮ ಏರ್ಪಾಡೂ ಇಲ್ಲ. ಭಾರತ ಸರ್ಕಾರದವರ ಅಭಿಪ್ರಾಯವೂ ಸಹ ಅದೇ ಆಗಿದೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿಯವನು ಯಾವಾಗಲೂ ತನ್ನ ಕ್ಷೇತ್ರದ ದೃಷ್ಟಿಯನ್ನು ಮಾತ್ರ ಹೊಂದಿರುತ್ತಾನೆ, ಮಲ್ಟಿಮೆಂಬರ್ ಕಾನ್ಸ್ಟಿಟ್ಯುಯನ್ಸಿಯವನಾದರೆ ಒಟ್ಟು ದೇಶದ ದೃಷ್ಟಿಯಿಂದ ವರ್ತಿಸುತ್ತಾನೆಂದು ಭಾವಿಸುವುದು ಸೂಕ್ತವಲ್ಲ. ಯಾವುದೇ ಸಣ್ಣ ಕ್ಷೇತ್ರದಿಂದ ಜುನಾಯಿತನಾಗಿ ಇಂಡಿಯನ್ ಪಾರ್ಲಿಮೆಂಟಿಗೇ ಹೋಗಬಿದ್ದರೂ ಸಹ, ಆತನ ಪಾರ್ಲಿಮೆಂಟಿನ ಸದಸ್ಯನೆಂದು ಭಾವಿಸುತ್ತಾನೆಯೇ ವಿನಾ ತನ್ನ ನಾಡ ಪ್ರತಿನಿಧಿ ಮಾತ್ರ ಎಂದು ಭಾವಿಸುವುದಿಲ್ಲ. ಅಂಥಾ ಭಾವನೆ ಇರಲೂಕೂಡದು. ಮುಂದಿನ ಜುನಾವಣೆಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕೆಂದು ಯಾರೂ ಕೆಲಸ ಮಾಡುವುದಿಲ್ಲ. ಇದೇ ವಿಷಯದಲ್ಲಿ ಇಂಗ್ಲೆಂಡಿನ ಎಡ್‌ಮಂಡ್‌ಬರ್ಕ್ ಎಂಬುವನು ತನ್ನ ಪುಸ್ತಕದಲ್ಲಿ ಬಹಳ ಖಚಿತ ಅಭಿಪ್ರಾಯಗಳನ್ನು ತಿಳಿಸಿದ್ದಾನೆ. ಅನೇಕ ವರ್ಷಗಳ ಕಾಲ ಪಾರ್ಲಿಮೆಂಟಿನಲ್ಲಿ ಅತ್ಯುತ್ತಮ ಸ್ಥಾನದಲ್ಲಿದ್ದರೂ ಕೂಡ ಬರ್ಕನು ಮಂತ್ರಿಯಾಗಲಿಲ್ಲ. ಪಾರ್ಲಿಮೆಂಟಿನಲ್ಲೇ ಇದ್ದುಕೊಂಡು ಇಡೀ ಇಂಗ್ಲೆಂಡಿನ ಹಿತದ ದೃಷ್ಟಿಯನ್ನಿಟ್ಟುಕೊಂಡು ತಾನು ಇನ್ನೂ ಹೆಚ್ಚು ಕೆಲಸ ಮಾಡಬಹುದೆಂದು ಅವರು ತಿಳಿದಿದ್ದರು. ಬಹುಶಃ ಇಂಗ್ಲೆಂಡಿನ ರಾಜಕೀಯದಲ್ಲಿ ನೂರಾರು ಮಂತ್ರಿಗಳು ಮಾಡದ ಕೆಲಸವನ್ನು ಬರ್ಕ್ ರೊಬ್ಬರೆ ತಮ್ಮ ಪಾಕ್ ಪ್ರತಿಭೆಯಿಂದ, ತಮ್ಮ ಲೇಖನಗಳಿಂದ ಇಂಗ್ಲೆಂಡಿನ ರಾಜಕೀಯ ತತ್ವದ ಬೆಳೆವಣಿಗೆಗಾಗಿ (for the development of political thought in England) ಮಾಡಿದ್ದಾರೆಂದು ಹೇಳಬಹುದು. ಆ ದೃಷ್ಟಿಯಿಂದ ಸಿಂಗಲ್ ಮೆಂಬರ್ ಕ್ಷೇತ್ರಗಳಿರುವುದು ಅನುಕೂಲ. ಯಾವ ರಾಜಕೀಯ ಸ್ವಾತಂತ್ರ್ಯ ಬಂದಿರುವ ದೇಶದಲ್ಲೇ ಆಗಲಿ ಪ್ರಾರಂಭದಲ್ಲಿ ಇದನ್ನು ಜಾರಿಗೆ ತಂದ ತಕ್ಷಣ ಅನೇಕ ಕಷ್ಟಗಳು ತೋರುವುದು ನ್ಯಾಯ. ಆದರೆ ರಾಜಕೀಯ ತತ್ವ ಜ್ಞಾನ ಜನರಲ್ಲಿ ಬೆಳೆದಹಾಗೆಲ್ಲಾ, ಜನರು ತಿಳಿವಳಿಕಸ್ಥರಾದ ಹಾಗೆಲ್ಲಾ, ಅವರ ಆರ್ಥಿಕ ಮಟ್ಟ ಉತ್ತಮವಾದ ಹಾಗೆಲ್ಲಾ, ರಾಜಕೀಯ ಸಂಸ್ಥೆಗಳು ಅಭಿವೃದ್ಧಿಯಾದ ಹಾಗೆಲ್ಲಾ, ಕಷ್ಟಗಳೆಲ್ಲಾ ಹೋಗಿ ಅನುಕೂಲವಾಗುತ್ತವೆ. ಕೆಲವರು ಮಲ್ಟಿಮೆಂಬರ್ ಕಾನ್ಸ್ಟಿಟ್ಯುಯನ್ಸಿ ಇದ್ದರೆ ಪ್ರಾಮುಖ್ಯವಾದ ಕೆಲವು ಅಲ್ಪ ಸಂಖ್ಯಾತರಿಗೆ ಪ್ರಾತಿನಿಧ್ಯ ಸಿಕ್ಕುತ್ತದೆಂದು ಹೇಳಬಹುದು. ಆದರೆ ದೇಶದಲ್ಲಿ ಅಲ್ಪಸಂಖ್ಯಾತರು ಬಹು ಸಂಖ್ಯಾತರು ಎಂಬ ಪ್ರಶ್ನೆಯೇ ಪ್ರಜಾನತ್ತಾತ್ಮಕ ಸರ್ಕಾರದಲ್ಲಿ ಬರುವುದಿಲ್ಲವೆಂದು ನಾನು ಹೇಳಬಲ್ಲೆ. ನಮ್ಮ ರಾಜ್ಯಾಂಗದ ಪ್ರಕಾರವೂ ಸಹ ಷೆಡ್ಯೂರ್ಡ್ ತರಗತಿಯವರಿಗೆ ಹತ್ತು ವರ್ಷಗಳವರೆಗೆ ಏನೊಂದು ರಿಸರ್ವೇಷನ್ ತೋರಿಸಿದ್ದಾರೋ ಅದನ್ನೂ ಕೂಡ ಇಂಥ ಕೋಮಿಗೆಂದು ಹೇಳಿಕೊಟ್ಟಿಲ್ಲ. ಎಂದು ಆ ಕೋಮಿನವರು ಇತರೇ ಕೋಮಿನವರ ಮಟ್ಟಕ್ಕೆ ಬರುತ್ತಾರೋ ಅಂದು ಆ ರಿಸರ್ವೇಷನ್ ತೆಗೆದುಹಾಕುತ್ತಾರೆ. ಅದಕ್ಕಾಗಿಯೇ ಜುನಾವಣೆಗಳಲ್ಲೂ ಸಹ ಷೆಡ್ಯೂರ್ಡ್ ತರಗತಿಯವರನ್ನೂ ಕೂಡ ಬೇರೆಯಾಗಿ ಜುನಾವಣೆಗೆ ನಿಲ್ಲಲು ಅವಕಾಶಕೊಡದೆ ಇತರೇ ಕೋಮಿನವರ ಜೊತೆಯಲ್ಲೇ ನಿಂತು ಇತರ ಕೋಮಿನವರ ಸಹಕಾರದಿಂದಲೂ ಜಯಗಳಿಸಬೇಕೆಂದು ಏರ್ಪಡಿಸಿದ್ದಾರೆ. ಹೀಗಾಗಿ ಅವರೇ ಬೇರೆ, ನಾವೇ ಬೇರೆ ಎಂಬ ಭಾವನೆಗಳು ಹೋಗಿ ಹರಿಜನರೂ ಜನರಲ್ ಕಾನ್ಸ್ಟಿಟ್ಯುಯನ್ಸಿಯ ಇತರ ಉತ್ತಮ ಜನರಿಗಿಂತಲೂ ಉತ್ತಮೋತ್ತಮರೆಂದಾಗಿ ಹಿಂದೂ ಸ್ಥಾನ ಸೆಕ್ಯೂಲರ್ ಸ್ಟೇಟ್ ಆಗಬೇಕೆಂಬ ಉನ್ನತ ಧ್ಯೇಯವನ್ನು ಪ್ರತಿಪಾದಿಸಿದ್ದಾರೆ. ಆದ್ದರಿಂದ ಮೈನಾರಿಟಿಯೆಂಬ ಪ್ರಶ್ನೆಯೇ ಬರುವುದಿಲ್ಲ. ಅಲ್ಲದೆ ನಮ್ಮ ದೇಶದಲ್ಲಿ ಮೈನಾರಿಟಿಗಳವರಲ್ಲೂ ವೈಯಕ್ತಿಕವಾಗಿ ಎಷ್ಟೋ ಪ್ರಭಾವಶಾಲಿಗಳೂ, ಆರ್ಥಿಕವಾಗಿ ಉನ್ನತಸ್ಥಿತಿಯಲ್ಲಿರುವವರೂ, ರಾಜಕೀಯ ತತ್ಪಜ್ಞರೂ ಇದ್ದಾರೆ. ಅಂಥವರೂ ಜನರಲ್ ಕಾನ್ಸ್ಟಿಟ್ಯುಯನ್ಸಿಯಿಂದ ನಿಂತು ಜುನಾಯಿತರಾಗುವುದಕ್ಕೂ ಅವಕಾಶ ಏದೆ. ಆದಕಾರಣ ಮಲ್ಟಿಮೆಂಬರ್ ಜುನಾವಣಾ ಸ್ಥಾನಗಳಾದರೆ ವೋಟುದಾರರಿಗೆ ಎಲ್ಲೂ ಇಲ್ಲದ ತೊಂದರೆಯುಂಟಾಗುತ್ತದೆ. ರಾಜಕೀಯದಲ್ಲಿ ಗೊಂದಲಗಳಿಗೂ ಅನೇಕ ಅನೀತಿಯುತ ಲಂಚರುಷುವತ್ತುಗಳಿಗೂ ಅವಕಾಶವಾಗಿ ನಮ್ಮ ರಾಜಕೀಯ ಸಂಸ್ಥೆಗಳು ಬೆಳೆಯುವುದಕ್ಕೆ ನಾವೇ ಕೊಡಲಿ ಪೆಟ್ಟು ಹಾಕಿ ನಾವು ಯಾವ ನದ ದ್ದೇಶದಿಂದ ಈ ರಾಜ್ಯಾಂಗವನ್ನು ರಚಿಸಿದ್ದೇವೆಯೋ ಅದನ್ನೇ ಹಾಳುಮಾಡುವುದಕ್ಕೆ ಅವಕಾಶವಾಗುತ್ತದೆ.

ಆದುದರಿಂದ ಈ ಒಂದು ಅಲ್ಪಸಂಖ್ಯಾತರೆಂಬ ಹೆದರಿಕೆಯನ್ನಿಟ್ಟುಕೊಂಡು ವಾದ ಮಾಡುವುದು ಸರಿಯಾದ್ದಲ್ಲ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಕೂಡ ಅಲ್ಪ ಸಂಖ್ಯಾತ ಪಂಗಡದವರು ಜುನಾಯಿತರಾಗಿ ಬರುವುದಕ್ಕೂ ಬೇಕಾದಷ್ಟು ಅವಕಾಶವಿದೆ. ದೇಶ ಸೇವೆ ಮಾಡತಕ್ಕವರಿಗೆ ಈ ಸಭೆ ಆ ಸಭೆ ಎಂಬ ಬೇಧವಿಲ್ಲ. ಯಾವ ಸಭೆಯಲ್ಲಾಗಲಿ ತಾವು ಇದ್ದುಕೊಂಡು ದೇಶ ಸೇವೆಯನ್ನು ಮಾಡಬಹುದು. ರೆಜಿನ್ಸ್ಲೇಟಿವ್ ಅಸೆಂಬ್ಲಿಯೇ ಆಗಬೇಕೆಂಬ ನಿಯಮವೇನೂ ಇಲ್ಲ. ರೆಜಿನ್ಸ್ಲೇಟಿವ್ ಕೌನ್ಸಿಲ್ಲಿನಲ್ಲೂ ಕೂಡ, ಪದವೀಧರರಿಗೂ, ಸೆಕೆಂಡರಿ ಶಾಲಾ ಉಪಾಧ್ಯಾಯರುಗಳಿಗೂ, ಇತರ ಕರೆ, ಸಂಸ್ಕೃತಿ ಇತ್ಯಾದಿಗಳಲ್ಲಿ ತಿಳಿವಳಿಕೆ ಇರುವವರಿಗೂ ಅವಕಾಶವಿರುತ್ತೆ. ಹಾಗೆ ದೇಶ ಸೇವೆ ಮಾಡಬೇಕೆಂಬ ಕುತೂಹಲ ಉಳ್ಳವರು ಈ ಸಭೆಗೂ ಜುನಾಯಿತರಾಗಿ ಬಂದು ತಾವು ಸೇವೆ ಮಾಡಬಹುದು. ಅಷ್ಟೇಕೆ ದೇಶಾಭಿಮಾನಿಗಳಾದವರೂ, ಪ್ರಜಾನುರಾಗಿಗಳಾದವರೂ ಹೀಗೆ ಒಂದರ್ಲಾ ಒಂದು ಸಭೆಗಳಲ್ಲಿದ್ದುಕೊಂಡು ಸೇವೆ ಮಾಡಬಹುದು. ಇಲ್ಲಿ ಮಾತ್ರವೇ ಸೇವೆ ಮಾಡಬೇಕೆಂಬ ನಿರ್ಬಂಧವೆಲ್ಲಿಯೂ ಇಲ್ಲ. ಅಂಥವರು ಯಾವ ರೂಪದಲ್ಲಿ ಬೇಕಾದರೂ ಇಂಥಾ ಸಭೆಗಳ ಹೊರಗಡೆ ಇದ್ದಾಗಲೂ ತಮ್ಮ ಅಮೋಘವಾದ ಸೇವೆಯನ್ನು ದೇಶಕ್ಕೆ ನಲ್ಲನಲು ಅಪಾರವಾದ ಅವಕಾಶಗಳಿರುತ್ತವೆ. ಈ ಕಾರಣದಿಂದ "ಅವರದು ಬಹು ಸಂಖ್ಯಾತ ಪಂಗಡ, ಆದ್ದರಿಂದ ನಾವು ಜುನಾವಣೆಗಳಲ್ಲಿ ಅವರನ್ನು ಹಿಂದಕ್ಕೆ ಹಾಕಿ, ಅರಿಸಿಬರಲು ಸಾಧ್ಯವಿಲ್ಲ" ಎಂಬ ಒಂದು ನೆಪದಿಂದ ವಾದಿಸಕ್ಕಂಥ ಶಂಕೆಗೆ ಇದರಲ್ಲಿ ಅವಕಾಶವೇ ಇಲ್ಲ. ಆದರೆ ಈಗಿರತಕ್ಕ ಪ್ರಜಾನತ್ತಾತ್ಮಕ ರಾಜ್ಯ ನೀತಿಯ ಮತ್ತು ತತ್ವದ ಪ್ರಕಾರ ಹೇಳುವುದಾದರೆ ಅದು ಬಹು ಸಂಖ್ಯಾತ ಪಕ್ಷದವರೇ ರಾಜ್ಯಾಡಳಿತ ನಡೆಸಬೇಕೆಂದು ಸಿದ್ಧಾಂತವಾಗಿದೆ. ನೂರಕ್ಕೆ ನೂರರಷ್ಟು ಪರಿಶುದ್ಧ

ವಾದ ನಿಯಮಾವಳಿಗಳು ಯಾವ ರಾಜ್ಯದಲ್ಲಿಯೂ ಇಲ್ಲ. ಹಾಗೆ ಇರುವುದಕ್ಕೆ ಅವಕಾಶವೂ ಇಲ್ಲ. ಈ ಪ್ರಜಾ ಸತ್ತಾತ್ಮಕ ರಾಜ್ಯಭಾರವಿರತಕ್ಕ ರಾಷ್ಟ್ರಗಳು ಹಾಗಿರಲಿ. ಕಮ್ಯೂನಿಸ್ಟ್ ತತ್ವದ ಪ್ರಕಾರ ರಾಜ್ಯಭಾರ ನಡೆಸುತ್ತಿರುವ ರಷ್ಯಾ ಮುಂತಾದ ದೇಶಗಳಲ್ಲಿಯೂ ಕೂಡ ಒಂದು ಅನುಕೂಲವಾದ ತತ್ವವಿದ್ದರೆ ಹತ್ತು ಅನಾನುಕೂಲವಾದ ತತ್ವಗಳು ಇದ್ದೇ ಇವೆ. ಅಲ್ಲಿಯ ಹಾಗೆ ಪಾಕ್ ಸ್ವಾತಂತ್ರವಿಲ್ಲ, ವ್ಯಕ್ತಿ ಸ್ವಾತಂತ್ರ್ಯವಿಲ್ಲ. ಹೀಗೆ ನಾನಾ ರೀತಿಯ ಅನಾನುಕೂಲಗಳು ಇದ್ದೇ ಇವೆ. ಈ ಕಾರಣಗಳಿಂದ ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ನೂರಕ್ಕೆ ನೂರರಷ್ಟು ಧರ್ಮದಿಂದಲೇ ರಾಜ್ಯಭಾರ ಮಾಡಬೇಕೆಂದು ಹೇಳಿದರೆ ಅದು ಸಾಧ್ಯವಿಲ್ಲದ ಮಾತು. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಗೆ ಬದಲಾಗಿ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಬಂದಾಗಲೂ ಅದರಿಂದ ಅಲ್ಪ ಸಂಖ್ಯಾತರು ಕೇಳುತ್ತಿರುವ ಅನುಕೂಲಗಳು ದೊರೆಯಲಾರವು. ಏತಕ್ಕೆಂದರೆ ಪ್ರಜಾಸತ್ತಾತ್ಮಕ ರಾಜ್ಯಾಡಳಿತದ ತತ್ವವೇ ಹಾಗಿದೆ. ಅಲ್ಪಸಂಖ್ಯಾತ ಪಂಗಡವನ್ನು ಬಹು ಸಂಖ್ಯಾತ ಪಂಗಡವಾಗಿ ಪರಿವರ್ತನೆ ಮಾಡಲು ಸಾಧ್ಯವೆಂಬ ಅಂಶವನ್ನು ಯಾವ ತತ್ವಗಳೂ ತಿಳಿಸಿಲ್ಲ. ಹಾಗೆ ಮಾಡಿ ನಂತರ ರಾಜ್ಯಾಡಳಿತ ನಡೆಸುವುದಕ್ಕೆ ಸಾಧ್ಯವೂ ಇಲ್ಲ. ಪ್ರಜಾಸತ್ತಾತ್ಮಕ ತತ್ವಗಳ ನೀತಿ ಅಲ್ಪ ಸಂಖ್ಯಾತರನ್ನು ಬಹು ಸಂಖ್ಯಾತ ಪಂಗಡದವರೊಡನೆ ಐಕ್ಯಮಾಡಿ ರಾಜ್ಯಭಾರ ನಡೆಸಬೇಕೆಂಬುದಲ್ಲ. ಕಾರಣ ಈ ದಿವಸ ಒಂದು ಪಕ್ಷ ಬಹು ಸದಸ್ಯರನ್ನೊಳಗೊಂಡಿರಬಹುದು. ಆದರೆ ಅದೇ ಪಕ್ಷ ನಾಳೆ ಮೈನಾರಿಟಿ ಪಕ್ಷವಾಗಬಹುದು. ಅದರಂತೆ ಈ ದಿವಸ ಮೈನಾರಿಟಿಯಾಗಿರುವ ಪಕ್ಷ ನಾಳೆ ಮೆಜಾರಿಟಿ ಪಕ್ಷವಾಗಬಹುದು. ಇದು ಒಂದು ಕೋಮಿನವರ ವಿಚಾರವಲ್ಲ. ಎಲ್ಲಾ ಕೋಮುಗಳನ್ನೂ ಒಳಗೊಂಡಿರುವಂಥ ಪಕ್ಷಕ್ಕೆ ಸೇರಿದ ವಿಚಾರ. ಅಂಥಾ ಮೆಜಾರಿಟಿ ಪಾರ್ಟಿಯವರು ಯಾರಿದ್ದಾರೋ ಅವರು ರಾಜ್ಯಭಾರ ನಡೆಸಬೇಕೆಂಬುದೇ ಈಗಿನ ರಾಜ್ಯಾಡಳಿತದ ಮೂಲ ತತ್ವ ಮತ್ತು ಸಿದ್ಧಾಂತ. ಆದುದರಿಂದ ಈ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯೇ ಇತರೇ ಎಲ್ಲಾ ವಿಧಾನಗಳಿಗಿಂತಲೂ ಸರ್ವೋತ್ಕೃಷ್ಟವಾದುದೆಂದು ನಾನು ಹೇಳುತ್ತೇನೆ.

ಇನ್ನು ಚುನಾವಣೆಯ ಕ್ರಮದ ಬಗ್ಗೆ ಒಣ್ಣದ ಪೆಟ್ಟಿಗೆ ವಿಧಾನಕ್ಕಿಂತಲೂ ಸುಲಭವಾದ ಮಾರ್ಗವನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ಈ ಮಾರ್ಗದಿಂದ ಕೇವಲ ಕಮ್ಮಿ ದರ್ಜೆಯ ತಿಳಿವಳಿಕೆಯುಳ್ಳ ಮನುಷ್ಯನಿಗೂ ಸಹ ಸಾಕಷ್ಟು ಸುಲಭ ರೀತಿಯಲ್ಲಿ ತಿಳಿವಳಿಕೆಯನ್ನುಂಟು ಮಾಡಲು ಅವಕಾಶವಿದೆ. ಆದರೆ ಈ ಎಲ್ಲ ಮಾರ್ಗಗಳಿಗಿಂತಲೂ ಉತ್ಕೃಷ್ಟವಾದುದು ಜನಗಳು ದಿನದಿನಕ್ಕೂ ತಮ್ಮ ತಿಳಿವಳಿಕೆ ಮತ್ತು ಜ್ಞಾನಾಭಿವೃದ್ಧಿ ಇವುಗಳನ್ನು ಹೆಚ್ಚಿಸಿಕೊಂಡು ಹೋಗಲು ಸಾಕಷ್ಟು ವಿದ್ಯಾವಂತರಾಗತಕ್ಕದ್ದು. ಒಂದೇ ಒಂದು ಮಾರ್ಗ. ಚುನಾವಣೆ ನಡೆಯತಕ್ಕ ಸಂದರ್ಭಗಳಲ್ಲಿ ಪ್ರತಿಯೊಬ್ಬ ಮತದಾನ ಮಾಡತಕ್ಕ ಮನುಷ್ಯನೂ ತಾನು ಓಟು ಮಾಡತಕ್ಕ ಮನುಷ್ಯನ ಯೋಗ್ಯಾಯೋಗ್ಯತೆಗಳನ್ನು ನಿರ್ಧರಿಸಿಕೊಂಡು ತನ್ನ ಮತದಾನ ಮಾಡಬೇಕೆಂಬುದು ಒಂದು ಮುಖ್ಯವಾದ ಅಂಶ. ಅಂಥಾ ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ಅಳತೆ ಮಾಡತಕ್ಕ ಚೈತನ್ಯ ಮತದಾರರಿಗೆ ಬರಬೇಕಾಗಿದ್ದರೆ, ಅದು ಅವರ ತಿಳಿವಳಿಕೆ ಮತ್ತು ಜ್ಞಾನಾಭಿವೃದ್ಧಿ ಇವುಗಳಲ್ಲದೆ ಬೇರೆ ವಿಧದಲ್ಲಿ ಲಭ್ಯವಾಗಲು ಬಹಳ ಕಠಿಣ.

ಕೊನೆಯಾದಾಗಿ ಒಂದು ಮಾತನ್ನು ನಾನು ಒತ್ತಿ ಹೇಳಬೇಕಾಗಿದೆ. ಶ್ರೀ ಗುಂಡಪ್ಪಗೌಡರು ತಮ್ಮ ಭಾಷಣ ಕಾಲದಲ್ಲಿ ಈಗಿರತಕ್ಕ ಸರ್ಕಾರದವರು ಪ್ರತಿಯೊಂದು ಸಮಿತಿ ಸಭೆಗಳಿಗೆಲ್ಲ ತಮ್ಮ ಪಕ್ಷದವರು ಮಾತ್ರ ಸದಸ್ಯರಾಗಿ ಭಾಗವಹಿಸಲು ಅವಕಾಶವಿರುವಷ್ಟು ಸ್ವಾರ್ಥಪರರಾಗಿದ್ದಾರೆಂದು ಹೇಳಿದರು. ಅದಕ್ಕೆ ನಾನು ಹೇಳತಕ್ಕದ್ದು ಇಷ್ಟೆ. Congress Party is a Democratic Body. ಆದುದರಿಂದ ಪ್ರತಿಯೊಂದು ಪಕ್ಷಗಳಿಂದಲೂ, ದಕ್ಷರಾಗಿರತಕ್ಕವರನ್ನೂ, ಮೇಧಾವಿಗಳನ್ನೂ ಮತ್ತು ಉದಾರ ನೀತಿಯಿಂದ ವರ್ತಿಸತಕ್ಕಂಥ 3-4 ಜನಗಳನ್ನು ಒಟ್ಟಾಗಿ ಸೇರಿಸಿಕೊಂಡು ದೇಶಾಭಿವೃದ್ಧಿಗೆ ಸಹಾಯಕವಾಗುವಂತೆ ಕೆಲಸ ಮಾಡಬೇಕೆಂಬ ಮನೋಭಾವ ನಮಗೆ ಖಂಡಿತ ಇರುತ್ತದೆಂಬ ಭರವಸೆಯನ್ನು ನಾನು ಅವರಿಗೆ ಕೊಡಬಲ್ಲೆ.

ಶ್ರೀ ಎಲ್. ಸಿದ್ದಪ್ಪನವರು.—ನಿಮ್ಮ ತರಗತಿಗಳವರ ಬಗ್ಗೆ ತಾವೇನು ಹೇಳಿದಿರಿ?

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಸೂಚನೆಯ ಪರವಾಗಿ ನಾನು ಇಷ್ಟು ಹೇಳಬಲ್ಲೆ, ಈಗಿನ ತೀರ್ಮಾನದ ಪ್ರಕಾರ ನಿಮ್ಮ ಪಂಗಡದವರಿಗೆ ಎಲ್ಲಿ 19 ಚುನಾವಣೆ ಕ್ಷೇತ್ರಗಳನ್ನು ನಿರ್ಧರಿಸಿದ್ದಾರೋ ಅಂಥಾ ಕಡೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಗೆ ಬದಲಾಗಿ ಅವುಗಳೆಲ್ಲವನ್ನೂ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಆಗಿ ಪರಿವರ್ತಿಸಿ ಅಲ್ಲಿ ಒಂದನ್ನು ಜನರಲ್ ಆಗಿಯೂ, ಒಂದನ್ನು ನಿಮ್ಮ ಪಂಗಡದವರಿಗಾಗಿಯೂ ಇರುವಂತೆ ವಿಧಾಯಕ ಮಾಡತಕ್ಕದ್ದೇ ಸೂಕ್ತವಾದುದೆಂದು ಕಾಣುತ್ತದೆ. ನಮ್ಮ ಹೊಸ ರಾಜ್ಯಾಂಗದ ಕಾನೂನಿನ ಪ್ರಕಾರ ಜನರ ಆರ್ಥಿಕ ಸ್ಥಿತಿಗತಿಗಳಿಗನುಸಾರವಾಗಿ ಯಾರು ಹಿಂದುಳಿದಿದ್ದಾರೋ ಅಂಥವರಿಗಾಗಿ ಎಂದಿದೆಯೇ ಹೊರತು ' ಹರಿಜನರು ' ಎಂದು ಹೇಳುವುದಕ್ಕೂ ಕೂಡ ಅದರಲ್ಲಿ ಅವಕಾಶವಿಲ್ಲ. ಇಂಥಾ ಮಹತ್ವರವಾದ ಅನೇಕ ವಿಷಯಗಳನ್ನೊಳಗೊಂಡು ಇಲ್ಲಿಯ ತನಕ ಬಹು ಶ್ರಮಪಟ್ಟು ನಮ್ಮವರು ಯಾವ ಒಂದು ಕಾನೂನನ್ನು ಪ್ರಚಾರ ಮಾಡಿದ್ದಾರೆಯೋ ಅಂಥಾ ಕಾನೂನಿಗೆ ನಾವೆಲ್ಲರೂ ಬೆಂಬಲ ನೀಡಿ ಅದನ್ನು ಸಾರ್ಥಕಪಡಿಸಬೇಕು. ಇಲ್ಲದಿದ್ದರೆ ರಾಜ್ಯಾಂಗವೇ ವ್ಯರ್ಥವಾಗಿ ಹೋಗಬೇಕಾಗಿ ಬಂದೀತು. ಆದುದರಿಂದ ಸರ್ವರೂ ಈಗ ತಮ್ಮ ಮುಂದೆ ಮಂಡಿಸಿರುವ ಸೂಚನೆಗೆ ತಮ್ಮ ಬೆಂಬಲ ನೀಡುತ್ತೀರೆಂದು ನಂಬಿ ಮತ್ತೊಮ್ಮೆ ನಾನು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯೇ ಸರ್ವೋತ್ಕೃಷ್ಟವಾದುದೆಂದೂ, ಅದಕ್ಕೆ ತಾವೆಲ್ಲರೂ ಬೆಂಬಲ ನೀಡಬೇಕೆಂದು ಹಾರೈಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಈಗ ನಮ್ಮ ಮುಂದಿರತಕ್ಕದ್ದು ಬಹಳ ಪವಿತ್ರವಾದ ಕಾರ್ಯ. ಇದನ್ನು ನಾವು ಬಹಳ ಎಚ್ಚರಿಕೆಯಿಂದ ಮಾಡಬೇಕಾಗಿದೆ. ನಮ್ಮ ಹಿರಿಯರು ನಮಗೆ ಸ್ವಾತಂತ್ರ್ಯ ಬಂದ ಅಂದಿನಿಂದಲೂ ಬಹಳ ಶ್ರಮಪಟ್ಟು ಈ ಸಂಬಂಧವಾಗಿ ಎಲ್ಲ ವಿಷಯಗಳನ್ನು ತೀವ್ರವಾಗಿ ಪರ್ಯಾಲೋಚನೆ ಮಾಡಿ ಒಂದು ನಿರ್ಧರವಾದ ತೀರ್ಮಾನಕ್ಕೆ ಬಂದಿದ್ದಾರೆ. ಆ ನಿಯಮಾವಳಿಗನುಸಾರವಾಗಿ ನಾವೀಗ ಕಾರ್ಯಾಚರಣೆ ಮಾಡಬೇಕಾಗಿದೆ. ಇಂಥಾ ವಿಚಾರಗಳಲ್ಲಿ ಯಾರೂ ಸಂಕುಚಿತ ಭಾವನೆಗಳನ್ನಿಟ್ಟುಕೊಂಡು ವಾದ ಮಾಡಬಾರದು.

ಇನ್ನು ಚುನಾವಣೆ ಕ್ಷೇತ್ರಗಳ ವಿಚಾರದಲ್ಲಿ ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಗಿಂತಲೂ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಉತ್ತಮವಾದು

ದೆಂದು ನನಗೆ ಕಾಣುತ್ತದೆ. ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ವಿಧಾನವೇ ಬಹಳ ಉತ್ತಮವಾದುದೆಂದು ಮೊದಮೊದಲು ನಾನು ತಿಳಿದುಕೊಂಡಿದ್ದೆನು. ಆದರೆ ಇತ್ತೀಚೆಗೆ ನೋಡುವುದರಲ್ಲಿ ಅದರಲ್ಲಿ ಕೆಲವು ಲೋಪದೋಷಗಳಿವೆಯೆಂಬುದಾಗಿ ಕಂಡು ಬಂದಿತು. ಕಾರಣ ಇಷ್ಟೆ; ಸರ್ಕಾರದವರು ಏರ್ಪಡಿಸಿರುವ ಪ್ರಕಾರ ಶಾಸನಾಂಗಗಳಲ್ಲಿ ಈ ರೆಜಿಸ್ಲೇಟಿವ್ ಅಸೆಂಬ್ಲಿಯೂ ಕೂಡ ಒಂದಾಗಿದೆ. ಇಂಥಾ ಸಂಸ್ಥೆಗಳಲ್ಲಿ ದಕ್ಷರಾದವರೂ, ಮೇಧಾವಿಗಳೂ, ಮತ್ತು ಅತಿ ಉತ್ತಮರಾಗಿರತಕ್ಕಂಥವರೂ ಎಷ್ಟು ಹೆಚ್ಚು ಸಂಖ್ಯೆಯಲ್ಲಿ ಬರಲು ಸಾಧ್ಯವಾಗುವಂತೆ ಮಾಡಬಹುದೋ ಅಷ್ಟನ್ನೂ ಮಾಡಿದರೆ ಹೆಚ್ಚು ಅನುಕೂಲವಿದೆ. ಆದರೆ ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಗಳಲ್ಲಿ ಇಂಥಾ ದಕ್ಷರೂ, ಮೇಧಾವಿಗಳೂ ಮತ್ತು ಅತಿ ಉತ್ತಮರಾಗಿರತಕ್ಕಂಥವರೂ ಆರಿಸಿ ಬರಲು ಬಹಳ ಕಷ್ಟವಿದೆ. ಅದಕ್ಕೋಸ್ಕರವಾಗಿಯೇ ಸಿಂಗರ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಇದ್ದರೆ ಉತ್ತಮವೆಂದು ಹೇಳುತ್ತೇನೆ. ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರತಕ್ಕ ಕಡೆ ಎರಡು-ಮೂರು ಸ್ಥಾನಗಳ ಚುನಾವಣೆಯಲ್ಲಿ ಕನಿಷ್ಠಪಕ್ಷ ಒಬ್ಬಿಬ್ಬರಾದರೂ ದಕ್ಷರಲ್ಲದವರು ಆರಿಸಿ ಬರಲು ಅವಕಾಶವಿರುತ್ತದೆ. ಚುನಾವಣೆಯ ಕಾಲದಲ್ಲಿ ಉಮೇದುವಾರರುಗಳು ಕೋಮುವಾರು ಭಾವನೆಯ ಮೂಲಕ ಮತ್ತು ಇತರ ಅನೇಕ ಮಾರ್ಗಗಳಲ್ಲಿ ಮತದಾರರನ್ನು ಉದ್ರೇಕಗೊಳಿಸಿ ಅವರಿಂದ ಮತದಾನವನ್ನೆಲ್ಲಾ ಅವರೊಬ್ಬರೇ ತೆಗೆದುಕೊಳ್ಳಬಹುದು. ಇಂಥ ಸನ್ನಿವೇಶಗಳಿಗೆ ಅವಕಾಶವಿರುವುದರಿಂದ ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರುವುದಕ್ಕಿಂತಲೂ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇರುವುದೇ ಲೇಸೆಂದು ಕಾಣುತ್ತಿದೆ.

ಈ ಬಗ್ಗೆ ನಮ್ಮ ಹಿರಿಯರು ಬಹಳ ಜಾಗ್ರತೆಯಾಗಿ 320 ಸೆಕ್ಷನ್‌ಗಳನ್ನೊಳಗೊಂಡಿರುವಂಥ ಒಂದು ದೊಡ್ಡ ವಿಧಿಯನ್ನು ಕೇವಲ 3 ವರ್ಷಗಳಲ್ಲಿಯೇ ರಚನೆ ಮಾಡಿಟ್ಟಿದ್ದಾರೆ. ನಮ್ಮಂತೆಯೇ ಸ್ವಾತಂತ್ರ್ಯ ಹೊಂದಿದ ಪಾಕೀಸ್ತಾನದಲ್ಲಿ ಈ ಸಂಬಂಧವಾಗಿ ಅವರು ಇನ್ನೂ 10 ಸೆಕ್ಷನ್‌ಗಳನ್ನಾದರೂ ರಚಿಸಿರುವುದಿಲ್ಲ. ಅವರು ನಮ್ಮಂತೆ ಇಂಥಾದ್ದೇ ಒಂದು ದೊಡ್ಡ ಶಾಸನವನ್ನು ರಚಿಸಬೇಕಾಗಿದ್ದರೆ ಬಹುಶಃ ಇನ್ನೂ 100 ವರ್ಷಗಳು ಅವರಿಗೆ ಬೇಕಾಗುವುದೆಂದು ತೋರುತ್ತದೆ. ಆದರೆ ನಮ್ಮ ಹಿರಿಯರು ಇಷ್ಟು ಜಾಗ್ರತೆಯಾಗಿ ಇಂಥಾ ಕಠಿಣವಾದ ಕಾರ್ಯವನ್ನು ಸಾಧಿಸಿರುವುದಕ್ಕಾಗಿ ನಾವು ಅದನ್ನು ಹೆಜ್ಜೆ ಹೆಜ್ಜೆಗೂ ಮುಂದುವರಿಸಿಕೊಂಡು ಹೋಗತಕ್ಕ ಮನೋಭಾವವನ್ನೇ ತೋರಿಸಬೇಕಾಗಿದೆ. ಈ ವಿಚಾರವಾಗಿ ನಾಳೆ ಸೋಮವಾರದೊಳಗಾಗಿ ಒಂದು ಸಮಿತಿಯನ್ನೇ ನೇಮಕ ಮಾಡಿ ಅಲ್ಲಿ ಈವಿಷಯಗಳನ್ನೆಲ್ಲಾ ಚರ್ಚೆ ಮಾಡಿ ಬೇಗ ಒಂದು ತೀರ್ಮಾನಕ್ಕೆ ಬರುವುದು ಅತಿ ಮುಖ್ಯವಾದ ವಿಚಾರವೆಂದೂ ರೆಜಿಸ್ಲೇಟಿವ್ ಅಸೆಂಬ್ಲಿಗೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಉತ್ತಮವಾದುದೆಂದೂ ನಾನು ಪ್ರತಿಪಾದಿಸುತ್ತೇನೆ.

ಎರಡನೆಯದಾಗಿ, ಶ್ರೀ ಎಂ. ಮಾದಯ್ಯನವರು ಒಂದು ಸಲಹೆ ಕೊಟ್ಟರು. ಆದರೆ ಅವರು ಮುಂದು ವರಿಸಲಿಲ್ಲ. ಸೀಟುಗಳಿಗೆ ರಿಜರ್ವೇಷನ್ ಇದೆಯೇ ಹೊರತು ಕಾನ್ಸ್ಟಿಟ್ಯೂಯೆನ್ಸಿಗಳಿಗಿಲ್ಲ ಎಂದು ಮಾನ್ಯ ಸಚಿವರೂ ಹೇಳಿದರು. ಆದರೆ ಪುಸ್ತಕದಲ್ಲಿ ನೊಡಲಾಗಿ ಆ ರೀತಿ ಇರಲಿಲ್ಲ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಸೀಟುಗಳ ರಿಜರ್ವೇಷನ್ ಅಥವಾ ಕಾನ್ಸ್ಟಿಟ್ಯೂಯೆನ್ಸಿ ಏನೆಂದರೂ ಒಂದೇ ಎಂಬುದಾಗಿದೆ. ವ್ಯತ್ಯಾಸ ಬರುವುದಿಲ್ಲ. ಮತ್ತು ಅದಕ್ಕೆ ಸಂಬಂಧಪಟ್ಟ ಸೆಕ್ಷನ್‌ನಲ್ಲಿ ಹೇಗಿದೆಯೆಂಬುದನ್ನು ಪುನಃ ಮಾನ್ಯ ಸಚಿವರು ಪರಿಶೀಲನಬೇಕೆಂದು ಹೇಳುತ್ತೇನೆ. 19 ಸೀಟುಗಳಿಗೆ ರಿಸರ್ವೇಷನ್ ಮಾತ್ರ ಮಾಡಿದರೆ ಯಾವ ಲೋಪಬರುತ್ತದೆಯೋ ಅದೇ ಲೋಪ ಈ ಕಾನ್ಸ್ಟಿಟ್ಯೂಯೆನ್ಸಿಗಳನ್ನು ರಿಸರ್ವೇಷನ್ ಮಾಡಿದರೂ ಬರುತ್ತದೆ.

ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಮಾಡಿದರೆ ಸೀಟುಗಳನ್ನು ಫೀನರಲಾಗಿಡುವುದಕ್ಕೆ ಬದಲು ಕ್ಷೇತ್ರಗಳೇ ಫೀನರಲಾಗಿಟ್ಟ ಹಾಗೆ ಆಗುತ್ತದೆ. ಅದು ಕಾನೂನಿಗೆ ವಿರೋಧವಾಗುತ್ತೆ. ಸಾರ್ವಜನಿಕ ಸ್ಥಾನಕ್ಕೆ ಧಕ್ಕೆ ತಂದಂತೆ ಆಗುತ್ತೆ. It will be the very reverse of what the constitution contemplates.

Sri H. B. GUNDAPPA GOWDA.—Prohibiting seats would be denying the rights of others to stand for election in that constituency. That is a right taken away.

Sri D. H. CHANDRASEKHARIYA.—That will become communal constituency.

Sri K. T. BHASHYAM.—When we say Reservation of a seat in the General Constituency, 'Reservation' means that among the general seats of 99, you reserve 19 seats.

Sri M. MADIAH.—I want information as to whether we are prevented either by the provisions of the Indian Constitution or by the provisions of the Representations of People Act, 1950, to form 99 single member constituencies for the entire State. It is a straight question for which I want an answer.

Sri K. T. BHASHYAM.—It is against the constitution.

ಶ್ರೀ ಎ. ಜಿ. ರಾಮಚಂದ್ರರಾಯರು.—ರಾಜ್ಯಾಂಗದಲ್ಲಿ ಜನರಲ್ ಮತ್ತು ರಿಜರ್ವೇಷನ್ ಸೀಟು ಎಂದು ಕ್ಲಾಸಿಫಿಕೇಷನ್ ಇಲ್ಲ. The whole State must be divided into constituencies for single members. ಕೆಲವು ಸ್ಥಾನಗಳನ್ನು ಮಾತ್ರ ರಿಜರ್ವೇಷನ್ ಮಾಡಬೇಕು. ಶ್ರೀ ಮಾದಯ್ಯನವರು ಹೇಳಿದ ಹಾಗೆ 99 ಕಾನ್ಸ್ಟಿಟ್ಯೂಯನ್ಸಿಗಳನ್ನು ಮಾಡಿ 19 ಕ್ಷೇತ್ರಗಳನ್ನು ರಿಜರ್ವ್ ಮಾಡಿದರೂ ಸಹ ಪ್ಯೂನೂರು ಸಂಸ್ಥಾನದ ವಿಚಾರದಲ್ಲಿ ಮಾತ್ರ ಹೇಳುವುದಾದರೆ ಐದು ವರ್ಷಗಳಲ್ಲಿ ಒಂದು ಸರ್ಕರ್ ಪೂರ್ತಿಯಾಗುತ್ತದೆ.

Sri K. T. BHASHYAM.—Each term is 5 years and five into five will be 25 years.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹತ್ತು ವರ್ಷಗಳವರೆಗೆ ರಿಜರ್ವೇಷನ್ ಇರುತ್ತದೆ.

ಶ್ರೀ ಕೆ. ಟಿ. ಭಾಷ್ಯಂರವರು.—ಹತ್ತು ವರ್ಷಗಳಲ್ಲಿ ಈ ರಿಯಾಯಿತಿಯು ಹೋಗುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಒಟ್ಟು ಹರಿಜನರಿಗೆ ಇಷ್ಟು ಜನರಲ್ ಸೀಟು ಎಂದು ಮಾಡಿದರೆ ಇನ್ನೊಂದು ಜನರಲ್ ಸೀಟು ಕೊಡದೆ ಇರುವ ಲೋಪ ಕೆಲವುಕಡೆ ಬರುತ್ತದೆ. ಅಲ್ಲೀ ಸ್ವಲ್ಪ ಕಷ್ಟವಿರುವುದು.

Sri H. B. GUNDAPPA GOWDA—They have a right to stand in general constituencies.

Sri A. G. RAMACHANDRA RAO.—It is only for one seat and not for both the seats.

ಎಪ್ಪತ್ತೈದುಸಾವಿರ ಜನಸಂಖ್ಯೆಗೆ ಒಬ್ಬರು ಹರಿಜನರ ಲ್ಲದವರು ನಿಲ್ಲುವುದಕ್ಕೆ ಅವಕಾಶವಿದೆ. ಆಗ್ಗೆ ಉಳಿಯುವುದು ಒಂದು ಸ್ಥಾನ ಮಾತ್ರವಾದ್ದರಿಂದ ಅಲ್ಲಿ ಹಕ್ಕು ಬಾಧ್ಯತೆಗೆ ಲೋಪ ಬರುತ್ತದೆ. ಯಾವ ತರಹ ದೃಷ್ಟಿಯಿಂದ ನೋಡಿದರೂ ಲೋಪವಿರುವುದರಿಂದ ಶ್ರೀ ಮಾದಯ್ಯನವರು ಹೇಳಿದ್ದನ್ನು ಅಂಗೀಕಾರ ಮಾಡಿದರೆ ಒಂದು ಗುಣವಿದೆ. ಅಸ್ಪೃಶ್ಯ ನಿವಾರಣೆಯನ್ನು ಪ್ರತ್ಯಕ್ಷರೂಪವಾಗಿ ಮಾಡಿದಹಾಗೆ ಆಗುತ್ತದೆ. ದೊಡ್ಡ ಸೇವೆ ಮಾಡಿದಹಾಗಾಗುತ್ತದೆ. 40 ಕ್ಷೇತ್ರಗಳಲ್ಲಿ ಈ ಹತ್ತು ವರ್ಷ ಅವಧಿಯಲ್ಲಿ ಅಸ್ಪೃಶ್ಯ ನಿವಾರಣೆಯನ್ನು ಮಾಡಿ ಉದಾಹರಣೆ ಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ಖಂಡಿತವಾಗಿ ಒಂದು ಲೋಪಕ್ಕೆ ಅವಕಾಶ ಕೊಡದೆ ಅವರು ಹೇಳಿರುವ ನಲಹೆಯನ್ನು ಸಮಿತಿಯವರು ಪೂರ್ಣವಾಗಿ ಆಲೋಚಿಸಬೇಕೆಂದು ಸೂಚನೆ ಮಾಡುತ್ತೇನೆ.

ಲೋಯರ್ ಹೌಸಿನ ವಿಚಾರ ಹೇಳಿರುವುದರಿಂದ ಅದಕ್ಕೆ ಹೋಗಬೇಕಾದ್ದಿಲ್ಲ. ಶಾಸನ ಸಭೆಯ ಕಾರ್ಯಸ್ಥಿಟಿಟ್ಯೂಯೆನ್ಸಿ ಮಾಡಿರುವ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹೆಚ್ಚಾಗಿ ಹೇಳಲಿಲ್ಲ. ಮೈಸೂರು ಸಂಸ್ಥಾನದಲ್ಲಿರುವ ಉಪಾಧ್ಯಾಯರು ಮತ್ತು ಗ್ರಾಜುಯೇಟುಗಳಿಗೆ ಪ್ರತ್ಯೇಕ ಸ್ಥಾನಗಳನ್ನು ವಿಶಾಸರಾಗಿಡುವಂತೆ ಮಾಡಿದ್ದಾರೆ. ಶಾಸನವಿಧಾಯಕ ಸಭೆ(ಅಪ್ಪರ್ ಹೌಸ್) ಯೊಂದಕ್ಕೆ ಶಾಸನ ಸಭೆಯಿಂದ (ಲೋಯರ್ ಹೌಸ್) ಈ ಒಂದು ಕ್ಷೇತ್ರದಲ್ಲಿ 13 ಜನರಿಗೆ ಅವಕಾಶವಿದೆ. ಮೈಸೂರು ಸೀಮೆಯಲ್ಲಿರುವ ಉಪಾಧ್ಯಾಯರು ಮತ್ತು ಗ್ರಾಜುಯೇಟುಗಳನ್ನು ಎಲ್ಲಾ ಸೇರಿಸಿದರೆ ಮೂರು ಮೂರು ಸದಸ್ಯರಿಗೆ ಅವಕಾಶವಿರುವುದರಿಂದ ಕ್ಷೇತ್ರ ಬಹಳ ವಿಸ್ತಾರವಾಗುತ್ತದೆ. ಅದನ್ನು ಕಡಮೆ ಮಾಡಬೇಕು; ಕ್ಷೇತ್ರವನ್ನು ಸರಿಯಾಗಿ ವಿಂಗಡಿಸಬೇಕು, ಹಾಗೆ ಮಾಡುವಾಗ ಕೊನೆಯಪಕ್ಷ ಒಂದು ಸಾವಿರ ಓಟರುಗಳಿದ್ದರೆ ಅನುಕೂಲ; ಇಲ್ಲದಿದ್ದರೆ ಲಂಚ ರುಷುವತ್ತು ತಪ್ಪುವುದಿಲ್ಲ. ದೊಡ್ಡ ದೊಡ್ಡ ಕ್ಷೇತ್ರಗಳಿರುವ ಕಡೆ ಹೆಚ್ಚಾಗಿ ಕೆಟ್ಟ ಕಾರ್ಯಕ್ರಮವೂ ಆಗುವುದಿಲ್ಲ. ಕ್ಷೇತ್ರ ಚಿಕ್ಕದಾದರೆ ತೊಂದರೆಯಿದೆ, ಸಾಧಾರಣವಾಗಿ ಟೌನು ಮತ್ತು ಸಿಟಿಗಳಲ್ಲಿ ನಿಜವಾಗಿಯೂ ಯೋಗ್ಯರಾದವರು ಬರುತ್ತಿಲ್ಲ; ಲಂಚ ಕೊಡತಕ್ಕವರೇ ಬರುತ್ತಿದ್ದಾರೆ. ಇದನ್ನು ನಿವಾರಣೆ ಮಾಡುವುದಕ್ಕೆ ಕ್ಷೇತ್ರವನ್ನು ವಿಸ್ತಾರಮಾಡಬೇಕು. ಯಾವುದೇ ಕ್ಷೇತ್ರವಾದರೂ ಒಂದು ಸಾವಿರ ಸದಸ್ಯರಿಗಿಂತ ಕಡಮೆಯಿರುವಂತೆ ಮಾಡಿದರೆ ಬಹಳ ಒಳ್ಳೆಯದು. ಇದನ್ನು ಸಮಿತಿಯವರು ಗಮನಿಸಬೇಕು. ಕೊನೆಯದಾಗಿ, ಸಿಂಗಲ್ ಟ್ರಾನ್ಸ್‌ಫರಬಲ್ ಓಟಿನ ವಿಚಾರದಲ್ಲಿ ಹೇಳುವುದಾದರೆ ದೊಡ್ಡದೊಡ್ಡ ಕ್ಷೇತ್ರವಿರುವ ಕಡೆ ಇದರ ಪ್ರಕಾರ ಸರಿಯಾದ ಪ್ರಾತಿನಿಧ್ಯ ದೊರಕುವುದು ಅಸಾಧ್ಯ. ಆದರೆ ಅಪ್ಪರ್ ಹೌಸಿಗೆ ಎರಡು ಮೂರು ಜನರಿರುವ ಕ್ಷೇತ್ರಗಳಿಂದ ಇದು ಅನಿವಾರ್ಯವಾಗಿರಬೇಕು. ಕ್ಷೇತ್ರ ಚಿಕ್ಕದಾಗಿರುವ ಸಂದರ್ಭದಲ್ಲಿ ಇದು ಆವಶ್ಯಕ ಮತ್ತು ಸೂಕ್ತ ಎಂದು ಹೇಳುತ್ತೇನೆ.

Srimathi RATNAMMA ISAAC (Kolar District—General).—Sir, the Constitution of India has been so framed that I cannot now rise and ask for any special favour or prerogative for the womenfolk. I cannot even ask for a certain number of seats in the Legislature as we have been so honourably treated by the Centre, that we women are equal in status and in everything with men. This is a great step in the right direction. I understand that in every country and also in India women are a few more than men and both of us have got equal privileges to vote. So it seems to me, Sir, that if we women all make up our minds to send up only women to the Legislature, we could even capture hundred per cent of the seats (Laughter) and shut you all men out of it. But we are not going to do so. We know, Sir, that we cannot get along in the world without men and in a like manner we want our honourable brothers here to recognise that women also should be included in the Legislature. You all know what a sobering and steadying influence our women have in every home. Often it is said that it is a joy for you men in the family to be happy when you extend a favour, say a silk sari or a jewel to the women in the house. It is where you are more happy. So I only request you, Sir, and those of you who have got the authority, that when they make a list of candidates for election, they will give a fair share to the women also—at least 20 per cent.

Then about the other things, I am one with those who have expressed opinion in favour of single member constituency as the best system of voting. I also prefer the colour box system because many of the voters are still ignorant. I also voice the wish of everybody here that a committee with the Law Minister as the Chairman and others as members is constituted. One more word—whenever such committees are formed, I want you to remember that half the population are women in the world.

ಶ್ರೀ ಟಿ. ಸುಬ್ರಹ್ಮಣ್ಯಅವರು.—ಈಗ ಸಿಂಗಲ್ ಮೆಂಬರ್ ಕಾರ್ಯಸ್ಥಿಟಿಟ್ಯೂಯೆನ್ಸಿ ಬೇಕೋ ಅಥವಾ ಮಲ್ಟಿ ಮೆಂಬರ್ ಕಾರ್ಯಸ್ಥಿಟಿಟ್ಯೂಯೆನ್ಸಿ ಬೇಕೋ

ಎಂಬ ವಿಚಾರದಲ್ಲಿ ಎರಡರ ಪರವಾಗಿಯೂ ವಾದ ವಿವಾದಗಳು ನಡೆದಿವೆ. ಎರಡರ ಪರವಾಗಿಯೂ ಹೇಳ ಬಹುದು. ಆದರೆ ಸುಮ್ಮನೆ ವಾದಗಳನ್ನು ಸಭೆಯ ಮುಂದಿಡದೆ, ನಮ್ಮ ದೇಶಕ್ಕೆ ತಾತ್ಕಾಲಿಕವಾಗಿ, ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯೇ ಕ್ಷೇಮ ಕರವೆಂಬ ನನ್ನ ಅಭಿಪ್ರಾಯವನ್ನು ಮಾತ್ರ ಸಭೆಗೆ ತಿಳಿ ಸಲಿಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ಓಟುದಾರರಲ್ಲಿ ಬಹುಮಂದಿ ಅನಕ್ಷರಸ್ಥರು. ಆದುದರಿಂದ ಅವರು ಓಟು ಮಾಡುವಾಗ ಯಾವ ಗೊಂದಲವೂ ಆಗದಂತೆ ಮಾಡುವುದು ನಮ್ಮಗಳ ಕರ್ತವ್ಯ. ರಾಜಕೀಯ ಸಮ ಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಎಲ್ಲರಿಗೂ ಓಟು ಕೊಡಬೇಕಾಗುತ್ತದೆ. ಹೀಗಿರುವಾಗ ಓಟುದಾರರಲ್ಲಿ ಓಟುಮಾಡುವಾಗ ಯಾವ ಸಂಶಯಕ್ಕೂ ಕಾರಣವಿಲ್ಲದಿರುವ ಒಂದು ದಾರಿಯನ್ನು ನಾವು ಕಂಡುಹಿಡಿಯ ಬೇಕಾಗುತ್ತದೆ. ಉದಾಹರಣೆಗೆ ಒಂದೇ ಕ್ಷೇತ್ರದಲ್ಲಿ ಒಂದೊಂದು ಪಕ್ಷದವರೂ ನಾಲ್ಕಾರು ಜನರು ಚುನಾವಣೆಗೆ ನಿಂತು, ಹೆಚ್ಚು ಪಕ್ಷಗಳಿದ್ದಲ್ಲಿ ಹತ್ತಾರು ಜನ ಉಮೇದ್ವಾರರಾಗಿ ಸ್ಪರ್ಧಿಸುತ್ತಾರೆ. ಆಗ ಜನರಿಗೆ ಯಾರನ್ನು ಆರಿಸುವುದು ಎಂಬುದು ಓಟುಮಾಡುವಾಗ ಕಷ್ಟವಾಗುತ್ತದೆ. ಮುಖ್ಯವಾಗಿ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕೆಂದರೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯೇ ಉತ್ತಮ. ಬೇರೆ ಯಾವುದನ್ನು ಮಾಡಿದರೂ ಓಟುದಾರ ತಪ್ಪು ಮಾಡುತ್ತಾನೆ. ನನ್ನನ್ನು ಚುನಾವಣೆ ಮಾಡುವುಕ್ಕೆ ಬದಲು ನಮ್ಮ ಗುಂಡಪ್ಪಗೌಡರಿಗೆ ಓಟು ಮಾಡಿಬಿಡಬಹುದು (ನಗು!!) ಇನ್ನೊಂದು ರೀತಿಯೂ ಆಗಬಹುದು, ಆದರೆ ಹಾಗಾ ಗುವುದಿಲ್ಲ, ಹಾಗಾಗದೇ ಇರುವಹಾಗೆ ಗುಂಡಪ್ಪ ಗೌಡರು ಏನಾದರೂ ಮಾಡಿಯೇ ಮಾಡುತ್ತಾರೆ. (ನಗು!!)

Sri B. HUTCHE GOWDA.—About single member constituency, this was not your attitude thirty months ago.

ಶ್ರೀ ಟಿ. ಸುಬ್ರಹ್ಮಣ್ಯಅವರು.—ಮೂವತ್ತು ತಿಂಗ ಳಿಂದೀಚೆಗೆ ನಾನು ನನ್ನ ಅಭಿಪ್ರಾಯವನ್ನು ಬದಲಾ ಯಿಸಿದ್ದೇನೆಂದು ಶ್ರೀ ಹುಚ್ಚೇಗೌಡರು ಹೇಳು ತ್ತಾರೆ. ನನ್ನ ಅಂತರಂಗವನ್ನು ಅರಿಯುವಷ್ಟು ಶಕ್ತಿ ಯನ್ನು ಅವರು ಸಂಪಾದನೆ ಮಾಡಿದ್ದಾರಲ್ಲಾ ಎಂದು ನನಗೆ ಸಂತೋಷ!

ಈಗಿರುವ ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಯನ್ನು ತೆಗೆದು ಹಾಕಿ ಸಿಂಗಲ್ ಮೆಂಬರ್ ಕಾನ್ಸ್ಟಿ ಟ್ಯೂಯನ್ಸಿಯನ್ನು ಮಾಡುವುದರಿಂದ ವಿರೋಧ ಪಕ್ಷದವರಿಗೂ ಒಳ್ಳೆಯದೆಂಬುದನ್ನು ತೋರಿಸುತ್ತೇನೆ. ಒಂದು ಕ್ಷೇತ್ರದಲ್ಲಿ ಎರಡು ಮೂರು ಸ್ಥಾನಗಿಳಿದ್ದು ಅನೇಕರು ಚುನಾವಣೆಗೆ ನಿಂತು ಅದರಲ್ಲಿ ಒಂದು ದೊಡ್ಡ ಪಕ್ಷದ ಪರವಾಗಿ ನಿಂತವರಿದ್ದರೆ ಪಕ್ಷವು ತೀವ್ರ ಪ್ರಯತ್ನ ನಡೆಸಿದರೆ ಮತ್ತಾರಿಗೂ ಚುನಾಯಿತರಾ ಗಲು ಅವಕಾಶವೇ ಸಿಕ್ಕುವುದಿಲ್ಲ. ನಮ್ಮ ವಿರೋಧ ಪಕ್ಷದವರೂ ಕೂಡ ಸುವ್ಯವಸ್ಥಿತವಾದ ಪಕ್ಷವನ್ನು ಕಟ್ಟಲಿ ಎಂಬ ಉದ್ದೇಶದಿಂದ ನಾವು ಹೇಳುತ್ತಿದ್ದೇವೆ. ಅವರ ಹಿತದೃಷ್ಟಿಯಿಂದಲೇ ಏಕ ಸದಸ್ಯಕ್ಷೇತ್ರವನ್ನು ಅವರು ಸ್ವಾಗತಿಸಲಿ ಎಂದು ಅವರನ್ನು ಕೇಳಿಕೊಳ್ಳುತ್ತೇನೆ.

ಬಣ್ಣದ ಪೆಟ್ಟಿಗೆ ಪದ್ಧತಿಯ ವಿಚಾರದಲ್ಲಿ ಏನೂ ಸಂದೇಹವೇ ಇಲ್ಲ. ಎಲ್ಲರಿಗೂ ಗೊತ್ತಿರುವ ವಿಚಾರ, ಭಿನ್ನಾಭಿಪ್ರಾಯವಿಲ್ಲ.

ಇನ್ನು ಹೆಣ್ಣುಮಕ್ಕಳ ವಿಚಾರದಲ್ಲಿ ನನ್ನ ಅಭಿಪ್ರಾಯ ವನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಈ ಸಂದರ್ಭ ದಲ್ಲಿ ಒಂದೇ ಮಾತು ಹೇಳುತ್ತೇನೆ. ನಮ್ಮ ತಾಯಿಯೂ ಹೆಣ್ಣು ಮಗಳು. ಅವರ ತಾಯಿಯೂ ಹೆಣ್ಣುಮಗಳು. ಗಂಡಸರೆಲ್ಲರೂ ತಾಯಿಯನ್ನು ಪ್ರೀತಿಸುತ್ತಾರೆ, ಹೆಣ್ಣನ್ನು ಪ್ರೀತಿಸುತ್ತಾರೆ. ಆದರೆ ಇದುವರೆಗೆ ನಮ್ಮಲ್ಲಿ ಹೆಣ್ಣು ಮಕ್ಕಳು ರಾಜಕೀಯದಲ್ಲಿ ಹೆಚ್ಚು ಮುಂದೆ ಬರಲಿಲ್ಲ. ನಾಳೆ ನಡೆಯುವ ಚುನಾವಣೆ ಗಳಲ್ಲಿ ನಮ್ಮ ಸೋದರಿಯರಾದ ಶ್ರೀಮತಿ ರತ್ನಮ್ಮ ಬಜಾಕ್‌ರವರು ಉಮೇದುವಾರರಾಗಿ ನಿಂತರೆ ಆ ಕ್ಷೇತ್ರದಲ್ಲಿ ನಾನೂ ನಿಂತಿದ್ದರೂ ಕೂಡ ನನ್ನ ಓಟುಗಳನ್ನು ಅವರಿಗೇ ಕೊಟ್ಟು ಬೆಂಬಲ ಕೊಡುತ್ತೇನೆ. ಮಹಿಳೆಯರಿಗೂ ಬೇಕಾದಷ್ಟು ಅವಕಾಶವುಂಟು. ಅವರು ಸಂಖ್ಯೆಯಲ್ಲಿ ಗಂಡನರಿಗಿಂತ ಹೆಚ್ಚಿರುವುದರಿಂದ ಎಲ್ಲ ಕ್ಷೇತ್ರಗಳಲ್ಲೂ ಎಲ್ಲ ಸ್ಥಾನಗಳನ್ನು ಅವರೇ ತೆಗೆದುಕೊಳ್ಳಬಹುದು. ಹೆಣ್ಣಾಗಲೀ ಗಂಡಾಗಲೀ ಯಾರು ರಾಜಕೀಯ ಕ್ಷೇತ್ರದಲ್ಲಿ, ರಾಜಕಾರಣದಲ್ಲಿ ಸಮರ್ಥರೋ ಅವರಿಗೆ ಅವಕಾಶವಿದ್ದೇ ಇದೆ. ನಮ್ಮ ದೇಶದ ರಾಜ್ಯಾಂಗದಲ್ಲೇ ಸಮಾನಾವಕಾಶ ಕಲ್ಪಿಸಿದ್ದಾರೆ. ಆದ್ದರಿಂದ ಒಟ್ಟಿನಲ್ಲಿ ಏಕ ಸದಸ್ಯ ಕ್ಷೇತ್ರ ಗಳೇ ನಮ್ಮ ದೇಶಕ್ಕೆ ಕ್ಷೇಮಕರವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿರತಕ್ಕ ಈ ಪ್ರಶ್ನೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶ ವಿದೆ ಎಂಬುದು ಇದುವರೆಗೆ ಸಭೆಯ ಮಾನ್ಯ ಸದಸ್ಯರು ಗಳು ಮಾಡಿದ ಭಾಷಣಗಳಿಂದ ಅರ್ಥವಾಗುತ್ತದೆ. ಏಕ ಸದಸ್ಯ ಕ್ಷೇತ್ರವಿರಬೇಕೆ ಅಥವಾ ಬಹು ಸದಸ್ಯ ಕ್ಷೇತ್ರವಿರಬೇಕೆ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರಲು ಬೇಕಾದಷ್ಟು ಅವಕಾಶವೇನೋ ಇದೆ. ಇಂಗ್ಲಿಷಿನಲ್ಲಿ ಹೇಳುವಹಾಗೆ much could be said on both sides. ಆದರೆ ಯಾವುದಾದರೊಂದು ಇಂತಹ ಕಠಿಣ ಸಮಸ್ಯೆ ನನ್ನ ಮುಂದೆ ಬಂದಾಗ ನಾನು ಒಂದೇ ಒಂದು ಮಹಾ ಮಂತ್ರವನ್ನು ನನ್ನ ಮುಂದೆ ಇಟ್ಟುಕೊಳ್ಳುತ್ತೇನೆ. ಮಹಾತ್ಮಾ ಗಾಂಧಿ ಯವರು ಒಂದು ಮಾರ್ಗವನ್ನು ತೋರಿ ಕೊಟ್ಟಿದ್ದಾರೆ. ಯಾವುದಾದರೂ ಕಷ್ಟ ಸಮಸ್ಯೆ, ತೊಡಕಾದ ಸಮಸ್ಯೆ ಬಂದಾಗ ಒಂದೇ ಒಂದು ಮಹಾ ಮಂತ್ರವನ್ನು (Talisman) ನಿಮ್ಮ ಮುಂದೆ ಇಟ್ಟುಕೊಳ್ಳಿ ಎಂದು ಅವರು ಹೇಳಿದ್ದಾರೆ. ಅದೇನೆಂದರೆ, ನೀವು ಹಾಕತಕ್ಕ ಹೆಜ್ಜೆ ದೇಶದ ಹಿತದೃಷ್ಟಿಯಿಂದ, ಬಹು ಸಂಖ್ಯೆಯ ಜನರ ಹಿತದೃಷ್ಟಿಯಿಂದ ಒಳ್ಳೆಯದೆ ಎಂಬ ಪ್ರಶ್ನೆ ಯನ್ನು ಹಾಕಿಕೊಳ್ಳಿ, ಎಂದರೆ, put to yourself this question whether it helps the largest number in the country or not, ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಮಸ್ಯೆ ಯನ್ನು ಬಗೆಹರಿಸಬೇಕೆಂದು ನನ್ನ ಅಭಿಲಾಷೆ. ಈ ಸಭೆಗೆ ಚುನಾವಣೆಯಾಗಿ ಬರತಕ್ಕ ವಿಚಾರಕ್ಕೆ ಮಾತ್ರ ಹೆಚ್ಚಿನ ಪ್ರಾಧಾನ್ಯತೆಯನ್ನು ಕೆಲವರು ಕೊಟ್ಟಿದ್ದಾರೆ. ಈ ಸಭೆಗೆ ಚುನಾವಣೆಯಾಗತಕ್ಕ ಪ್ರಶ್ನೆಯೊಂದೇ ಅಲ್ಲ, ಈಗ ಈ ಸಭೆಯ ಮುಂದಿರುವುದು ಎಂದು ವಿನಯ ದಿಂದ ಹೇಳುತ್ತೇನೆ. ಏಕೆಂದರೆ, ನಾವು ಚುನಾವಣೆ ಯಾಗತಕ್ಕ ಕಾಲದಲ್ಲಿ ಓಟ್ಟು ದೇಶದ ಪ್ರಾತಿನಿಧ್ಯ ವಹಿಸಿ ಬರಬೇಕು. ಹೀಗಿರುವಾಗ ನಾವು ಯಾವ ಕ್ಷೇತ್ರದಿಂದ ಚುನಾಯಿತರಾಗಿ ಬರಬಹುದು, ಯಾವುದು ಇದಕ್ಕೆ ಸುಲಭ ಮಾರ್ಗ ಎಂಬುದು ಮಾತ್ರ ನಮ್ಮ ದೃಷ್ಟಿಯಲ್ಲಿರಬಾರದು. ದೇಶವನ್ನು ಕ್ಷೇತ್ರಗಳಾಗಿ ವಿಭಜನೆ ಮಾಡಬೇಕಾದರೆ ಬಹು ಸದಸ್ಯ ಕ್ಷೇತ್ರಗಳಾಗಿ

ಮಾಡುವುದು ಒಳ್ಳೆಯದೇ ಅಥವಾ ಏಕ ಸದಸ್ಯ ಕ್ಷೇತ್ರಗಳಾಗಿ ಮಾಡುವುದು ಒಳ್ಳೆಯದೆ ಎಂಬ ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ. ಬಹು ಸದಸ್ಯ ಕ್ಷೇತ್ರಗಳನ್ನು ಮಾಡುವುದು ಒಳ್ಳೆಯದೆಂಬ ವಾದಕ್ಕೆ ಕೊಟ್ಟ ಪ್ರಾಮುಖ್ಯ ಕಾರಣವೇನೆಂದರೆ ಅಲ್ಪಸಂಖ್ಯಾತ ಹಿತ ರಕ್ಷಣೆ. ನಿಜ, ತಾತ್ಕಾಲಿಕವಾಗಿ ಇದು ನಮಗೆ ಒಳ್ಳೆಯ ದೆಂದು ಕಾಣಬಹುದು. ಇದರಲ್ಲಿ ನಿಜಾಂಶವಿದೆಯೆಂದೂ ಕಾಣಬಹುದು. ಆದರೆ ನಾನು ಮೊದಲೇ ಸೂಚಿಸಿದ ಹಾಗೆ ಇಂತಹ ಜಟಿಲ ಸಮಸ್ಯೆ ಬಂದಾಗ ಇದನ್ನು ಒಟ್ಟು ದೇಶದ ಹಿತದೃಷ್ಟಿಯಿಂದ ಬಗೆಹರಿಸಬೇಕಾಗಿದೆ. ಈ ದೃಷ್ಟಿಯಿಂದ ಇದನ್ನು ಪರೀಕ್ಷಿಸಿ ನೋಡುವುದಾದರೆ, ತಾತ್ಕಾಲಿಕವಾಗಿ ಈ ಬಹು ಸದಸ್ಯ ಕ್ಷೇತ್ರ ಪದ್ಧತಿಯಿಂದ ಅಲ್ಪಸಂಖ್ಯಾತ ಕೋಮಿನವರ ಹಿತರಕ್ಷಣೆ ಯಾಗಬಹುದೆಂದು ತೋರಬಹುದಾದರೂ ಇದರಲ್ಲಿ ಬಹಳ ದೊಡ್ಡ ಲೋಪದೋಷಗಳಿವೆ. ಇದು ವಿಷ ಪೂರಿತವಾದದ್ದು ಎಂದು ಖಂಡಿತವಾಗಿ ಹೇಳುತ್ತೇನೆ. ಹಿಂದೆ ಮೈನಾರಿಟಿ ಹಿತದೃಷ್ಟಿಯೆಂದು ಹೇಳಿಹೇಳಿ, ನಮ್ಮ ದೇಶವನ್ನೇ ಕಳೆದುಕೊಂಡೆವು. ಪಾಕಿಸ್ತಾನ ಉತ್ಪನ್ನವಾದುದಕ್ಕೆ ಮುಖ್ಯ ಕಾರಣ ಈ ರೀತಿಯ ಮೈನಾರಿಟಿ ಹಿತದೃಷ್ಟಿ. ಮೈನಾರಿಟಿ ಹಿತದೃಷ್ಟಿಯಿಂದ ಮುಸ್ಲಿಂ ಲೀಗ್ ಸ್ಥಾಪನೆ ಆಯಿತು. ಅನಂತರ ಅದು ಯಾವರೀತಿ ಪರಿಣಮಿಸಿತು. ಅದರಿಂದ ಯಾವ ಭಯಂಕರ ಪರಿಣಾಮ ದೇಶದಲ್ಲಿ ಆಯಿತು ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಅವನ್ನು ವಿವರಿಸಿ ಹೇಳ ಬೇಕಾದ್ದು ಅನಾವಶ್ಯಕ. ಉತ್ತರ ದೇಶದಲ್ಲಿ ಅಲ್ಪ ಸಂಖ್ಯಾತರ ಪ್ರಶ್ನೆ ಎಂದರೆ ಹಿಂದೂ ಮುಸ್ಲಿಂ ಪ್ರಶ್ನೆ. ಇದನ್ನು ಯಾವುದೋ ಒಂದು ವಿಧದಲ್ಲಿ ಬಗೆಹರಿಸಿದ್ದಾರೆಂದು ಹೇಳಬಹುದು. ಪಾಕೀಸ್ತಾನ ಬೇರೆಯಾಗಿದ್ದರಿಂದ ಉತ್ತರ ದೇಶದಲ್ಲಿ ಅಲ್ಪಸಂಖ್ಯಾತರ ಪ್ರಶ್ನೆ ಬಗೆಹರಿದಿದೆ. ಆದರೆ ದಕ್ಷಿಣ ದೇಶದಲ್ಲಿ ಆ ಪ್ರಶ್ನೆ ಇಲ್ಲ. ಇಲ್ಲಿ ಇರುವುದು ಬ್ರಾಹ್ಮಣ, ಬ್ರಾಹ್ಮಣೇತರ ಪ್ರಶ್ನೆ. ಬ್ರಾಹ್ಮಣೇತರರಲ್ಲೂ ಬೇಕಾದಷ್ಟು ಪಂಗಡಗಳು ಇವೆ. ಬ್ರಾಹ್ಮಣರಲ್ಲೂ ಸಣ್ಣ ಸಣ್ಣ ಪಂಗಡಗಳಿವೆ. ಮುಖ್ಯವಾದ ಕೋಮುಗಳು ಎಂದರೆ ಬ್ರಾಹ್ಮಣರು ಬ್ರಾಹ್ಮಣೇತರರು. ಈಗ ಈ ಭಾವನೆ ನಮ್ಮ ದಕ್ಷಿಣದಿಂದ ಉತ್ತರಕ್ಕೂ ಹರಡತಕ್ಕ ಸೂಚನೆ ಕಂಡುಬರುತ್ತಿದೆ. ಇದು ಬಹಳ ದುರಾದೃಷ್ಟದ ವಿಚಾರ. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಿಂದ ಅಲ್ಪಸಂಖ್ಯಾತರ ಹಿತರಕ್ಷಣೆ ಆಗಬಹುದು. ಆದರೆ ಒಂದು ಮಾತನ್ನು ಅವರಿಗೆ ಬಿನ್ನೈಸಿಕೊಳ್ಳಬೇಕಾಗಿದೆ. ದೇಶದ ಹಿತದೃಷ್ಟಿಯಿಂದ ತಾತ್ಕಾಲಿಕವಾದ ಈ ಅನುಕೂಲ ಬೇಕಾಗಿಲ್ಲವೆಂದು ಹೇಳಿ, ಅಲ್ಪಸಂಖ್ಯಾತರು ಧೈರ್ಯಮಾಡಿ ನಮಗೆ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಬೇಡ, ನಾವು ಬದುಕಬೇಕಾಗಿದ್ದರೆ ಬಹುಸಂಖ್ಯಾತರ ಆಶ್ರಯದಿಂದ, ಸಹಾನುಭೂತಿಯಿಂದ ಬದುಕಬೇಕೇ ಹೊರತು ಕೇವಲ ಶಾಸನದ ಸಹಾಯದಿಂದ ಆ ರೀತಿ ಶಾಸನದ ರಕ್ಷಣೆಯನ್ನು ಇಟ್ಟುಕೊಂಡು ಬದುಕ ಬೇಕೆಂಬ ಭಾವನೆಯನ್ನು ಬಿಟ್ಟುಬಿಡುವುದು ಒಳ್ಳೆಯ ದೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ಇಂಡಿಯನ್ ಕ್ರಿಶ್ಚಿಯನರು ಈ ರೀತಿ ಶಾಸನ ರಕ್ಷಣೆ ಬೇಕಾಗಿಲ್ಲವೆಂದು ಹೇಳಿದ್ದಾರೆ. ಹೀಗಿರುವಾಗ ಇತರ ಅಲ್ಪಸಂಖ್ಯಾತ ಪಂಗಡದವರೂ ಸಹ ಅದೇ ರೀತಿ ದೇಶದ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನಮಗೆ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಕೊಡುವುದರಿಂದ ತಾತ್ಕಾಲಿಕವಾಗಿ ಅನುಕೂಲವಾಗುವ ಹಾಗಿದ್ದರೂ ಅದು ಬೇಕಾಗಿಲ್ಲ. ನಾವೂ ಸಹ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಲ್ಲೇ ಸ್ಪರ್ಧಿಸುತ್ತೇವೆ. ಇದರಿಂದ ದೇಶದ ಹಿತಕ್ಕೆ ಅನುಕೂಲವಾಗುತ್ತದೆಂದು ಹೇಳಿ ಧೈರ್ಯಮಾಡಿ ಅದಕ್ಕೆ ಬೆಂಬಲ ಕೊಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

ರಾಜ್ಯಾಂಗದಲ್ಲೂ ಕೂಡ ಷೆಡ್ಯೂಲ್ ಕ್ಯಾಸ್ಟ್‌ಗೆ ಕೇವಲ 10 ವರ್ಷಗಳ ಕಾಲ ಮಾತ್ರ ರಕ್ಷಣೆ ಕೊಟ್ಟಿದ್ದಾರೆ. ಆ ಹತ್ತು ವರ್ಷ ಆದನಂತರ ಅದನ್ನು ಕೂಡ ತೆಗೆದುಹಾಕಬೇಕೆಂದು ಹೇಳಿದ್ದಾರೆ. ಆದ್ದರಿಂದ ಹತ್ತು ವರ್ಷಗಳಾದ ಮೇಲೆ ನಮ್ಮ ದೇಶದಲ್ಲಿ ಯಾವ ರೀತಿಯಾಗಿಯೂ ಜಾತಿ ಮತ ವಿಭಜನೆ ಇರಬಾರದೆಂಬುದು ನಮ್ಮ ರಾಜ್ಯಾಂಗದ ಗುರಿಯಾಗಿದೆ. ಇದನ್ನು ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಜಾತಿ ಮತ ವಿಭಜನೆಯಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಹಾನಿ ತಟ್ಟಿದೆ. ಇನ್ನುಮುಂದಾದರೂ ಜಾತಿ ಮತ ಭಾವನೆಯನ್ನು ಬಿಟ್ಟು ರಾಜಕೀಯ ಪಾರ್ಟಿಗಳನ್ನು ಕಟ್ಟುವುದಕ್ಕೆ ಪ್ರಯತ್ನಮಾಡುವುದು ಉತ್ತಮವಾಗಿದೆ. ಒಂದು ಮಾತಿನಲ್ಲಿ ಹೇಳಬೇಕಾಗಿದ್ದರೆ ಅಲ್ಪಸಂಖ್ಯಾತರಿಗೆ ತಾತ್ಕಾಲಿಕವಾಗಿ ತೊಂದರೆಯಾದರೂ ಚಿಂತೆಯಿಲ್ಲ. ದೇಶದ ಹಿತದೃಷ್ಟಿಯಿಂದ ಅವರೂ ಸಹ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಗೆ ಬೆಂಬಲ ಕೊಡುವುದು ಯೋಗ್ಯವಾದದ್ದೆಂದು ನನ್ನ ಖಚಿತ ಅಭಿಪ್ರಾಯ.

ಇತರ ವಿಚಾರಗಳೆಲ್ಲಾ ಬಹಳ ಸಣ್ಣ ವಿಚಾರಗಳು. ಅವುಗಳನ್ನು ಮುಂದೆ ಬೇಕಾದಹಾಗೆ ತೀರ್ಮಾನ ಮಾಡಿಕೊಳ್ಳಬಹುದು. ಈಗಾಗಲೇ ಈ ವಿಷಯಗಳನ್ನೆಲ್ಲಾ ಪರಿಶೀಲಿಸುವುದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಬೇಕೆಂಬ ಸೂಚನೆ ಬಂದಿದೆ. ಅದನ್ನು ಅಂಗೀಕಾರ ಮಾಡಿದ ಪಕ್ಷದಲ್ಲಿ ಆ ಸಮಿತಿಯವರು ಈ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ವಿಚಾರ ಮಾಡಬಹುದು. ಆ ಸಮಿತಿಯವರು ಕ್ಷೇತ್ರ ವಿಭಜನೆ ಮಾಡತಕ್ಕ ಕಾಲದಲ್ಲಿ ವಿಶಾಲ ದೃಷ್ಟಿಯಿಂದ ಯಾವ ರೀತಿ ವಿಭಜನೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ದೇಶದ ಹಿತದೃಷ್ಟಿಯಿಂದ ಕಾನ್ಸ್ಟಿಟ್ಯುಯೆನ್ಸಿ ರಚನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಲ್ಲಿ ನಾವು ಏನು ಮಾಡಿದರೂ ಇದೇ ಕಡೆಯು ತೀರ್ಮಾನ ಎಂದು ನನಗೆ ತೋರುವುದಿಲ್ಲ. ಏಕೆಂದರೆ ನಾವು ಏನೇ ತೀರ್ಮಾನ ಮಾಡಿದರೂ ಅದು ಅಖಿಲ ಭಾರತದ ನೀತಿಗನುಸಾರವಾಗಿರಬೇಕು. ಒಂದೊಂದು ಪ್ರಾಂತ್ಯಕ್ಕೆ ಬೇರೆ ಬೇರೆಯಾಗಿ ತೀರ್ಮಾನ ಮಾಡುವುದು ಸಾಧುವಾಗಿ ತೋರುವುದಿಲ್ಲ.

ಕೇಂದ್ರದಲ್ಲಿ ಏನು ತೀರ್ಮಾನಮಾಡುತ್ತಾರೋ ಅದನು ಸಂಸ್ಥಾನಗಳವರೂ ಅನುಸರಿಸಿಕೊಂಡು ನಡೆಯಬೇಕಾಗುವುದು. ಆದ್ದರಿಂದ ನಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದಾದ ಹಕ್ಕು ನಮಗೆ ಇದೆಯೇ ಹೊರತು ಕಟ್ಟಕಡೆಯ ತೀರ್ಮಾನ ಅವರದು. ಕೇಂದ್ರದಲ್ಲಿ ಕೊಟ್ಟಿರತಕ್ಕ ಸೂಚನೆಯನ್ನು ನೋಡಿದರೆ ಅಲ್ಲೂ ಕೂಡ ಸಿಂಗಲ್‌ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಗೇ ಸ್ವಲ್ಪ ಜಾಸ್ತಿ ಬೆಂಬಲಕೊಡುತ್ತಿದ್ದಾರೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಆ ದೃಷ್ಟಿಯಿಂದಲೂ ಮತ್ತು ದೇಶದ ಹಿತದೃಷ್ಟಿಯಿಂದಲೂ ನಮ್ಮ ಮಿತ್ರರಾದ ಜನಾಬ್ ಹನೀಫ್‌ರವರು ಹೇಳಿದಂತೆ ನಾವು ಇನ್ನು ಮುಂದೆ ಅಲ್ಪ ಸಂಖ್ಯಾತರು, ಬಹು ಸಂಖ್ಯಾತರು ಎಂಬ ಬೇಧಭಾವಗಳನ್ನೆಲ್ಲಾ ಮರೆತು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಗೆ ಬೆಂಬಲ ಕೊಡು

ವುದು ಈ ಸಭೆಗೆ ಯೋಗ್ಯವಾದದ್ದೆಂದು ನನ್ನ ಅಭಿಪ್ರಾಯ.

*ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೇ, ಚುನಾವಣಾಕ್ಷೇತ್ರಗಳನ್ನು ಯಾವ ರೀತಿಯಾಗಿ ವಿಂಗಡಿಸಬೇಕೆಂಬ ಪ್ರಶ್ನೆ ನಿರ್ಧರಿಸುವುದಕ್ಕಾಗಿ ಈ ಸಭೆಯನ್ನು ಈಗ ಕರೆದಿದ್ದಾರೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಇರಬೇಕೇ ಅಥವಾ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಇರಬೇಕೇ ಎಂಬ ವಿಷಯವಾಗಿ ಅನೇಕ ಮಾನ್ಯ ಮಿತ್ರರು ಅವರ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಭಾರತದಲ್ಲಿ ಇದೇ ಮೊದಲನೆಯ ಸಾರಿ ವಯಸ್ಕರ ಮತದಾನ ಪದ್ಧತಿಯಂತೆ ಸುಮಾರು 22 ಕೋಟಿ ಜನರಿಗೆ, ಹೆಂಗಸರಿಗೂ ಸೇರಿ ಓಟುಮಾಡತಕ್ಕ ಹಕ್ಕು ಬಂದಿದೆ. ಇಲ್ಲಿನ ಓಟರುಗಳೆಂದರೆ ಸುಮಾರು ಅಮೆರಿಕಾ ಮತ್ತು ಕೆನಡಾ ದೇಶದ ಜನಸಂಖ್ಯೆಯಷ್ಟಾಗುತ್ತದೆ, ಅಷ್ಟು ಜನ ಓಟರುಗಳಾಗುತ್ತಾರೆ. ಇಂಗ್ಲೆಂಡಿನಲ್ಲಿ ಹೆಂಗಸರಿಗೆ ಓಟಿನ ಹಕ್ಕು ಬರಬೇಕಾದರೆ ಎಷ್ಟೋ ವರ್ಷ ಆಯಿತು. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಅನುಕೂಲವೇ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಅನುಕೂಲವೇ ಎಂದರೆ ನನ್ನ ಅಭಿಪ್ರಾಯದಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿನೇ ಬಹಳ ಅನುಕೂಲ. ನಾವು ಒಂದು ಪ್ರತಿ ಪಕ್ಷಕ್ಕೆ ಅನಾನುಕೂಲವಾಗಬೇಕಾದರೆ ಕೇವಲ 19 ಕ್ಷೇತ್ರಗಳನ್ನಾಗಿ ಮಾಡಿಕೊಂಡರೆ ಅಥವಾ ಇಡೀ ದೇಶವನ್ನೇ ಒಂದು ದೊಡ್ಡ ಕ್ಷೇತ್ರವನ್ನಾಗಿ ಮಾಡಿಕೊಂಡರೆ ಮೆಜಾರಿಟಿ ಪಾರ್ಟಿ ಏನಃ ಇನ್ನಾವ ಪಾರ್ಟಿಯೂ ಬರುವುದಕ್ಕೆ ಅವಕಾಶವಾಗುವುದಿಲ್ಲ. ಯಾವ ತರಹ ಪದ್ಧತಿಯನ್ನನುಸರಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂಬುದನ್ನು ಯೋಚನೆಮಾಡಿ ಕ್ಷೇತ್ರವಿಭಜನೆಮಾಡಬೇಕಾಗುತ್ತದೆ. ಈಗ ಪೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ 19 ಸ್ಥಾನಗಳನ್ನಿಟ್ಟಿರುವುದಕ್ಕೆ ಕಾರಣ ವಿಷ್ಟೆ. ಯಾವ ತಾಲ್ಲೂಕನ್ನು ತೆಗೆದುಕೊಂಡರೂ ಒಂದೇ ಜಾತಿಯವರು ಇರುವುದಿಲ್ಲ. ಅನೇಕ ಜಾತಿಗಳವರು ಸೇರಿಕೊಂಡಿರುತ್ತಾರೆ. ಈ ರೀತಿ ಅವರಿಗೆ ರಕ್ಷಣೆ ಕೊಟ್ಟಿರುವುದು 10 ವರ್ಷಗಳವರೆಗೆ ಮಾತ್ರ. ಅನಂತರ ಅದು ಹೊರಟು ಹೋಗುತ್ತದೆ.

ಇದರ ವಿಷಯದಲ್ಲಿ ನಾವು ಎಷ್ಟು ಚರ್ಚೆಮಾಡಿದರೂ ಏನೂ ಬೇರೆ ಬದಲಾವಣೆಗಳನ್ನು ಸೂಚಿಸುವುದು ಕೂಡ ಸಾಧುವಲ್ಲವೆಂದು ಕಾಣುತ್ತದೆ. ಏಕೆಂದರೆ ನಾವೇನು ಬೇರೆ ಹೇಳಿದರೂ ಭಾರತ ಸರ್ಕಾರದವರು ಅದನ್ನು ಒಪ್ಪಿಕೊಳ್ಳುವುದಿಲ್ಲವೆಂದಿಟ್ಟುಕೊಳ್ಳಬಹುದು. ಸಿಂಗರ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯೆಂಬುದು ಇಲ್ಲೇ ಅಲ್ಲ. ಅಮೆರಿಕಾ, ಇಂಗ್ಲೆಂಡ್ ಮುಂತಾದ ಅನೇಕ ದೇಶಗಳಲ್ಲಿ ಈಗಲೂ ಜಾರಿಯಲ್ಲಿರತಕ್ಕುದಾಗಿದೆ. ಇದರಿಂದ ಖರ್ಚು ಬಹಳ ಕಡಿಮೆ. ನಮ್ಮ ಕ್ಷೇತ್ರದ ಮತದಾರರುಗಳೊಡನೆ ಹೆಚ್ಚಿನ ಸಂಪರ್ಕವಿರುವುದಕ್ಕೆ ಅವಕಾಶವಿದೆ. ಇದಕ್ಕೆ ಬದಲು ಮಲ್ಟಿಮೆಂಬರ್ ಕ್ಷೇತ್ರಗಳನ್ನಿಟ್ಟುಕೊಂಡಿದ್ದರೆ, ಒಬ್ಬನು ಯಾವ ಕ್ಷೇತ್ರದಲ್ಲೂ ಕೆಲಸಮಾಡದೇ ಇದ್ದರೂ ಆತನಿಗೆ ಓಟು ಬರುವ ಅವಕಾಶವಿರುತ್ತದೆ. ಹೇಗೆಂದರೆ, 10–15 ಜನರ ಒಂದು ಪಟ್ಟಿಯಿದ್ದರೆ ನಾವೇ ಕೆಲಸ ಮಾಡದೇ ಇದ್ದರೂ ಇನ್ನೊಬ್ಬರು ಯಾರಾದರೂ ಕೆಲಸ ಮಾಡುವುದರಿಂದಲೂ ನಮಗೆ ಓಟು ಬರಬಹುದು. ಅಲ್ಲದೆ, ಒಂದು ವೇಳೆ ಸಿಂಗರ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಿಂದ ಯಾವನೊಬ್ಬ ಚುನಾಯಿತ ಸದಸ್ಯನೂ ತನ್ನ ಪ್ರದೇಶವೇ ಬೇರೆ, ದೇಶವೇ ಬೇರೆ ಎಂಬ ಭಾವನೆಯಿಂದ ಕೆಲಸಮಾಡುವುದಿಲ್ಲವೆಂದು ಭರವಸೆಯಿಟ್ಟುಕೊಳ್ಳಬಹುದು. ಚುನಾವಣೆಯಾದ ತರುವಾಯ ಅವನೇನಿದ್ದರೂ ಓಟ್ಟು ದೇಶದ ಹಿತದೃಷ್ಟಿಯಿಂದಲೇ ಕೆಲಸಮಾಡುತ್ತಾನೆ.

ಆಮೇಲೆ, ಚುನಾವಣೆ ನಡೆಸುವ ವಿಧಾನದಲ್ಲಿ ಬಣ್ಣದ ಪೆಟ್ಟಿಗೆಗಳನ್ನು ಇಟ್ಟುಕೊಳ್ಳುವ ರೀತಿಯೇ ಅತ್ಯುತ್ತಮವಾದ ಪದ್ಧತಿಯೆಂದು ನನಗೆ ತೋರುತ್ತದೆ. ಇದರಿಂದ ಓಟರುಗಳು ತಮಗೆ ಕೊಟ್ಟಿರುವ ಓಟಿಂಗ್ ಕಾಗದವನ್ನು ಮಾರಾಟಮಾಡಿಕೊಳ್ಳುವ ಸಂಭವವೂ ಇದೆಯೆಂದು ಹೇಳಿದರು. ಹಾಗೆ ನೋಡುವುದಾದರೆ, ಯಾವ ಕ್ರಮವನ್ನನುಸರಿಸಿದರೂ ಏನಾದರೂ ಒಂದು ಮಾಡಲು ಸಾಧ್ಯ. ಬೇಕಾದರೆ ಒಂದು ರೀತಿಯಲ್ಲಿ ಈ ಕಷ್ಟವನ್ನು ತಪ್ಪಿಸುವ ಮಾರ್ಗವನ್ನೂ ಯೋಚನೆ ಮಾಡೋಣ. ಓಟು ಮಾಡಲು ಬಂದವನಿಗೆ ಹೆಬ್ಬೆರಳಿಗೆ ಏನಾದರೂ ಬಣ್ಣವನ್ನು ಹಚ್ಚಿ ಕಳುಹಿಸಿ, ಅವನು ಮತ್ತೆ ಓಟುಮಾಡಲು ಬಂದರೆ ಗುರುತು ಹಿಡಿಯುವಂತೆ ಮಾಡಿ ಶಿಕ್ಷೆ ವಿಧಿಸಲು ಏರ್ಪಾಡುಮಾಡಬಹುದು. ಅಲ್ಲದೆ, 24,000, 25,000 ಪೋಟರುಗಳಿರುವ ಕಡೆ ಎಲ್ಲರಿಗೂ ಲಂಚೆಗಳನ್ನು ಕೊಟ್ಟು ಓಟುಗಳನ್ನು ಕೊಂಡುಕೊಳ್ಳುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಅದೇನೂ ನಡೆಯಲಾರದು.

ಇದನ್ನೆಲ್ಲಾ ಸಮಿತಿಯವರು ಬಹಳ ವಿಚಾರಿಕೆಯಿಂದ ಕ್ಷೇತ್ರ ವಿಭಜನೆ ಮಾಡಬೇಕೆಂದು ಹೇಳುತ್ತೇನೆ. ಅದರಲ್ಲಿ ಪ್ರತಿಯೊಬ್ಬರೂ ದೇಶದಹಿತದೃಷ್ಟಿಯಿಂದಮಾಡಿಯೇ ಮಾಡುತ್ತಾರೆಂದು ನಾವು ಭರವಸೆಯಿಟ್ಟುಕೊಳ್ಳಬಹುದು. ವಿರೋಧ ಪಕ್ಷದ ಸದಸ್ಯರೂ ಅದರಲ್ಲಿ ಸೇರಿದ್ದಾರೆ. ಆದ್ದರಿಂದ ಏನೂ ಸಂಶಯಪಡಬೇಕಾದ್ದಿಲ್ಲ. ಇಷ್ಟು ಹೇಳಿ ಶ್ರೀ ವೀರಪ್ಪನವರು ತಂದಿರುವ ತಿದ್ದುಪಡಿಯನ್ನು ನಾನು ಸಮರ್ಥಿಸುತ್ತೇನೆ.

Sri K. CHENGALARAYA REDDY.—I suggest that the discussion may be continued to-morrow also for about one hour.

Mr. SPEAKER.—Yes. So, we meet tomorrow at 1 o'clock.

The Assembly adjourned at Four Minutes past Six of the Clock to meet again at One of the Clock on Friday 1st September 1950.

WD 2204—GPB—550—3-10-50.